"Service of the Poor is the Service of God"

# "ಬಡವರ ಬಂಧು"

## ಮಂಗಳೂರು.

"BADAVARA BANDHU or THE FRIEND OF THE POOR"
MANGALORE.

A HIGH CLASS CANARESE MONTHLY.

ಪುಷ್ಪ ೨. NOVEMBER, 1933. ಎಸಳು ೫.

*Editor:*—Mangalore Jarappa. *Associate Editor:*—B. Narsappa.

ದಿನದಿನವು ಇನನುದಯವಾಗುವಂ, ಪೋಗುವಂ;
ದಿನದಿನವು ಹಿಮಕರಂ ಮೂಡುವಂ, ಬಾಡುವಂ;
ದಿನದಿನವು ಮಾರುತಂ ಆಡುವಂ ಓಡುವಂ;
ಮನ ಮಾತ್ರ ಕೊರಗುತಿದೆ ಜಡವಾಗಿ ಬಡವಾಗಿ!

ಉದಯಲಿ ಕುಸುಮ ತಾನರಳುವುದು ತೆರಳುವುದು;
ಮುದದಿಂದ ಬರುವುದಾ ಮಧುಮಾಸ, ವಿಧಿಹಾಸ;
ಪದಾಳದಿಂ ಪಕ್ಷಿಗಳು ಪಾಡುವುವು, ಬೇಡುವುವು;
ಎದೆಯ ಸಂತಸ ಮಾತ್ರ ಕೊರಗುತಿದೆ! ಸೊರಗುತಿದೆ!

ಕೆ. ವಿ. ಪುಟ್ಟಪ್ಪ.

ವಾರ್ಷಿಕ ಚಂದಾ—ಪರ ಊರವರಿಗೆ ........ ರೂ. 1—4—0.

" " — ಊರವರಿಗೆ ........ ರೂ. 1—0—0.

ಈ ಸಂಚಿಕೆಯ ಬೆಲೆ: 0—1—6.

THE

# Bombay Life Assurance Co., Ltd.

A 100% INDIAN LIFE OFFICE.

## SALIENT FACTS ABOUT PROGRESS IN 1932.

**Life Assurance Fund. Rs. 38,40,413-0-0**
**Total Assurance in force Rs. 257,49,900-0-0**

**COMPANY'S PROGRESS PROVES ITS POPULARITY.**

| YEAR. | Premium income Rs. As. Ps. | Life Assur. Funds. Rs. As. Ps. | Assets. Rs. As. Ps. |
|---|---|---|---|
| 1921 | 2,40,614—0—0 | 5,84,516—0—0 | 8,61,178—0—0 |
| 1928 | 7,38,529—0—0 | 21,52,432—0—0 | 27,09,508—0—0 |
| 1932 | 12,50,697—0—0 | 38,40,413—0—0 | 45,39,158—0—0 |

## 1933 Jubilee & Valuation Bonus Year.

JOIN NOW & SHARE IN PROFITS

*IF YOU ARE ALREADY A POLICY HOLDER, IT WILL PAY YOU TO INCREASE YOUR PRESENT ASSURANCE.*

**Branches & Agencies Throughout India, Burma, Ceylon, British East Africa & Straits Settlements.**

*APPLY TO:—*

**Messrs. KOCHIKAR BROTHERS,**

Branch Sectretaries for Madras Presidency including Native States.

*with Branch Offices at:—*

MADRAS——BANGALORE——MANGALORE——AND——UDIPI

# "BADAVARA BANDHU"

## PATRONS

### LIFE DONORS.

| | | |
|---|---|---|
| M. R. Ry. K. N. Guruswamy Avl., Excise Contractor to the Government of Mysore, Bangalore | Rs. | 100—0—0 |
| A Well-wisher ... ... ... ... | ,, | 50—0—0 |
| M. R. Ry. Rao Bahadur N. N. Suvarna Avl., Advocate Mangalore | ,, | 50—0—0 |

### PATRONS.

| | | |
|---|---|---|
| M. R. Ry. D. Manjaya Heggade Avl., Manager, Temple Dharmastala, S. Kanara | ,, | 10—0—0 |
| M. R. Ry. K. Raghuchandra Ballal Avl., Land-Lord, Mangalore | ,, | 10—0—0 |
| 'A Bandhu' ... ... ... ... | ,, | 10—0—0 |
| M R.Ry. K. T. Kerkera Avl., Thomas Street, Colaba, Bombay. | ,, | 10—0—0 |
| M. R.Ry. M. Narayana, Avl., Editor, 'Thodalnudi' 140 Bohra Bazaar Street, Fort Bombay. | | 10—0—0 |
| Srimathi Avantika Bai K. Kudalkar. 281 Bazar Gate St. Top Floor, Fort Bombay | | 10-0-0 |
| Dr. M. Rama Rao. L. C. P. S. Fort Bombay | | 10—0—0 |

### MEMBERS FOR FIVE RUPEES' SCHEME.

M. R. Ry. M. N. Prabhu Avl., Government Pleader and Public Prosecutor Mangalore.

M. R. Ry. H. Narsappa Avl., Assistant Income-Tax Officer, Mangalore.

M. R. Ry. M. A. Talwar Avl., B. A. B. L., M. R. A. S. Vakil, Mangalore.

M. R. Ry. S. G. Shastry Avl., B. A., Msc. (Lond) F. C. S. F. M. U., Industrial Chemist and Chemical Engineer, Government Soap Factory Bangalore.

Mrs. N. Sharada Bai, wife of M. R Ry. T. Narsappa Avl., Hon. Bench Magistrate, Mangalore.

M. R. Ry. H. Coragappa Avl., Sahukar and Hon. Bench Magistrate, Mangalore.

A Hon. Bench Magistrate.

Messrs. Kochikar Bros., Agents Bombay Life Assurance Co., Ltd., Udipi.

M. R. Ry. J. A Puthran Avl., M. C., B. Manager Asian Assurance Co., Ltd., Mangalore.

M. R. Ry. M. K. Vaidyer Avl., Mangalore,

M. R Ry. Guthedar B. Babu, Avl., Mangalore.

M. R. Ry. S. Narayan Shastry Avl., Manager Cooverjee Ardeshier & Co., Mangalore.

M. R. Ry. M. V. Shastry Avl., Ayurveda Bhusana, Bheshajashram, Mangalore.

M. R. Ry. B. Manjunath Avl., Proprietor, City Cycle Co., Mangalore.

Dr. K. Gopalachar, Senior Physician Sri Rama Krishna Dharma Vaidyashram, Mangalore.

M. R. Ry. A. M. Naganna Hegde, M. C. Prop., Satyanarayan Tile Works, Mangalore.

M. R. Ry. V. N. Bolar Avl., Messrs. Kochikar Bros., Udipi.

M. R. Ry. Abbahithilu Ishwar Poojary Avl., Land Lord and Sowcar Boloor, Mangalore.

M. R. Ry. Contractor K. Guddappa Avl. Kodialbail Mangalore.

M. R. Ry. M. Venkappaya Avl., Merchant Bendoor, Mangalore.

M. R. Ry. K. Devappa Avl., Soda Factory, Kodialbail, Mangalore.

M. R. Ry. M. Vasudev Nayak Avl., Messrs. Manel Krishna Nayak & Sons Mangalore.

Dr. I. K. P. Sharma, Ayurveda Visharada and Bhushana, Medical Officer-in-charge of Municipal Ayurvedic Dispensary, Mangalore.

Mr. K. Raffuddin Ahmad Saheb, District Manager, The Great Eastern Industrial & All India Insurance Co., Ltd., River View, Mangalore.

M. R. Ry. B. Narsappa Kotian Avl, C/o Poly Clinic 20 New Queens' Road, Bombay.

M. R. Ry. Munjunath B. Amin Avl., 22 Police Court Lane, Top Floor, Fort Bombay.

M. R. Ry. B. M. Kotian Avl., P. B. 827 Bombay.

SEE NEXT PAGE.

# OUR PATRONS.

Continued.

Mr. John Steven D'Souza,
Manager, Baker Shop, Kudroli,
Mangalore.

M. R. Ry. Laxman Govind Pal Avl.,
Proprietor, Banian Mart,
Market Road, Mangalore.

M. R. Ry. S. Madhava Laxumana Naik Avl.,
Merchant Bunder, Mangalore.

M. R. Ry. E. D. Anchan Avl,
Proprietor Zenith Cap Mart,
Market Road, Mangalore

M. R. Ry. Potail Devappa Malli Avl.,
Potail of Kunjathabail S. K

M. R. Ry. K. Venkoji Rao Avl.,
Gollarkeri, Mangalore.

M. R. Ry. Annappa B. Shettigara, Avl. Agent
Hindustan Co-operative Insurance.
Society Ltd. Commissariat Building,
Fort Bombay.

M. R. Ry. A. B. Kukian Avl.,
c/o National City Bank of
New York, Church-gate Street,
Fort Bombay.

M. R. Ry. M. R. Shriyan Avl.,
c/o Abdulla Hirji Esq.,
2nd Floor, No. 5, Dalal Street,
Fort Bombay

M. R. Ry. K. C. Kaverappa Avl.,
Manager, Dodnandi Coffe Estate,
Bankal, Kadur Dt.

M. R. Ry. K. Talawar Avl.,
Proprietor, Messrs K. Chapman & Co.
Girgaum, Bombay.

M. R. Ry. Contractor Koragappa Avl.,
Kodialbail, Mangalore.

M. R. Ry. Tukrappa Avl.,
Messrs. Pais shop,
Mangalore.

M. R. Ry. Datt Shet Avl.,
Bharat Jewellery Mart,
Mangalore.

M. R. Ry. Menka Fakira Shetty Avl.,
(Ulyaragoli) The Sharad Vilas,
Hindu Dinner House,
69 Ghoga Street, Fort Bombay.

M. R. Ry. A. P. Kirodian Avl.,
Dadar Post, Bombay.

Dr. K. V. Bhat, L.I.M. Physician-in charge,
Municipal Ayurvedic Dispensary,
Jeppu, Mangalore.

Swasthi Sri Charukeerthi Panditharcharya-
varya Swamiji, Danasala Mutt, Mudabidri.

M. R.Ry. V. S. Prabhu, Avl., Proprietor,
West India Soap & Industrials Co.
Mangalore.

M. R. Ry. Shesappa J. Shriyan Avl.,
The Yokohama Specie Bank Ltd.,
Post Box No. 207, Bombay

M. R. Ry. Bolar Narayana Rao Avl.,
Proprietor,
Popular Tailoring Shop,
Sir Pheroj Shah Metha Road,
Fort Bombay

M. R. Ry. H. Vasudev Shetty Avl.,
Proprietor, Hindu Restaurant,
Bruce Street,
Fort Bombay.

M. R. Ry. B. Shetty Avl,
c/o Charles Lister & Co.,
Novsari Chamber Outram Road,
Bombay.

M. R. Ry. Bolanthur Laxminarayan
Prabhu, Avl. Merchant,
Bunder, Mangalore.

Prof. N. Sheshappa,
South Kanara Physical Culture Institute,
Bombay.

Hon. Secretary,
Kannada Sangeetha Sabha,
12, Maruthi Lane, Bombay.

M. R. Ry. A. Sitarama, Avl.,
Sub-Registrar, Katachera,
North Malabar.

## ನವಯುಗಕ್ಕೊಪ್ಪುವ ವಾರಪತ್ರಿಕೆಯೆಂದರೆ

— ಮಂಗಳೂರಿನ —

# ನವಯುಗ

ಸಣ್ಣ ಕಥೆ, ಪದ್ಯಗಳು, ವಿನೋದ, ವಿವಿಧ ಸಮಾಚಾರ, ಆಟಗಳ ನೋಟ, ಅಲ್ಲಲ್ಲಿಯ ಸೊಲ್ಲು ಮೊದಲಾದ ಉಚ್ಚ ತರಗತಿಯ ಲೇಖನಗಳು ಬರುವುವು.

**ಸಂಪಾದಕ — ಕೆ. ಕೆ. ಶೆಟ್ಟಿ.**

ಇಂದೇ ತರಿಸಿಕೊಳ್ಳಿರಿ.

**ವಾರ್ಷಿಕ ಚಂದಾ:— ಅಂಚೆವೆಚ್ಚ ಸೇರಿ ರೂ. 3--4--0 ಊರವರಿಗೆ ರೂ. 2-8-0 ಮಾತ್ರ.**



## ಡಾಕ್ಟರ್ ಯು. ಆರ್. ಭಟ್,

**ಸರ್ಜನ್ ದಂತವೈದ್ಯ,**

(ಮದ್ರಾಸು ಮಧುರೆ, ಮತ್ತು ಮೈಸೂರು ಮೊದಲಾದ ಕಡೆಗಳಲ್ಲಿ ಖ್ಯಾತಿ ಹೊಂದಿರುವರು.)

ಬೇಂಕ್ ಒಫ್ ಮಂಗಳೂರಿನ ಮಾಳಿಗೆ,

**ರಥಬೀದಿ ಮಂಗಳೂರು.**

ನವೀನ ತರದ ಸಾಮಗ್ರಿಗಳಿಂದ ಯುಕ್ತವಾಗಿರುವ ಸರ್ಜರಿ!

### ಐದು ವರ್ಷಗಳ ಅಪಾರ ಅನುಭವ.

ಪ್ಲೇಟುಗಳಿಲ್ಲದೆ ಹಲ್ಲುಗಳನ್ನು ಕಟುವುದು (ಹೊಸ ನಮೂನೆ) ಎಂದೆಂದು ಒಡೆದು ಹೋಗದದಂತತ



ಮಾಲೆಗಳು; ಚಿನ್ನ, ಬೆಳ್ಳಿ, ಎಲ್ಯೂಮಿನಿಯಮ್, ವಲ್ಕೆನೈಟ್ ಮುಂತಾದವುಗಳಲ್ಲಿ ಕಟ್ಟಿದ ದಂತಮಾಲೆಗಳು; ಒಂದಿಷ್ಟೂ ನೋವಾಗದಂತೆ ಹಾಳು ಹಲ್ಲುಗಳನ್ನು ಕೀಳುವುದು; ಮುಂತಾದ ಯಾವತ್ತೂ ದಂತಚಿಕಿತ್ಸೆಗಳನ್ನು ಆಧುನಿಕ ಶಾಸ್ತ್ರೀಯ ರೀತಿಯಲ್ಲಿ ತೃಪ್ತಿಕರವಾಗಿ ಮಾಡುವರು.

**ದರಗಳು ಅತ್ಯಂತ ಸುಲಭ!  ದಂತ ಪರೀಕ್ಷೆ ಧರ್ಮಾರ್ಥ!!**

ನಿಜವಾದ ಬಡಬಗ್ಗರಿಗೆ ಧರ್ಮಾರ್ಥ ದಂತಚಿಕಿತ್ಸೆ!



ದಯಮಾಡಿ

## ಶ್ರೀ ವಿಲಾಸ

**ಕಾಫಿ ಕ್ಲಬ್ಬನ್ನು ನೆನಪಿನಲ್ಲಿಟ್ಟುಕೊಳ್ಳಿರಿ!**

**ಕಡಿಮೆ ಖರ್ಚಿನಲ್ಲಿ ಹೆಚ್ಚು ಸಂತೃಪ್ತಿ**

ಅತ್ಯುತ್ಕೃಷ್ಟ ಆಹಾರ ಮತ್ತು ಪಾನೀಯ

ಸರ್ವ ಜನರಿಂದ ಶ್ಲಾಘಿಸಲ್ಪಟ್ಟದ್ದು.

ತಮ್ಮ ಮಿತ್ರರೊಡನೆ ದಿನಾಲೂ ಬಂದು ಸಂತೃಪ್ತರಾಗಿರಿ. ಅವರು ಕೂಡಾ ನಮ್ಮ ಶ್ರೀ ವಿಲಾಸವನ್ನು ಯಾವಾಗಲೂ

**ಮರೆಯರು.**

### ಶ್ರೀ ವಿಲಾಸ,

ಗಣಪತಿ ಹ್ಯಾಸ್ಕ್ಯೂಲ್ ರೋಡ್,

ಮಂಗಳೂರು, ದ. ಕ.



A Recurring Pleasure! - to smoke them.

MANGALORE

## DARBAR BEEDIES

Thousands Enjoy them Daily

**WHY CANNOT YOU?**

When buying see our trade mark.

ಅವುಗಳನ್ನು ಸೇದುವುದೆಂದರೆ ಆನಂದ!

**?**

ಅವುಗಳನ್ನು ಸೇದುವುದೆಂದರೆ ಆನಂದ!

ಮಂಳಗೂರು

## ದರ್ಬಾರ್ ಬೀಡಿಗಳು.

ದರ್ಬಾರಿನಲ್ಲಾಗಲೀ ಚಿಕ್ಕ ಕೂಟಗಳಲ್ಲಾಗಲೀ ಸಿಗರೇಟುಗಳ ಸ್ಥಾನವನ್ನು ಇವುಗಳೆ ಯೋಗ್ಯವೆನಿಸುವಂತೆ ವಹಿಸುವವು.

ಅವುಗಳ ಪರಿಮಳ—ಸಿಗರೇಟುಗಳಷ್ಟೆ!

ಉಪಯೋಗಿಸಲ್ಪಡುವ ಹೊಗೆಸೊಪ್ಪು

ಉತ್ಕೃಷ್ಟ ತರಗತಿಯದು.  ನಾಜೂಕಾಗಿ ಕಟ್ಟಲ್ಪಟ್ಟದು.

ಹಿಂದೂದೇಶದಲ್ಲೆಲ್ಲಾ ಹೆಸರಾಗಿವೆ.

ಒಮ್ಮೆ ಪಡೆದು, ಸೇದಿ ನೋಡಿ, ಆ ಮೇಲೆ ನಿತ್ಯಾನಂದ ಪಡೆಯಿರಿ!

**ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್.**

ರಥಬೀದಿ, ಮಂಗಳೂರು, ದ. ಕ.

# ಬಿ. ಎಸ್. ಬ್ರದರ್ಸ್ ಇವರ ಉತ್ತಮವಾದ ಕಸಿಗಿಡಗಳು.

ನಮ್ಮಲ್ಲಿ ಹಲವು ಜಾತಿಯ ಗುಲಾಬಿ ಹೂವಿನ ಕಸಿಗಿಡಗಳೂ, ಸಂಪಿಗೆ (ಬಿಳಿ ಮತ್ತು ಕೆಂಡ) ಮಲ್ಲಿಗೆ, ಡೆಲಿಯಾ, ಜಿನಿಯಾ, ಕೆನ್ನಾ, ಮೊದಲಾದ ಗಡ್ಡೆ ಗಿಡಗಳೂ, ರಂಗಿನ ಗಿಡ (ಕ್ರೊಟನ್)ಗಳೂ ನಮ್ಮ ಜಿಲ್ಲೆಯ ಹವಾ ಮತ್ತು ಹಣ್ಣಿನ ಗುಣಕ್ಕನುಕೂಲವಾಗಿ ಪ್ರತಿ ವರ್ಷವೂ ಫಲ ಬಿಡುವ ಹಲವು ಜಾತಿಯ ಮಾವಿನ ಕಸಿಗಿಡಗಳೂ, ಚಿಕ್ಕು (ಸಪೋಡಿಲ್ಲ) ದಾಳಿಂಬೆ, ನಿಂಬೆ, ಕಿತ್ತಳೆ, ಪೇರಳೆ, ಮಾದಳೆ, ನೇರಳೆ, ದೀವಿಹಲಸು, ಮತ್ತು ಒಳ್ಳೇ ಜಾತಿಯ ಅನನಾಸು, (ಕ್ಯೂ ಪೈನೇಪಲ್) ಮುಂತಾದ ಹಣ್ಣು ಗಿಡಗಳೂ ಯಾವಾಗಲೂ ಮಾರಾಟಕ್ಕೆ ಸಿಕ್ಕುತ್ತವೆ.

ಒಮ್ಮೆ ಬಂದು ಪರೀಕ್ಷಿಸಿದರೆ ತಿಳಿಯುವುದು!

ಹೆಚ್ಚಿನ ವಿವರಕ್ಕೆ ಒಂದೂವರೆ ಆಣೆಯ ಸ್ಟಾಂಪು ಇಟ್ಟು ಬರಕೊಳ್ಳಿರಿ.

**B. S. BROTHERS,**

**Mannagudda, MANGALORE, S. K**

ಬಾಲಗ್ರಹಕ್ಕೆ! ಆಗ್ರಹದಿಂದ ಕೊಂಡುಕೊಳ್ಳಿ!

ನೂತನವಲ್ಲ! ಮಕ್ಕಳಿದ್ದ ಮನೆಗಳಲ್ಲೆಲ್ಲಾ ಅವಶ್ಯವಾಗಿಯೂ ಬೇಕೇ ಬೇಕು! ಚಿರನೂತನ!

ನೂರಾರು ಮನೆಗಳಲ್ಲು ಉಪಯೋಗಿಸಲ್ಪಟ್ಟು, ಅನುಭವದಿಂದ ಅದ್ವಿತೀಯವೆನಿಸಿದೆ

## ಸಿದ್ಧ ಬಾಲಸಂಜೀವಿನಿ

ಮಕ್ಕಳ ಬಾಲಗ್ರಹ ರೋಗಕ್ಕೆ ದಿವ್ಯ ಔಷಧ.

ಮಕ್ಕಳ ಕೆಮ್ಮು, ಕಫ, ಶ್ವಾಸಕೋಶ, ಮಲಬದ್ಧತೆ, ಅಜೀರ್ಣ, ಜ್ವರಾದಿಗಳೆಲ್ಲ ಖಂಡಿತವಾಗಿ ಗುಣ.

ಸಂದೇಹ ಪಡಬೇಡಿ! ಇಂದೇ ಕೊಂಡುಕೊಳ್ಳಿ!

ಖಾತ್ರಿ !! ಗುಣಲಾಭ !!!

ಬಾಟ್ಲಿಗೆ ಆಣೆ 12 ಮಾತ್ರ.

ದೊರೆಯುವ ಸ್ಥಳ :— ಡಾ। ಎಂ. ಎಸ್. ಪೈ,
ಕೊಡಿಯಾಲ್‌ಬೈಲು, ಮಂಗಳೂರು.

ಮೆಸ್ಸರ್ಸ್ ಶೆಣೈ ಬ್ರದರ್ಸ್ ಎಂಡ್ ಕೋ,
ರಥಬೀದಿ, ಮಂಗಳೂರು.

ಮತ್ತು

ಕೆ. ವಿಟ್ಠಪ್ಪ ಭಂಡಾರಿ, ಆರ್ಯ ಆಯುರ್ವೇದ ಔಷಧಾಲಯ,
ರಥಬೀದಿ, ಮಂಗಳೂರು.

## ಕರ್ನಾಟಕ ಗ್ರಂಥಾಲಯ,

ಮಾರ್ಕೆಟ್ ರೋಡ್, ಮಂಗಳೂರು

ಇಲ್ಲಿ ಎಲ್ಲಾ ತರದ ಕತೆ ಕಾದಂಬರಿಗಳು ಓದಲು ಸಿಗುತ್ತವೆ.

ಮಂಗಳೂರಿನಲ್ಲಿ ಇದೊಂದೇ ಗ್ರಂಥಾಲಯ

ಬೇಗನೇ ಚಂದಾದಾರರಾಗಿರಿ.

## ಒಂದಾಣೆ ಮಾಲೆ

ತಿಂಗಳಿಗೊಂದೆರಡು ಕತೆಗಳು

ವಾರ್ಷಿಕ ಚಂದಾ ರೂಪ್ಯಾ ೧—೪—೦

ತುಂಟರ ತಂಡ, ಬೆಳಗಾಂವಿ.



# ಮನೋಲ್ಲಾಸಿನೀ ಕಂಪೆನಿ,

## 7, ಹಂಪನಕಟ್ಟೆ, ಮಂಗಳೂರು.

### ಟವರ್‌ಲಾಯ್ಸ್ ಸ್ನೊ. (ರಿಜಿಸ್ಟರ್ಡ್)

ಮುಖ ಸೌಂದರ್ಯಕ್ಕೆ ಇದೇ ಉತ್ತಮ. ಇದನ್ನು ಮುಖಕ್ಕೆ ಸವರಿದರೆ ಬಲು ತಂಪು, ಕಲೆ, ಮೊಡವೆಗಳು ಮಾಯವಾಗಿ ನವಕಾಂತಿಯು ಬರುವುದು. ಅತೀ ಚಿತ್ತಾಕರ್ಷಕ-ಅಪೇಕ್ಷಾ ಪರಿಮಳ. ಈಗ ತಾನೇ ಕಂಡುಹಿಡಿಯಲ್ಪಟ್ಟು, ಈಗಾಗಲೇ ಸಾವಿರಾರು ಬಾಟ್ಲಿಗಳು ಖರ್ಚಾಗಿವೆ.

ಬೆಲೆ: ಬಾಟ್ಲಿ ೧ಕ್ಕೆ ಅಣೆ ೧೦. (ಸೆಂಪಲ್ ಸೀಸೆಗೆ ಅಣೆ ೩)

### ಮನೋಲ್ಲಾಸಿನೀ ತೈಲವು.

ತಲೆ ನೋವು, ತಲೆ ತಿರಗುವುದು, ತಲೆವುರಿ, ಕಣ್ಣುರಿ, ಪಿತ್ತ, ಒರ್ಕೆನ್ನೆ ನೋವು, ನಿದ್ದೆ ಬಾರದಿರುವುದು, ಕಿವಿಯಿಂದ ಕೀವು ಸೋರುವದು, ಕಿವುಡುತನ ಕಣ್ಣು ನೋವು, ನೆನವು ಶಕ್ತಿ ಇಲ್ಲದಿರುವುದು ಇತ್ಯಾದಿ ಅನೇಕ ತಲೆ ವ್ಯಾಧಿಗಳನ್ನು ಗುಣ ಮಾಡಿ, ಉದುರುವ ಕೂದಲನ್ನು ನಿಲ್ಲಿಸಿ, ಕೂದಲನ್ನು ಉದ್ದ ಬೆಳೆಯಿಸಿ, ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು, ಹಣ್ಣಾಗುವ ಕೂದಲನ್ನು ತಡೆದು, ಕೂದಲು ಇಲ್ಲದ್ದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ.

ಸೀಸೆಗೆ ರೂ. ೧, ೩ಕ್ಕೆ ೨-೧೦. ದೊಡ್ಡ ಸೀಸೆಗೆ ರೂ. ೨. ೩ಕ್ಕೆ ೫-೧೨.

### ಟವರ್‌ಲಾಯ್ಸ್ ಟೂತ್ ಪೌಡರ್.

ಇದರಿಂದ ಹಲ್ಲುಗಳನ್ನು ತಿಕ್ಕಿದರೆ ಹಲ್ಲಿನಿಂದ ರಕ್ತ, ಕೀವು ಹೋಗುವುದು. ಹಲ್ಲು ನೋವು, ದವಡೆ ಕುರು, ಹಲ್ಲು ಅಲ್ಲಾಡುವದು, ಬಾಯಿ ದುರ್ವಾಸನೆಯನ್ನು ಹೋಗಲಾಡಿಸಿ ಹಲ್ಲುಗಳು ಚೊಕ್ಕವಾಗುವವು. ಡಬ್ಬಿಗೆ ಅಣೆ ೪, ಡಜನಿಗೆ ರೂ. ೨-೮.

### ಕಟುಕಷಾಯ

ಇದು ಮಲೆ ಜ್ವರ, ನಡುಗಿ ಬರುವ ಜ್ವರ, ಛಳಿ ಜ್ವರ, ಬೆವರು ಬಂದು ಬಿಡುವ ಜ್ವರ, ಗಟ್ಟದ ಜ್ವರ, ಮುಂಬಾಯಿ ಜ್ವರ, ಇಂಜೆಕ್ಷನ್ ವ ಬೇರೆ ಜ್ವರ ನಿವಾರಕ ಔಷಧಿಗಳಿಂದ ಬಿಡದ ಕಠಿಣ ಜ್ವರ, ಈ ಔಷಧಿಯಿಂದ ಎರಡೇ ದಿವಸಗಳಲ್ಲಿ ಗುಣವಾಗುತ್ತದೆ. ಹಾಗೆಯೇ ಇದರ ಸೇವನೆಯಿಂದ ಜ್ವರಗಡ್ಡೆಯೂ ಕರಗುತ್ತದೆ. ಯಾವ ಪಥ್ಯವೂ ಇರುವುದಿಲ್ಲ. ಬೆಲೆ: ೮ ಔನ್ಸ್ ಬಾಟ್ಲಿ ೧ಕ್ಕೆ ರೂ. ೧-೮, ೩ಕ್ಕೆ ರೂ. ೪. ೬ಕ್ಕೆ ರೂ. ೭-೮. ೧೨ಕ್ಕೆ ರೂ. ೧೪-೦-೦.

### ರೋಮನಾಶಿನಿ.

ರೋಮ ತೆಗೆಯಬೇಕಾದ ಜಾಗಕ್ಕೆ ಇದನ್ನು ತಾಗಿಸಿದರೆ ೩ ನಿಮಿಷದಲ್ಲೇ ರೋಮ ಹೋಗಿಬಿಡುತ್ತದೆ. ಚರ್ಮಕ್ಕೆ ದೋಷವಿಲ್ಲ. ಡಬ್ಬಿಗೆ ಅ. ೬. ೩ಕ್ಕೆರೂ. ೧.

**ದದ್ರುಘ್ನ ಲೇಪ:** ಕಠಿಣ ತರದ ಗಜಕರ್ಣ, ಹುಳ ಮೇಯುವದು ನಾಲ್ಕು ಸಾರಿ ತಾಗಿಸುವಷ್ಟರಲ್ಲಿ ಖಂಡಿತ ಗುಣ. ಡಬ್ಬಿಗೆ ಅಣೆ ೫. ಡಜನಿಗೆ ರೂ. ೧.

---

# KANARA WATCH WORKS,

## MANGALORE.







**It is but true that**

**KANARA WATCH WORKS**

**Deals with every kind of**

**Best wall Clocks, Reliable Rolled-gold wrist Watches**

**AND**

**durable Sporting materials, etc.,**

**Our repairs are Guaranteed!** **Our work is efficient!** **Our rate is moderate!**

OUR MOTTO IS SATISFACTION TO ALL

ಎಲ್ಲಾ ಕಡೆಗಳಲ್ಲೂ ದೊರಕುತ್ತೆ.

ಕೊನೆಯಪಕ್ಷ ನಮ್ಮ ಔಷಧಿಗಳನ್ನು ಉಪಯೋಗಿಸಿರಿ.

## ಲಸ್ಟರ್ (ದೇಹ ಪೌಷ್ಟಿಕ.) [ರಿಜಿಸ್ಟರ್ಡ್]

ಅಪರೇಷನ್ ಚಿಕಿತ್ಸೆ ಬೇಕಾಗಿಲ್ಲ!! **Mehadhvamsini** ಶೀಘ್ರ ಗುಣಕಾರಿ!!

## ಮೇಹಧ್ವಂಸಿನಿ (ರಿಜಿಸ್ಟರ್ಡ್.)

ರತ್ನಪ್ರಾಯವಾದ ಈ ಔಷಧಿಯನ್ನು ಸೇವಿಸುವುದರಿಂದ ಮಾನವನು ದುಷ್ಟ ಸ್ತ್ರೀಸಂಗಮದಿಂದ ಸಂಪಾದಿಸಿದ ವ್ಯಾಮೋಹದ ಅಸ್ತಿಯನ್ನು ಕಳೆದುಕೊಂಡು ದೃಢಕಾಯನಾಗುವನು. ಇದರ ಸೇವನೆಯಿಂದ ಹಸುರು, ಬಿಳಪು, ಕೆಂಪು ಮುಂತಾದ ೨೦ ವಿಧ ಪ್ರಮೇಹಗಳು ಧ್ವಂಸವಾಗುವುವು. ಮೇಹಜ್ವರ, ಮೇಹವಾಯು, ಮೇಹಗಡ್ಡೆ, ಹೃದ್ರೋಗ, ಕೈಕಾಲು ಸೆಳಿತ ಚರ್ಮರೋಗಗಳು ನಾಶವಾಗುವುವು. "ಬಹುಮೂತ್ರ"ವೆಂಬ ಘೋರವಾದ ಖಾಯಿಲೆ, ಮೂಲವ್ಯಾಧಿ ಮತ್ತು ಸ್ತ್ರೀಯರ "ಸಮಸ್ತ ಗರ್ಭಾಶಯದ ರೋಗಗಳು" ನಾಶವಾಗಿ ಕೆಟ್ಟುಹೋದ ರಕ್ತವು ಶುದ್ಧಿಯಾಗಿ ಶರೀರಕ್ಕೆ ಕಾಂತಿಯು ಬರುವುದು. ಸೇವಿಸುವುದಕ್ಕೆ ಹಿತಕರ, ಹೆಚ್ಚಿಗೆ ಪಥ್ಯವಿಲ್ಲ. ಕ್ರಯಃ 24 ತೋಲ ಬಾಟ್ಲಿ ರೂ. ೪-೦-೦. 12 ತೋಲ ರೂ. ೨-೪-೦. 6 ತೋಲ ಬಾಟ್ಲಿ ರೂ. ೧-೨-೦.

**ನಿಮ್ಮ ಹಲ್ಲಿನ ಬಾಧೆಗೆ ದಿನವಹಿ ನಮ್ಮ ಲಸ್ಟರ್ ದಂತ ಮಂಜನವನ್ನು ಉಪಯೋಗಿಸಿರಿ. ಪಟ್ಟಿ 1 ಕ್ಕೆ 0—1—0.**

## ನಿರಾಶ್ರಿತರಾದವರು ನರಳಬೇಕಾಗಿಲ್ಲ

ಇದರ ಸೇವನೆಯಿಂದ ವಾತ, ಪಿತ್ತ, ಗರ್ಭಿಜಾಡ್ಯ, ಚರ್ಮರೋಗಗಳು ನಿವಾರಣೆಯಾಗುವುವು. ಹೊಟ್ಟೆಶೂಲೆ, ಕೈಕಾಲುರಿ, ಕಣ್ಣುರಿ ನಾಶವಾಗಿ ಶರೀರವು ತಂಪಾಗಿ ವೀರ್ಯವು ಗಟ್ಟಿಯಾಗುವುದು. ಬಹಳ ಹಳೇ ಉಬ್ಬಸ, ಗೂರ್ಲು, ದಮ್ಮು, ಕೆಮ್ಮು. ಜ್ವರಗಡ್ಡೆಗಳು ನಾಶವಾಗಿ ಜಠರಾಗ್ನಿ ಹೆಚ್ಚುವುದು. ಅಂಗಾಂಗಗಳಲ್ಲಿಯ ನರಗಳ ನಿರ್ಬಲತ್ವವು ಧ್ವಂಸವಾಗಿ ಅಮಿತವೀರ್ಯವುಂಟಾಗಿ ರಕ್ತಶುದ್ಧಿಯಾಗಿ ಮಾಂಸಮಜ್ಜಾದಿಗಳಿಗೆ ಶಕ್ತಿಯುಂಟಾಗುವುದು. ಕೆಲಸಗಾರರಿಗೂ, ಉದ್ಯೋಗಸ್ಥರಿಗೂ, ವಿದ್ಯಾರ್ಥಿಗಳಿಗೂ, ನಿರ್ಬಲರಾದವರಿಗೂ "ಕ್ಷಯದಿಂದ ನರಳತಕ್ಕವರಿಗೂ" ಇದರ ಉಪಯೋಗ ಹೇಳತೀರದು. ಇದರ ಸೇವನೆಯಿಂದ ಬುದ್ಧಿ ಚುರುಕಾಗುವುದು. ಕ್ರಯಃ—24 ತೋಲ ಬಾಟ್ಲಿ ರೂ. ೩-೮-೦ 12 ತೋಲ ಬಾಟ್ಲಿ ರೂ. ೨-೦-೦. 6 ತೋಲ ಬಾಟ್ಲಿ ರೂ. ೧-೧-೦.

## ವೇಪ್ರಿನ್ (ಬಹಿರ್ಲೇಪ.) [ರಿಜಿಸ್ಟರ್ಡ್]

(ಉರಿ, ನೋವು, ಒಡತೆಗಳಿಲ್ಲದೆ ಸುಲಭ ಚಿಕಿತ್ಸೆ.)

ಇದರ ಲೇಪನದಿಂದ ಕಜ್ಜಿ, ಗಜಕರ್ಣ, ಇಸಬು, ಗಾಯ, ವ್ರಣಗಳು ಆರುವುವು. ಟಾಕಿ, ಮುಸುಕು, ಮೇಹವ್ರಣ, ಮಡಿಮೆ, ತಿಂಡಿ, ಮಚ್ಚಕಡಿತ ನಾಶವಾಗಿ ಚರ್ಮ ಪೂರ್ವ ಸ್ಥಿತಿಗೆ ಬರುವುದು. ಪರಂಗಿಹುಣ್ಣು. ತೊಡೆವಾಳ ಇವುಗಳಿಗೆ ಅತ್ಯಂತ ಪ್ರಯೋಜನಕಾರಿ. ಅಕಸ್ಮಾತ್ತಾಗಿ ಆಗುವ ಘಾಯಗಳಿಂದ ರಕ್ತ ಸುರಿವಿಕೆಯನ್ನು ನಿಲ್ಲಿಸಲು 'ವೇಪ್ರಿನ್' ಪ್ರತಿಯೊಬ್ಬರ ಮನೆಯಲ್ಲಿಯೂ ಇದ್ದೇ ಇರಬೇಕು. ಚೇಳಿನ ವಿಷವನ್ನು ತೆಗೆಯುವುದರಲ್ಲಿ ಅದ್ವಿತೀಯವಾದದ್ದು. ಕ್ರಯಃ—½ ಔನ್ಸು ಸೀಸೆ ೦-೮-೦ ¼ ಔನ್ಸು ೦-೪-೦.

### ಕೆಲವು ಅಭಿಪ್ರಾಯಗಳು.

ಗಿರಿ ಎಸ್ಟೇಟ್ ಮ। ಡೊಗ್ಲಾಸ್ ಮೆಪ್ಸನ್ ಸಾಹೇಬರು ಬರೆಯುವುದೇನೆಂದರೆ—ನಿಮ್ಮ ಮುಲಾಮು ಚೇಳಿನ ಕಡಿತಕ್ಕೂ, ಘಾಯಗಳಿಗೂ, ಏಟು ಬಿದ್ದದ್ದಕ್ಕೂ ತುಂಬಾ ಗುಣಕಾರಿಯಾಯಿತು. ಎಲ್ಲಾ ಕಾಫಿ ತೋಟಗಳಲ್ಲಿಯೂ ಅಕಸ್ಮಾತ್ತಾಗಿ ಆಳುಗಳಿಗೆ ಸಂಭವಿಸುವ ತೊಂದರೆಗಳಿಗೆ ತುಂಬಾ ಉಪಯುಕ್ತವಾದ ಔಷಧವು. ಎಲ್ಲರಲ್ಲಿಯೂ ಇರತಕ್ಕದ್ದು ಅತ್ಯವಶ್ಯಕವು.

ಅಹಮದಾಬಾದ್ ಕಾಂಗ್ರೆಸ್ ಆಸ್ಪತ್ರೆಯವರು ಬರೆಯುವುದೇನೆಂದರೆ—ನೀವು ಮೆಹರ್ಬಾನೆ ಮಾಡಿ ಕಳುಹಿಸಿದ 'ವೇಪ್ರಿನ್' ಮುಲಾಮು ಉಪಯೋಗಿಸಿದ್ದಾಯಿತು. ಬಹಳ ಚೆನ್ನಾಗಿ ಗುಣಕೊಟ್ಟಿದೆ. ಇನ್ನೂ ಸ್ವಲ್ಪ ಕಳುಹಿಸಿದರೆ ಒಳ್ಳೆಯದು.

ಮ। ಬಿ. ಎನ್. ವಿಜಯದೇವ್, ಬಾರ್-ಅಟ್-ಲಾ, ಬೆಂಗಳೂರು ಇವರು ಬರೆಯುವುದೇನೆಂದರೆ - "ಮೇಹಧ್ವಂಸಿನಿ"ಯನ್ನು ಇಲ್ಲಿ ಒಬ್ಬರಿಗೆ ಕೊಟ್ಟು ಗುಣ ಕಂಡದ್ದರಿಂದ ನಿಮ್ಮ ಕಂಪೆನಿಯು ಶ್ರೇಯಸ್ಸಿಗೆ ಬರಲೆಂದು ಹಾರೈಸುವ.

ಮ। ರಾ। ಲೋವರ್ ಬರ್ಮ ಸೋಫಿಕಾಕಾವರು ಬರೆಯುವುದೇನೆಂದರೆ—ನಿಮ್ಮ ಅರ್ಧ ಬಾಟ್ಲಿ ಮೇಹಧ್ವಂಸಿನಿಯಿಂದ ಆರೋಗ್ಯ ತೋರುತ್ತಾ ಇದೆ. ದಯವಿಟ್ಟು ಇನ್ನೊಂದು ಬಾಟ್ಲಿ ಮೇಹಧ್ವಂಸಿನಿ ಮತ್ತು ನಿಮ್ಮ ಅರ್ಧ ಬಾಟ್ಲಿ ಲಸ್ಟರ್ ಕಳುಹಿಸಿಕೊಡಿರಿ.

ಮ। ರಾ। ಗಣೇಶರಾವ್, ಪೈಕ್ರಾಫ್ ರೋಡ್, ಮದ್ರಾಸ್ ಬರೆಯುವುದೇನೆಂದರೆ—ನನ್ನ ದೀರ್ಘಕಾಲದ ಇಸಬು ನಿಮ್ಮ ವೇಪ್ರಿನ್ ಉಪಯೋಗಿಸಿದ್ದರಿಂದ ಗುಣಕ್ಕೆ ಬಂದಿದೆ. ಇದು ಚರ್ಮವ್ಯಾಧಿಗೆ ಉತ್ತಮವಾದ್ದೆಂದು ನನ್ನ ಅನುಭವದಿಂದ ಹೇಳುತ್ತೇನೆ.

ಕಂಚಿ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್, ಸೆಕ್ರಿಟೆರಿ ಮ। ಟಿ. ಆರ್. ರಂಗನಾಥನರವರು ಬರೆಯುವುದೇನೆಂದರೆ—"ಲಸ್ಟರ್" ಔಷಧವು ಕಾಸ, ಶ್ವಾಸಗಳಿಗೂ ಮತ್ತು ಇತರ ವ್ಯಾಧಿಗಳಿಗೂ ತುಂಬಾ ಅನುಕೂಲಕೊಟ್ಟಿತು. ನನ್ನ ಅನೇಕ ಮಿತ್ರರಲ್ಲಿಯೂ ಬಂಧು ಬಳಗದಲ್ಲಿಯೂ ಪ್ರಚುರಪಡಿಸಿದ್ದೇನೆ. ನನ್ನ ಸ್ನೇಹಿತರು ಸಹ ಮೇಲ್ಕಂಡ ವ್ಯಾಧಿಗಳಲ್ಲಿ ಉಪಯೋಗಿಸಿ ಗುಣ ಕಂಡಿದ್ದಾರೆ. ದೇವರು ನಿಮ್ಮ ಪ್ರಯತ್ನಗಳಿಗೆ ಇನ್ನೂ ಹೆಚ್ಚು ಜಯಪ್ರದವನ್ನುಂಟುಮಾಡಲಿ ಎಂಬದಾಗಿ ನನ್ನ ಪ್ರಾರ್ಥನೆ.

**ಲಸ್ಟರ್ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,**

ಚಿಕ್ಕಮಗಳೂರು (ಮೈಸೂರು ದೇಶ.)

ಬಡವರ ಸೇವೆಯೇ ಭಗವಂತನ ಸೇವೆಯು.

Suffering and enjoyment are mental States.
GANDHIJI.

ESTABLISHED 1932.

# "ಬಡವರ ಬಂಧು"

It is the humblest who humble the proud, even as love removes hate, gentlness anger, cleanliness dirt and so on.
GANDHIJI.

"BADAVARA BANDHU"

| ಸಂಪುಟ 2 | ನವಂಬರ 1933. | ಸಂಚಿಕೆ 5 |
|---|---|---|

## ಬಡತನದ ಕಿಡಿ

೧

ಸಿಡಿಲು ಗುಡಿಗುಡಿಸೊ ಝುಂಝಾವಾತ ಗಡಗಡನೆ।
ನಡುಗಿಸೀ ಪ್ರಕೃತಿಯನು, ಜಡಿಮಳೆಯೆ ಸುರಿಸೊ
ಕಡಲೆ ಭೋರ್ಗರೆಯೊ, ಕೋಲ್ಮಿಂಚು ಥಳಥಳಿಸುತ್ತೆ
ಬಡ ಹುಡುಗನಳಲ ದನಿ ಹಿಸುಕಿ ಹಿಂಡೊ!

೨

ಆತನೇತಕೆ ಬಂದ ಕಾರಿರುಳ ಕರುಳಿನಲಿ
ಭೀತಿಯಿನಿತೇಕಿಲ್ಲ ಭೂತ ಭೈರವರ
ಭೂತಳದ ಭೂಮಿಪರ ಭುಜಬಲವ ಭಂಗಿಪೆಯೆ?
ನೀತಿ ಭಂಗದ ದಂಡ—ಮರಣ ದಂಡ!

೩

ಬಡವನಹುದಹುದು ನಾ ಪೊಡವಿಪನು ನೀನಹುದು
ಪೊಡವಿಪನ ಭವನದೆಡೆ ಬಂದೆ ಬಳಲಿ
ಹಿಡಿ ಕೂಳ ಕೊಡದೆ ನೀ ಬಡಿದೋಡಿಸುವೆಯಿಂತು
ಬಡವಂಗೆ ಕಿವಿಗುಡದ ರಾಜನೆಂತು?

೪

ಕೊಲ್ಲಿಪೆಯೊ? ಗಲ್ಲಿಗೇರಿಪೆಯೊ? ಬಡ ದನಿಯೊಂದು
ದಳ್ಳುರಿವ ಧಗಧಗಿಪ ಜ್ವಾಲೆಯಾಗಿ
ಕಳ್ಳರನು ಕಡಿದೊತ್ತಿ ಬಡವರನು ಹಿಡಿದೆತ್ತಿ
ನಿಲ್ಲಿಪುದು ನೆಲೆಗಟ್ಟದಾಗಿ ಜಗಕೆ!

"ರಾಘವ" ಮಿತ್ರಮಂಡಲಿ, ಮಂಗಳೂರು

ಸತ್ಯ ಮತ್ತು ಅಹಿಂಸೆಗಳ ಬಲದಿಂದ ನೀವು ಈ ಜಗತ್ತನ್ನೇ ನಿಮ್ಮ ಪಾದದಲ್ಲಿ ತಂದಿರಿಸಿಕೊಳ್ಳಬಹುದು.
With Sathya combined with Ahimsa you can bring the world to your feet.—Gandhiji

# ಆಚಾರ್ಯ ಸಿ. ವಿ. ರಾಮನ್

ಲೇಖಕರು:—ಶ್ರೀ. ಬಿ. ಶಂಕರ ಭಟ್ಟ, ವಿದ್ವಾನ್, ಸೈಂಟ್ ಅಗ್ನೆಸ್ ಹೈಸ್ಕೂಲ್, ಮಂಗಳೂರು

ಜಗತ್ತಿನಲ್ಲಿ ವಿದ್ಯೆ ಮತ್ತು ವೈಭವಗಳಿಗಾಗಿ ಭಾರತ ವರ್ಷವು ಆದಿ ಕಾಲದಿಂದಲೇ ಪ್ರಸಿದ್ಧವಾಗಿದೆ. ದಾಸತ್ವದ ಶೃಂಖಲೆಯಿಂದ ಬಂಧಿತವಾದರೂ ಭಾರತವು ಜಗತ್ತಿನ ಯಾವ ಸಭ್ಯ ದೇಶದಿಂದಲೂ ಕೆಳಗಿನ ತರಗತಿಯದಾಗಿಲ್ಲ. ಜಗತ್ತಿನ ಎಲ್ಲಾ ಕಡೆಗಳಿಂದಲೂ ಮರ್ಯಾದೆ ಹೊಂದಲು ಯೋಗ್ಯವಾದ ನರರತ್ನವು ನಮ್ಮಲ್ಲಿ ಇಂದಿಗೂ ಇದೆ. ಇಂತಹ ನವರತ್ನಗಳಲ್ಲಿ ಜಗತ್ಪ್ರಸಿದ್ಧ ವೈಜ್ಞಾನಿಕ ಸರ್ ಚಂದ್ರಶೇಖರ ವೆಂಕಟೇಶ ರಮನ್‌ರವರು ಕೂಡ ಒಬ್ಬರಾಗಿದ್ದಾರೆ. ಕಳೆದ ವರ್ಷ ಇವರ ಆವಿಷ್ಕಾರಗಳಿಗಾಗಿ "ನೋಬೆಲ್ ಪ್ರೈಜ್" ದೊರೆತದ್ದು ಎಲ್ಲರಿಗೂ ಗೊತ್ತಿದೆ. ಇವರು ಪಾಶ್ಚಾತ್ಯ ದೇಶಗಳಿಗೆ ಹೋಗಿಯಾಗಲೀ ಅಥವಾ ಯಾವುದಾದರೊಂದು ಪಾಶ್ಚಾತ್ಯ ಕ್ರಮದ ಪ್ರಯೋಗ ಶಾಲೆಯಲ್ಲಾಗಲೀ ವೈಜ್ಞಾನಿಕ ಅಭ್ಯಾಸ ಮಾಡಿದವರಲ್ಲ. ಇವರು ಇಂಡಿಯದಲ್ಲೇ ಹುಟ್ಟಿ ಇಲ್ಲೇ ಬೆಳೆದು ಇಲ್ಲೇ ಅಭ್ಯಾಸ ಮಾಡಿ ಅನೇಕ ಕಷ್ಟಗಳನ್ನು ಎದುರಿಸಿ ತಮಗೆ ತಾವೇ ವೈಜ್ಞಾನಿಕ ಆವಿಷ್ಕಾರಗಳನ್ನು ಮಾಡಿ ಜಗತ್ತನ್ನೇ ಚಕಿತಗೊಳಿಸಿದರು. ಪೌರ್ವಾತ್ಯ ವೈಜ್ಞಾನಿಕರಲ್ಲಿ "ನೋಲೆಬ್ ಪ್ರೈಜ್" ದೊರೆತುದು ಇವರಿಗೇ ಮೊದಲು.

೧೮೮೮ನೇ ಇಸವಿ ನವಂಬರ ೭ನೇ ತಾರೀಕಿನಲ್ಲಿ ಆಚಾರ್ಯ ರಾಮನ್ನರ ಜನ್ಮವು ತಿರುಚಿನಾಪಳ್ಳಿಯ ಒಂದು ಸಾಮಾನ್ಯ ಗ್ರಾಮದಲ್ಲಾಯಿತು. ಇವರ ತಂದೆಯವರಾದ ಚಂದ್ರ ಶೇಖರ ಅಯ್ಯರರು ಅಲ್ಲಿಯ ಒಂದು ಕಾಲೇಜಿನ ಗಣಿತಾಚಾರ್ಯರಾಗಿದ್ದರು.

ಇವರ ಬಾಲ್ಯವಸ್ಥೆಯಲ್ಲೇ ಇವರು ಬಹಳ ಚುರುಕುಳ್ಳವರಾಗಿದ್ದರು. ತನ್ನ ಹದಿನಾರನೇ ವರ್ಷದಲ್ಲಿ ಬಿ. ಎ.ಯ ಒಂದನೇ ತರಗತಿಯಲ್ಲಿ ಪಾಸಾದರು. ಎಂ. ಎ. ಪರೀಕ್ಷೆಯಲ್ಲಿ ಅಷ್ಟರ ವರೆಗೆ ಯಾರೂ ಪಡೆಯದಷ್ಟು ಮಾರ್ಕು ಪಡೆದು ಸರ್ವ ಪ್ರಥಮವಾಗಿ ಪಾಸಾದರು. ಇವರು ತನ್ನ ಹದಿನಾರನೇ ವರ್ಷದಲ್ಲಿ ಬರೆದ ಒಂದು ಲೇಖವು ಲಂಡನಿನ ವೈಜ್ಞಾನಿಕ ಪತ್ರವಾದ "ಫಿಲಾಸಫಿಕಲ್ ಮೆಗಜಿನ್"ನಲ್ಲಿ ಪ್ರಸಿದ್ಧವಾಗಿತ್ತು.

೧೯೦೭ರಲ್ಲಿ ಅರ್ಥ ವಿಭಾಗದ ಅಧಿಕಾರಿಗಳನ್ನು ನಿಯಮಿಸಲಿಕ್ಕಾಗಿ ನಡೆದ ಪರೀಕ್ಷೆಯಲ್ಲಿ ಸಮಗ್ರ ಭರತ ಖಂಡದಲ್ಲೇ ಸರ್ವ ಪ್ರಥಮರಾಗಿ ಬಂದರು. ಕೂಡಲೇ ಇವರು ಭಾರತ ಸರಕಾರದ ಆರ್ಥಿಕ ವಿಭಾಗದ ಡಿಪ್ಯುಟಿ ಡಾಯರೆಕ್ಟರ್ ಜನರಲರಾಗಿ ನಿಯುಕ್ತರಾದರು. ಸರಕಾರಿ ಕೆಲಸಗಳನ್ನು ಮಾಡುತ್ತಿದ್ದಾಗಲೇ ಇವರು ತನ್ನ ವೈಜ್ಞಾನಿಕ ಅನ್ವೇಷಣಗಳನ್ನು ಕೂಡ ನಡೆಸುತ್ತ ಬಂದರು.

ಇವರ ವೈಜ್ಞಾನಿಕ ಮೂಲ ತತ್ವಗಳನ್ನು ನೋಡಿ ಸರ್ ಆಶುತೋಷ ಮುಖರ್ಜಿಯವರು ಬಹಳ ಆಶ್ಚರ್ಯಪಟ್ಟರು. ಮುಖರ್ಜಿಯವರು ಕಲ್ಕತ್ತಾ ವಿಜ್ಞಾನ ಮಹಾ ವಿದ್ಯಾಲಯದ "ಪಾಲಿತ ಚೆಯರಿ"ಗಾಗಿ ಇವರನ್ನು ಆರಿಸಿದರು. ಇವರು ಅಧಿಕವಾದ ದ್ರವ್ಯ ಸಂಕಟದಲ್ಲಿದ್ದರೂ ತನ್ನ ಸರಕಾರಿ ಉದ್ಯೋಗಕ್ಕೆ ರಾಜಿನಾಮೆಯಿತ್ತು ಆ ಸ್ಥಾನವನ್ನು ಸ್ವೀಕರಿಸಿ ೧೯೧೭ರಿಂದ ಇಂದಿನ ವರೆಗೂ ಅದೇ ಸ್ಥಾನದಲ್ಲಿ ವಿರಾಜಮಾನರಾಗಿದ್ದಾರೆ.

ಕಲ್ಕತ್ತೆಯ "The Indian Association for the Cultivation of Science" ಎಂಬ ಸಂಸ್ಥೆಯಲ್ಲಿ ರಾಮನರು ಸದಸ್ಯರಾಗಿಯೂ ಆ ಮೇಲೆ ಮಂತ್ರಿಯಾಗಿಯೂ ಕೆಲಸ ಮಾಡಿದರು. ಇವರು ಧ್ವನಿಗು ವಿಜ್ಞಾನದ ವಿಷಯವಾಗಿ ಅನೇಕ ಮೌಲಿಕ ಆವಿಷ್ಕಾರಗಳನ್ನು ಮಾಡಿದ್ದಾರೆ.

ಸನ್ ೧೯೨೧ರಲ್ಲಿ ಇವರು ಸಮುದ್ರ ನೀರು ನೀಲವಾಗಿ ಕಾಣುವುದರ ಕಾರಣವನ್ನು ಕಂಡು ಹಿಡಿದರು. ಈ ವಿಷಯವನ್ನು ಇಷ್ಟರ ವರೆಗೆ ಯಾವ ವೈಜ್ಞಾನಿಕನೂ ಕಂಡು ಹಿಡಿಯಲಿಲ್ಲ. ಇವರ ಈ ಸಿದ್ಧಾಂತವನ್ನು ಎಲ್ಲರೂ ಒಪ್ಪುತ್ತಾರೆ. ಇದೇ ವರ್ಷ ಕಲ್ಕತ್ತಾ ವಿಶ್ವಾವಿದ್ಯಾಲಯವು ಇವರನ್ನು ಡೀ. ಎಸ್-ಸೀ. ಉಪಾಧಿಯಿಂದ ಸನ್ಮಾನಿಸಿತು.

ಇವರು ೧೯೨೪ರಲ್ಲಿ ಹೊರಟು ಯುರೋಪ್ ಅಮೇರಿಕಾ, ರಷ್ಯಾ, ಮೊದಲಾದ ದೇಶಗಳಲ್ಲಿ ಸಂಚರಿಸಿ ಬೇಕಾದಷ್ಟು ಬಹುಮಾನ ಪಡೆದು ೧೯೨೫ರಲ್ಲಿ ಭಾರತಕ್ಕೆ ಬಂದರು.

೧೯೨೮ರಲ್ಲಿ ಮದ್ರಾಸಿನಲ್ಲಿ ನಡೆದ ಭಾರತೀಯ ವೈಜ್ಞಾನಿಕ ಕಾಂಗ್ರೆಸಿಗೆ ಇವರು ಅಧ್ಯಕ್ಷರಾದರು. ಇದೇ ವರ್ಷ ಇವರ ಗುಣಗಳಿಗಾಗಿ ಇವರಿಗೆ ಸರಕಾರವು 'ಸರ್' ಬಿರುದನ್ನು ಕೊಟ್ಟಿತು.

ಕಳೆದ ವರ್ಷ 'ನೋಬೆಲ್ ಪ್ರೈಜ್' ಕೂಡ ಇವರಿಗೆ ದೊರೆಯಿತು. ಈ ಪುರಸ್ಕಾರ ಘೋಷಣೆಯ ನಾಲ್ಕು ದಿನಗಳಿಗೆ ಮೊದಲು ಲಂಡನಿನ ರಾಯಲ್ ಸೊಸ್ಯಾಟಿಯು ಇವರಿಗೆ "ಹನ್ಸ" ಪದಕವನ್ನು ಸನ್ಮಾನಿಸಿತು.

# ಬಡತನ

(ಕವಿತೆ)

೧

ದುಗುಡವೊಂದು ರೂಪುಗೊಂಡು ಜಗಕೆ ಬಂದಿತೊ!
ಜಗದಿ ಭರತ ಭುವಿಯು ಕಂಡು ಮೋದಗೊಂಡಿತೊ!
ಭರತ ಭುವಿಯೊಳಸಿಶ ನೆಲಸಿ,
ಬರಳ ತರಿಸಿ ಜನರ ಕೊಲಿಸ್ಸಿ,
ಪರಮ ಯಶವ ಮಣ್ಣುಗೊಳಿಸಿ,
ಭರತಜರನು ದೀನರೆನಿಸಿ,
ದುಗುಡವೊಂದು ರೂಪುಗೊಂಡು ಜಗಕೆ ಬಂದಿತೊ!
ಜಗದಿ ಭರತ ಭುವಿಯು ಕಂಡು ಮೋದಗೊಂಡಿತೊ!

೨

ಕಾಡುಗಿಚ್ಚಿನಂತೆ ಭರತ ವನವ ಮುಸುಕಿತು—
ಗಾಢ ಜಾಲ ಬಲದಿ ಜನರಿಗಳಲ ನೀಡಿತು.
ಅಶಾಂತಿ ಸಂತತಿಯನು ಬೀರಿ,
ಹಸಿದ ದೀನರಸುವ ಹೀರಿ,
ರಸೆಗೆ ವಿಗಡ ಮೊಗವ ತೋರಿ
ಶ್ವಸನನಂತೆ ಹಾರಿ ಹಾರಿ
ಕಾಡುಗಿಚ್ಚಿನಂತೆ ನಮ್ಮ ನಾಡ ಮುಸುಕಿತು.
ಗಾಢ ಜಾಲ ಬಲದಿ ಜನರಿಗಳಲ ನೀಡಿತು—

೩

ಕೂಳು ಸಿಗದ ಜನರ ಗೋಳು ಜಗವ ತುಂಬಿತು.
ಲೀಲೆಯಳಿದು ರಸೆಯು ಮಸಣ ಸದೃಶವಾಯಿತು.
ಹೊಟ್ಟೆ ಬಟ್ಟೆಗಾಗಿ ಚಿಂತೆ-
ಒಟ್ಟು ಬಳಲಿ ಪೆಣಗಳಂತೆ-
ಸತ್ವ ಹೀನರಾಗಿ ಮೊಗವ-
ನೆತ್ತಿ ಮೊರೆಯುಲಳುಕುತಿರುವ-
ಕೂಳು ಸಿಗದ ಜನರ ಗೋಳು ಜಗವ ತುಂಬಿತು.
ಲೀಲೆಯುಳಿದು ರಸೆಯು ಮಸಣ ಸದೃಶವಾಯಿತು.

೪

ಹಿಂದಣಮಿತ ವಿಭವ ಭಾಗ್ಯ ತೇಜವಡಗಿತು.
ಇಂದು ಭರತ ಭುವಿಯಧೋಗತಿಯುನಡರಿತು.
ಲಲಿತ ಕಲೆಗಳೆಲ್ಲ ಪಳಿದು-
ಸಲೆಯ ಧರ್ಮಬಿಜಯುಪಡೆದು-
ಪಾರತಂತ್ರ್ಯ ಮಾರ್ಗವಿಡಿಯೆ,
ಭಾರತಾಂಬೆ ಬನ್ನಪಡೆಯೆ,
ಹಿಂದಣಮಿತ ವಿಭವ ಭಾಗ್ಯ ತೇಜವಡಗಿತು.
ಇಂದು ಭರತ ಭುವಿಯಧೋಗತಿಯುನಡರಿತು.

೫

ಕಾವ್ಯ ಶಾಸ್ತ್ರ ರಚನ ಶಕ್ತಿಯಡಗಿ ಹೋಯಿತು.
ಜೀವವಿಹುದೆ ಜನರಿಗಮಿತ ಕಷ್ಟವೆನಿಸಿತು-
ಕಾರ್ಯವಡಗಿ, ವೀರ್ಯ ತೊಲಗಿ,
ಪೌರುಷತ್ವ ಹೀನರಾಗಿ,
ಧಾರಿಣಿಯಲಿ ನಿಂದ್ಯರಹರ-
ಧೀರರಾದ ಭಾರತಿಜರ-
ಕಾವ್ಯ ಶಾಸ್ತ್ರ ರಚನ ಶಕ್ತಿಯಡಗಿ ಹೋಯ್ತಿತು.
ಜೀವವಿಹುದೆ ಜನರಿಗಮಿತ ಕಷ್ಟವೆನಿಸಿತು.

೬

ಶರಣು ಪ್ರಲಯ ವಹ್ನಿ ದಾರಿದ್ರ್ಯ ದೇವತೆ,
ಭರತ ಭುವಿಯೊಳೇಕೆ ಕಾರುಣ್ಯಹೀನತೆ!
ಕಾಲನಂತೆ ಜೀವ ತೆಗೆದೆ,
[illegible] ವಿಷವನುಗಿಡೆ,
[illegible]
[illegible]
ಶರಣು ಪ್ರಲಯ ವಹ್ನಿ! ದಾರಿದ್ರ್ಯ ದೇವತೆ!
ಭರತ ಭುವಿಯೊಳೇಕೆ ಕಾರುಣ್ಯ ಹೀನತೆ!

'ಗೋಪಾಲಕೃಷ್ಣ'

# ಮಹಾತ್ಮ ಟಾಲ್‌ಸ್ಟಾಯ್

ಲೇಖಕರು:— ಶ್ರೀ. ಬಿ. ಪಾಂಡುರಂಗರಾವ್, ಬೆಂಗಳೂರು

ನಮ್ಮ ತಾಯ್ನಾಡಿನ ಪ್ರಖ್ಯಾತ ಪುರುಷರಾದ ಮಹಾತ್ಮ ಗಾಂಧಿಯವರು ಪಾಶ್ಚಾತ್ಯ ದೇಶದ ಪ್ರಸಿದ್ಧ ಪುರುಷನೊಬ್ಬನನ್ನು ತಮ್ಮ ಗುರುವೆಂದು ಎಷ್ಟೋ ಸಲ ಹೇಳಿದ್ದಾರೆ. ಆ ಪುಣ್ಯ ಜೀವಿಯೇ ರಷ್ಯಾ ದೇಶದ ಕವಿ ತಿಲಕ, ಋಷಿ ಮಹಾತ್ಮ ಟಾಲ್‌ಸ್ಟಾಯ್‌ರವರು.

ಟಾಲ್‌ಸ್ಟಾಯ್‌ರವರು ಹತ್ತೊಂಬತ್ತನೆಯ ಶತಮಾನದವರು— ಅಂದರೆ ೧೮೨೮ರಲ್ಲಿ ಹುಟ್ಟಿ ತಮ್ಮ ಜೀವಮಾನದಲ್ಲಿ ಬಹಳ ದಿವಸಗಳನ್ನು ಹಿಂದಿನ ಶತಮಾನದಲ್ಲಿಯೇ ಕಳೆದು ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಈ ಲೋಕವನ್ನು ಬಿಟ್ಟವರು.

ಟಾಲ್‌ಸ್ಟಾಯ್‌ರವರು ರಷ್ಯಾ ದೇಶದಲ್ಲಿ ಶ್ರಿಮಂತರ ಕುಲದಲ್ಲಿ ಹುಟ್ಟಿ ಸಕಲ ಸುಖಗಳನ್ನೂ ಅನುಭವಿಸಿದರು. ಅವರ ತಂದೆಯು ಆ ದೇಶದ ಚಕ್ರವರ್ತಿ ಜ್ಹಾರನ ಸ್ನೇಹಿತನಾಗಿದ್ದನೆಂದರೆ ಟಾಲ್‌ಸ್ಟಾಯ್‌ರವರ ಮನೆತನವು ಎಷ್ಟು ಪ್ರಖ್ಯಾತಿ ಹೊಂದಿರಬೇಕು? ಅಲ್ಲದೆ ಅವರ ಮನೆಯು ಎಷ್ಟು ಐಶ್ವರ್ಯದಿಂದ ಕೂಡಿರಬೇಕು?

ಟಾಲ್‌ಸ್ಟಾಯ್‌ರು ಬಾಲ್ಯದಿಂದಲೂ ತಮ್ಮ ಕಾಲವನ್ನು ದುರುಪಯೋಗ ಪಡಿಸಿದವರಲ್ಲ. ಚಿಕ್ಕಂದಿನಲ್ಲಿ ಸೃಷ್ಟಿ ಸೌಂದರ್ಯೋಪಾಸಕರಾಗಿ ಯಾವ ಗುರಿಯೂ ಇಲ್ಲದೆ ತಂದೆಯ ತೋಟದಲ್ಲಿ ಅಡ್ಡಾಡುತ್ತಾ ಸೃಷ್ಟಿಯ ಸೊಬಗು ವೈಚಿತ್ರವನ್ನೇ ತಮ್ಮ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳುವರು. ಆಗಾಗ ಆ ತೋಟದಲ್ಲಿ ಕುಳಿತು ಮನುಷ್ಯನ ಹಣೆಯ ಬರಹದ ವಿಷಯವಾಗಿ ಹಲವು ಗಂಟೆಗಳ ಕಾಲ ಚಿಂತಿಸುವರು. ಒಂದು ದಿವಸ ಅವರು ಇನ್ನೂ ಚಿಕ್ಕವರಾಗಿದ್ದಾಗ, ಒಂದು ದೊಡ್ಡ ಪುಸ್ತಕವನ್ನು ತೆಗೆದುಕೊಂಡು ಕೈಯನ್ನು ಉದ್ದವಾಗಿ ಚಾಚಿ ಮೊಣ ಕೈಯ್ಯ ಮೇಲೆ ಆ ಭಾರವಾದ ಪುಸ್ತಕವನ್ನು ಇಟ್ಟುಕೊಂಡಿದ್ದು, ಇತರರು ಯಾತನೆಯನ್ನು ಹೇಗೆ ಅನುಭವಿಸುವರೋ ಎಂಬುದನ್ನು ತಿಳಿದುಕೊಂಡರಂತೆ. ಮತ್ತೊಂದು ವೇಳೆಯಲ್ಲಿ ಅವರು ತಮ್ಮ ಬಾಲ್ಯದಲ್ಲಿ ಮನೆಯ ಬಿಸಿಲ ಮಚ್ಚಿನ ಮೇಲೆ ಹೋಗಿ ಒಂದು ಹಗ್ಗವನ್ನು ತೆಗೆದುಕೊಂಡು ತಮ್ಮ ಸೊಂಟಕ್ಕೆ ಬಿಗಿದುಕೊಂಡು ನೇತಾಡುತ್ತಿದ್ದು, ಬಹಳ ನೋವಾದಾಗ, ಆ ಕಷ್ಟದಿಂದ ಪಾರಾಗಿ ಬಂದು ಇತರರ ಕಷ್ಟವೇನೆಂಬುದರ ಸೂಕ್ಷ್ಮವನ್ನು ಅರಿತುಕೊಂಡರಂತೆ. ಸಾಮಾನ್ಯವಾಗಿ ಎಳೆಯವರಾದವರಿಗೆ ತಿಂಡಿ ಯೋಚನೆ ಬಿಟ್ಟು ಬೇರೆ ಯೋಚನೆಯಿಲ್ಲ; ಆದರೆ ಇತರ ಹುಡುಗರಷ್ಟೇ ಚಿಕ್ಕವರಾಗಿದ್ದಾಗ ಟಾಲ್‌ಸ್ಟಾಯ್‌ರವರು ಅನೇಕ ವೇಳೆ ನಿದ್ರೆ ತೊರೆದು, ಊಟ ತಿಂಡಿಗಳ ಯೋಚನೆ ಬಿಟ್ಟು „ನಾನು ಮನುಷ್ಯನಾಗಿ ಹುಟ್ಟಿದ್ದಕ್ಕೆ ಇತರರಿಗೋಸ್ಕರ ಮಾಡತಕ್ಕ ಕರ್ತವ್ಯವೇನು? ಎಂದು ಯೋಚಿಸುತ್ತಿದ್ದರಂತೆ.

ಟಾಲ್‌ಸ್ಟಾಯ್‌ರವರು ದೊಡ್ಡವರಾಗಿ ಬೆಳೆಯುತ್ತಾ ಬಂದ ಹಾಗೆ ಅವರನ್ನು ಮಾಯೆಯಾವರಿಸಿತು. ವಿದ್ಯಾಭ್ಯಾಸಕ್ಕಾಗಿ ಮಾಸ್ಕೋ ನಗರಕ್ಕೆ ತೆರಳಿದ ಟಾಲ್‌ಸ್ಟಾಯ್‌ರು ಜೂಜುಗಾರರಾಗಿ ಬಹಳ ಹಣ ಕಳೆದುಕೊಂಡು ದುಂದುಗಾರಿಕೆಯನ್ನು ಕಲಿತುಕೊಂಡರು. ಚಿಕ್ಕತನದಲ್ಲಿ ಬಡವರಿಗಾಗಿ ಯೋಚಿಸುತ್ತಿದ್ದ ಟಾಲ್‌ಸ್ಟಾಯಿಯವರಲ್ಲಿ ಇಸ್ಪೀಟಾಡುವ ಯೋಚನೆಯು ತಲೆದೋರಿತು. ಕೊನೆಗೆ ಈ ಕೆಟ್ಟಾಟದ ಪರಿಣಾಮವಾಗಿ ಅವರು ಕೈಯ್ಯಲ್ಲಿದ್ದ ಹಣವನ್ನು ಕಳೆದುಕೊಂಡು ಪಟ್ಟಣವನ್ನು ತ್ಯಜಿಸಿ ಹಳ್ಳಿಯನ್ನು ಸೇರಿದರು. ಅಲ್ಲಿ ತಿಂಗಳ ಜೀವನವನ್ನು ಹತ್ತು ರೂಪಾಯಿಗಳಲ್ಲಿಯೇ ನಡೆಸುತ್ತಾ ಮಿತವ್ಯಯ ಮಾಡುವುದನ್ನು ಕಲಿತುಕೊಂಡು ತಾವು ಕಳೆದುಕೊಂಡ ಹಣವೆಲ್ಲವನ್ನೂ ಕೂಡಿ ಹಾಕುವ ತನಕ ಅಲ್ಲಿಯೇ ಇದ್ದರು. ೧೮೮೧ರಲ್ಲಿ ಸೈನ್ಯಕ್ಕೆ ಸೇರಿ ಅನೇಕ ಜನರನ್ನು ಯುದ್ಧದಲ್ಲಿ ಕೊಂದರಂತೆ. ದಯೆಗೆ ಸ್ಥಾನವಾದ ಅವರ ಹೃದಯವು ಆಗ ಕಲ್ಲಿನಷ್ಟು ಕಠಿಣವಾಯಿತು. ಆಗ ಅವರು ಮಾಡಿದ ಕೆಲಸಗಳು ಎಷ್ಟು ಹೇಯವಾಗಿದ್ದುವೆಂಬುದನ್ನು ಅವರೇ ಬರೆದಿದ್ದಾರೆ. ಬೆವರಿನಿಂದ ದುಡಿದು ಹಣ ಸಂಪಾದಿಸುತ್ತಿದ್ದ ರೈತರನ್ನು ಸುಲಿಗೆ ಮಾಡಿದರಂತೆ. ಎಷ್ಟೋ ನಿಷ್ಕಪಟಿಗಳನ್ನು ಕ್ರೂರವಾಗಿ ದಂಡಿಸಿದರಂತೆ. ಅವರು ಬಹಳ ದಿವಸ ಸೈನ್ಯದಲ್ಲಿಯೂ ಇರಲಿಲ್ಲ. ಅಂತೂ, ಕೆಲವು ವರ್ಷಗಳ ತರುವಾಯ ಅವರ ಜೀವಮಾನದಲ್ಲಿ ಒಂದು ದೊಡ್ಡ ಬದಲಾವಣೆಯಾಯಿತು. ಎಷ್ಟೋ ಸಲ ತಮ್ಮ ತಪ್ಪುಗಳಿಗೆ ತಾವೇ ಪಶ್ಚಾತ್ತಾಪಪಟ್ಟು ಆತ್ಮಹತ್ಯೆ ಕೂಡ ಮಾಡಿಕೊಳ್ಳಲು ಹವಣಿಸಿ ತಪ್ಪಿಗಾದರಂತೆ. ಕೆಟ್ಟ ಕೆಲಸಗಳೆಲ್ಲವನ್ನೂ ಪಶ್ಚಾತ್ತಾಪದ ಬೆಂಕಿಯಲ್ಲಿ ದಹಿಸಿ ಟಾಲ್‌ಸ್ಟಾಯ್‌ರವರು ಪರಿಶುದ್ಧಾತ್ಮರಾದರು. ಪಶ್ಚಾತ್ತಾಪಕ್ಕಿಂತ ಅತ್ಯುತ್ತಮ ಔಷಧವು ಬೇರೊಂದಿಲ್ಲ.

ತರುವಾಯ ಟಾಲ್‌ಸ್ಟಾಯ್‌ರವರು ತಮ್ಮ ದೇಶದ ಜನ ಜೀವನವನ್ನು ಸುಧಾರಿಸಲು ಸೊಂಟ ಕಟ್ಟಿ ನಿಂತರು. „ದರಿದ್ರ ನಾರಾಯಣರ ಸೇವೆಯೇ ದೇವರ ಸೇವೆ" ಎಂದು ತಿಳಿದು ಜನರಿಗೆ ಅನೇಕ ಬಗೆಯಲ್ಲಿ ಸಹಾಯ ಮಾಡತೊಡಗಿದರು. ಅವರ ಜಮೀನುಗಳಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರಿಗೋಸ್ಕರ ಪಾಠಶಾಲೆಗಳನ್ನು ಕಟ್ಟಿಸಿದರು. ಆಸ್ಪತ್ರೆಗಳನ್ನು ಏರ್ಪಡಿಸಿದರು. ಬಡ ಕೆಲಸಗಾರರ ಅಭಿವೃದ್ಧಿಯ ಕಡೆ ಗಮನ ಕೊಡುತ್ತ ಬಂದರು. ಬಡವರಿಗೋಸ್ಕರ ಒಂದು ಧರ್ಮಾಲಯವನ್ನು ಮಾಸ್ಕೋ ನಗರದಲ್ಲಿ ಕಟ್ಟಿಸಿದರು. ತಮ್ಮ ಕಾಲವನ್ನೇ ಬಡವರಿಗೋಸ್ಕರ ವಿನಿಯೋಗಿಸುತ್ತಾ ಎಲ್ಲರ ಆದರಕ್ಕೂ ಪಾತ್ರರಾದರು.

ಈ ರೀತಿಯಲ್ಲಿ ಉಪಕಾರ ಮಾಡಿ ಟಾಲ್‌ಸ್ಟಾಯ್‌ರವರು ಕೊನೆಗೆ ಮಹಾತ್ಮಾ ಟಾಲ್‌ಸ್ಟಾಯ್‌ರಾದರು. ನಮ್ಮ ನನ್ನಿಯ ನಾಡಿನ ಋಷಿಗಳಂತೆ ಅವರನ್ನೂ ಒಬ್ಬ ಋಷಿಯೆಂದು ಪ್ರಪಂಚವೇ ಅರಿಯತೊಡಗಿತು. ಮಹಾತ್ಮಾ ಗಾಂಧಿಯವರೇ, ಟಾಲ್‌ಸ್ಟಾಯ್‌ರವರು ತಮಗೆ ಗುರುವೆಂದರು. ಬಡವರಿಗಾಗಿಯೇ ಕಷ್ಟದಿಂದ ನೊಂದು ಬೆಂದವರಿಗಾಗಿಯೇ, ತಮ್ಮ ಜೀವಮಾನವನ್ನೇ ಧಾರೆಯೆರೆದ ಪುಣ್ಯಪುರುಷ ಟಾಲ್‌ಸ್ಟಾಯ್‌ರವರು ಮಹಾತ್ಮರಲ್ಲವೇ? "ಪ್ರೀತಿಯೇ ದೇವರು" ಎಂಬುದು ಅವರ ಜೀವನದ ಮಂತ್ರವಾಗಿತ್ತು.

ಟಾಲ್‌ಸ್ಟಾಯ್‌ರವರು ಈ ರೀತಿಯಲ್ಲಿ ಬದುಕಿ ಈ ರೀತಿಯಲ್ಲಿ ಸಕಲರಿಗೂ ಉಪಕಾರಿಯಾಗಿದ್ದು ಕೊನೆಗೆ ತಮ್ಮ ೮೨ನೆಯ ವಯಸ್ಸಿನಲ್ಲಿ ೧೯೧೦ರಲ್ಲಿ ಈ ಲೋಕವನ್ನು ಬಿಟ್ಟರು. ಅವರು ಅನೇಕ ವಿಷಯಗಳ ಮೇಲೆ ಅನೇಕ ಗ್ರಂಥಗಳನ್ನು ಬರೆದು ಪ್ರಸಿದ್ಧರಾಗಿದ್ದಾರೆ. ಅವರ ಬರವಣಿಗೆಯಲ್ಲಿ ಅನೇಕ ತತ್ವಗಳಡಗಿವೆ. ಅನೇಕ ಬುದ್ಧಿವಾದಗಳು ಕಿರಿಯರಿಗೆ ಯೋಗ್ಯವಾಗಿವೆ. ಅವರು ಮಕ್ಕಳಿಗೆ ಬೋಧಿಸುವುದು "ಜಗಳವಾಡುವುದು ಪಾಪ. ಎಲ್ಲರಲ್ಲೂ ಸೌಹಾರ್ದಭಾವವಿರಬೇಕು" ಎಂದು. ಹಣವೆಂದರೆ ಅವರಿಗೆ ಆಗದು. ಅಧಿಕಾರವೆಂದರೆ ಸೇರದು. "ಹಣವೆಂದರೆ ಬಡವರಿಂದ ಕೆಲಸ ತೆಗೆಯುವ ಸಾಧನ"ವೆಂದು ಅವರ ಅರ್ಥ.

# ಅವನ ಸೇವೆ

ಲೇಖಕರು:—ಶ್ರೀ. ಕೆ. ಎ. ತಮ್ಮಯ್ಯ, ಬಿ. ಎ., ಕೊಡಗು.

ಕ್ರೈಸ್ತಾಬ್ದದ ಸಾವಿರದ ಐದು ನೂರ ಅರುವತ್ತೈದನೆಯ ಸಂವತ್ಸರದಲ್ಲಿ ಬಹಮನೀ ಮುಹಮ್ಮದೀಯ ಅರಸರಿಂದ ವಿಜಯನಗರಸಾಮ್ರಾಜ್ಯವು ನಾಶವಾಗಿ ಹೋಯಿತಷ್ಟೆ! ಆದರೂ, ವಿಜಯನಗರ ರಾಜ್ಯವು ಸಂಪೂರ್ಣ ನಾಶವಾಗಿ ಹೋಯಿತೆಂದು ಹೇಳಲಿಕ್ಕಾಗುವುದಿಲ್ಲ—ವಿಜಯನಗರ ರಾಜ್ಯವು ನಂದಿ ಹೋದರೂ, ದಕ್ಷಿಣ ಹಿಂದೂಸ್ಥಾನದಲ್ಲಿ ಹಿಂದೂ ಅರಸರ ಏಳಿಗೆಗೆ ಯಾವ ಕೊರತೆಯೂ ಇರಲಿಲ್ಲ. ಮುಹಮ್ಮದೀಯ ಅರಸರು, ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ವಿಜಯ ನಗರವನ್ನು ನೆಲಸಮ ಮಾಡಿ, ಅಲ್ಲಿಯ ನಗನಾಣ್ಯಗಳನ್ನು ಕೊಳ್ಳೆ ಹೊಡೆದುಕೊಂಡು, ರ್‍ಯಾಚೂರ್, ಮುದ್ಕಲ್, ಮಧ್ಯಪ್ರಾಂತ್ಯಗಳನ್ನು ಮಾತ್ರ ವಶ ಮಾಡಿಕೊಂಡರೇ ಹೊರತು, ಹಿಂದೂ ಸಾಮ್ರಾಜ್ಯಕ್ಕೆ ಸೇರಿದ ಯಾವತ್ತೂ ಪ್ರದೇಶವನ್ನೂ ತಮ್ಮ ವಶ ಪಡಿಸಿಕೊಳ್ಳಲಿಲ್ಲ.

ವಿಜಯನಗರ ರಾಜಮನೆತನಕ್ಕೆ ಸೇರಿದ ಅನೇಕ ಹಿಂದೂ ಅರಸರು ಬೇರೆ ಬೇರೆ ಕಡೆಗಳಿಗೆ ಪಲಾಯನ ಮಾಡಿ ಬೇರೆ ಬೇರೆ ರಾಜ್ಯಗಳನ್ನೂ ಪಾಳಯಗಳನ್ನೂ ನಿರಂಕುಶವಾಗಿ ಸ್ಥಾಪಿಸಿಕೊಂಡರು. ಅನೇಕ ಪಾಳಯಗಳು ಒಂದು ಗ್ರಾಮವನ್ನೊಳಕೊಳ್ಳುವಷ್ಟು ದೊಡ್ಡದಾಗಿಲ್ಲದಿದ್ದರೂ, ಆ ಪಾಳಯದ ಒಡೆಯನು ತಾನೇಅರಸನೆಂದು ಕರೆದುಕೊಳ್ಳುವನಲ್ಲದೆ, ಮತ್ತೆ ಯಾವ ಅರಸನಿಗೂ ಆಶ್ರಿತನಾಗಿರದೆ, ನಿರಂಕುಶನಾಗಿ ತಾನೇ ತಾನಾಗಿ ಮೆರೆಯುವವನಾಗಿದ್ದನು. ಈ ಎಲ್ಲಾ ಪುಟ್ಟ ಅರಸರ ಪೂರ್ಣ ವಿಷಯವನ್ನು ಈಗ ಕೆಲವು ವರ್ಷಗಳಿಗೆ ಹಿಂದೆ ಪ್ರಕಾಶಿಸಲ್ಪಟ್ಟ ಹರಾಶ್ ಪಾದ್ರಿಯವರ "ಅರವೀಡು ಡ್ಯಾನಾಸ್ಟಿ" ಎಂಬ ಗ್ರಂಥದಿಂದ ತಿಳಿದುಕೊಳ್ಳಬಹುದು.

ಇದೇ ಸಮಯದಲ್ಲಿ, ಈಗಿನ ಮಂಗಳೂರು ನಗರಕ್ಕೆ ಒಳಪಟ್ಟ ಪ್ರಾಂತ್ಯದಲ್ಲೇ ನಾಲ್ಕು ಅರಸರು ರಾಜ್ಯಭಾರ ಮಾಡುತ್ತಿದ್ದುದು ಕಂಡು ಬರುತ್ತದೆ. ಕದ್ರೀ ಗುಡ್ಡದಲ್ಲಿ ಒಬ್ಬ ರಾಜನೂ, ಉರುವ ಗುಡ್ಡದಲ್ಲಿ ಮತ್ತೊಬ್ಬ ಅರಸನೂ, ಮಂಗಳೂರು ಮಧ್ಯದಲ್ಲಿ ಒಬ್ಬ ಅರಸನೂ, ಉಲ್ಲಾಳದಲ್ಲಿ ಒಬ್ಬಳು ರಾಣಿಯೂ, ಹೀಗೆ ನಾಲ್ವರು ರಾಜ್ಯಭಾರ ಮಾಡುತ್ತಿದ್ದರು.

ಉಲ್ಲಾಳದ ರಾಣಿಯು ಮಂಗಳೂರಿನ ಅರಸನಿಗೆ ಕೊಟ್ಟು ವಿವಾಹ ಮಾಡಲ್ಪಟ್ಟಿದ್ದಳು. ಮಂಗಳೂರಿನ ಅರಸನೂ ಉಲ್ಲಾಳದ ರಾಣಿಯೂ ದಂಪತಿಗಳಾಗಿದ್ದರೂ, ಅವರು ತಮ್ಮ ತಮ್ಮ ಸ್ಥಾನಗಳಲ್ಲೇ ಇರುತ್ತಿದ್ದರು. ಸಾಯಂಕಾಲದ ಕೆಲವು ಸಮಯ ಮಾತ್ರ ಇವರು ದಾಂಪತ್ಯ ನಡೆಸುತ್ತಿದ್ದರು. ಇದು ಮುಂದೆ ವಿವರಿಸಲ್ಪಡುವುದು.

ಶರತ್ಕಾಲ, ಪೌರ್ಣಮಿ. ಸೂರ್ಯನು ಆಗ ತಾನೇ ಅಸ್ತಂಗತನಾಗಿದ್ದಾನೆ. ದಿನಪನ ರಾಜ್ಯಭಾರವು ಮುಗಿಯಲು, ಲೋಕಾಧಿಪತ್ಯವನ್ನು ತಾನೇ ವಹಿಸುವೆನೆಂಬ ಅಹಂಕಾರದಿಂದಲೋ ಎಂಬಂತೆ ಪೂರ್ಣಿಮಾ ಚಂದ್ರನು ಶೋಡಷಕಲೆಗಳಿಂದ ಕೂಡಿದವನಾಗಿ, ಮುಗುಳ್ನಗೆಯನ್ನು ನಗುತ್ತಾ ಪೂರ್ವಾಕಾಶದಲ್ಲಿ ಏರಿಬರುತ್ತಿದ್ದನು. ಚಕ್ರವಾಕಗಳು ಆಗ ತಾನೆ ಹಾರಾಡಲು ಮೊದಲು ಮಾಡಿದುವು. ನಿಶಾಪತಿಯ ಆಗಮನದಿಂದ ಆನಂದಗೊಂಡಿತೋ ಎಂಬಂತೆ ಸಮುದ್ರವು ಭೋಂಕರಿಸುತ್ತಾ ಉಕ್ಕಿ ಹರಿಯಲು ಮೊದಲು ಮಾಡಿತ್ತು. ಮಂಗಳೂರಿಗೂ ಉಲ್ಲಾಳಕ್ಕೂ ಮಧ್ಯದಲ್ಲಿ, ಕೇವಲ ಶಾಂತವಾಗಿಯೇ ಹರಿಯುವ ಸರಸ್ವತೀ ನದಿಯ ಬಾಯಿಯಲ್ಲಿಯೂ ಸಮುದ್ರ ರಾಜನು ತನ್ನ ನೊರೆಯನ್ನೂ ಹುಡುಗಿಸಿ ಆಕೆಯನ್ನು ಅಲ್ಲೋಲ ಕಲ್ಲೋಲವಾಗಿ ಮಾಡಿ ಬಿಟ್ಟಿದ್ದಾನೆ.

ಮೊದಲೇ ಹೇಳಲ್ಪಟ್ಟಂತೆ, ಮಂಗಳೂರು ಅರಸನ ಮತ್ತು ಉಳ್ಳಾಲ ರಾಣಿಯ ದಾಂಪತ್ಯವು ಪ್ರತಿ ಸಾಯಂಕಾಲ ಕೆಲವು ಗಳಿಗೆಗಳ ವರೆಗೆ ಮಾತ್ರ ಸಾಗುತ್ತಿತ್ತು. ಇಬ್ಬರೂ ಸಾಯಂಕಾಲ ಸಮಯದಲ್ಲಿ ತಮ್ಮ ರಾಜ್ಯಗಳನ್ನು ವಿಭಾಗಿಸುವ ಈ ಸರಸ್ವತೀ ನದಿಯಲ್ಲಿ ಬಂದು ಸೇರುತ್ತಿದ್ದರು! ಇವರಿಗಾಗಿ, ದೊಡ್ಡದಾಗಿ ಅಲಂಕರಿಸಲ್ಪಟ್ಟ ಒಂದು ದೋಣಿಯು ಸಿದ್ಧವಾಗಿರುತ್ತಿತ್ತು. ದೋಣಿಯನ್ನು ನಡೆಸಲು ಬೇಕಾದ ಕೆಲವು ಸೇವಕರನ್ನಲ್ಲದೆ, ಇತರ ಪರಿವಾರದವರನ್ನೆಲ್ಲಾ ದಡದಲ್ಲಿ ಬಿಟ್ಟು, ಇವರು, ಈ ನದಿಯಲ್ಲಿ ವಿಹರಿಸುವರು!!

ಇಂದು—ಶರತ್ಕಾಲದ ಪೂರ್ಣಿಮಾ ದಿವಸ—ರಾಜರಾಣಿಯರು ಎಂದಿನಂತೆ ಸರಸ್ವತೀ ನದಿಯಲ್ಲಿ ಸಂಜೆ ಸೇರಿದ್ದರು. ಇವರು ನದಿಗಿಳಿದೊಡನೆಯೇ ಮೀನು ಹಿಡಿಯುತ್ತಿದ್ದ ಬೆಸ್ತರೆಲ್ಲರೂ, ದಡವನ್ನು ಸೇರಿದರು. ಇವರೊಂದಿಗೆ, ದೋಣಿ ನಡೆಸುವ ಇಬ್ಬರು ಮೂವರು ಮಾತ್ರ ಜನರಿದ್ದರು.

ಈ ದಿನ, "ಚಂದ್ರನೆಂಬ ಸಾಣೆಯಿಂದ ಹೊಸತಾಗಿ ಮಸೆಯಲ್ಪಟ್ಟ ಮಾರನಸ್ತ್ರಂಗಳು" ಇವರ ಮೇಲೆ ಅತಿಯಾಗಿ ಕವಿಯಲ್ಪಟ್ಟುದರಿಂದಲೋ, ಅಥವಾ ಅತಿಶೀತಲವಾಗಿ ಬೀಸುವ ಸಮುದ್ರ ಪವನದಿಂದಲೋ, ಅಥವಾ ದಿನಕ್ಕೆ ತುಸು ಹೊತ್ತು ಮಾತ್ರ ಒದಗುವ ಸುಸಮಯವನ್ನು ಬೇಗನೆ ಕಳೆದುಕೊಳ್ಳಬಾರದೆಂಬ ಬಯಕೆಯಿಂದಲೋ, ಇಬ್ಬರೂ

— ಏಳನೇ ಪುಟವನ್ನು ನೋಡುವುದು —

# ಮದಿರಾ ಭಕ್ತ

(ಸ್ವಕಪೋಲ ಕಲ್ಪಿತ)

ಲೇಖಕ—ಶ್ರೀ. ಎಮ್. ಅನಂತಯ್ಯ.

— ೧ —

ಲಕ್ಷಾಧಿಪತಿ ಸುರೇಂದ್ರ ರಾಯನಿಂದು ಭಿಕ್ಷಾಧಿಪತಿಯಾಗಿದ್ದಾನೆ. ಅರಮನೆಯಂತಹ ಮನೆಯು ಪರ್ಣಕುಟೀರವಾಗಿದೆ. ಸದಾ ದಾಸದಾಸಿಯರಿಂದ ಕೂಡಿದ್ದ ಗೃಹವು ಜನಶೂನ್ಯವಾಗಿದೆ. ಯಾವಾಗಲೂ ಗಾಯನದ ಮಧುರ ಗಾನದಿಂದ ಪರಿಪೂರ್ಣವಾಗಿದ್ದ ಗೃಹವು ಇಂದು ಹೊಟ್ಟೆಗಿಲ್ಲದೆ ಅಳುವ ಮಕ್ಕಳ ಧ್ವನಿಯಿಂದ ತುಂಬಿದೆ.

ಸುರೇಂದ್ರನ ಪತ್ನಿ ಶಾರದೆಯು ಮೂರು ದಿನಗಳಿಂದ ಹೊಟ್ಟೆಗಿಲ್ಲದೆ ಉಪವಾಸವಾಗಿದ್ದಾಳೆ. ಆಕೆಯ ಶರೀರದಲ್ಲಿ ಅಸ್ಥಿಚರ್ಮಗಳ ಹೊರತು (ಮತ್ತೇನೂ) ಒಂದು ಚಿಕ್ಕಾಸು ಕೂಡಾ ದೊರೆಯಲಿಕ್ಕಿಲ್ಲ. ನಿನ್ನೆಯ ವರೆಗೆ ಇದ್ದ ಮಂಗಲ ಸೂತ್ರವು ಇಂದು ಮದಿರಾ ದೇವಿಯ ಗೃಹವನ್ನು ಸೇರಿದೆ. ಒಂದು ಕಡೆ ಹೊಟ್ಟೆಗಿಲ್ಲದ ಚಿಕ್ಕ ಮಕ್ಕಳು ಅತ್ತು ಅತ್ತು ಬಸವಳಿದು ಬಿದ್ದಿವೆ. ಇನ್ನೂ ಹಸುಗೂಸಾಗಿದ್ದ ಒಂದು ವರ್ಷದ ಮುದ್ದು ಕಂದಮ್ಮನು ಹಸಿವೆಯಿಂದ ಬಸವಳಿದು ನಿಮಿಷವನ್ನು ಲೆಕ್ಕ ಮಾಡುತ್ತಿತ್ತು. ಇನ್ನುಳಿದ ೩—೪ ವರ್ಷದ ಎರಡು ಚಿಕ್ಕ ಮಕ್ಕಳು ಕ್ಷೀಣವಾಗಿ ಬಿಳುಪೇರಿವೆ. ಮನೆಯಲ್ಲಿ ಒಂದು ಕಾಳು ಅಕ್ಕಿಯೂ ಕೂಡಾ ಇಲ್ಲ. ದಿನಕ್ಕೆ ಎಷ್ಟೋ ಜನರಿಗೆ ದಾನಧರ್ಮ ಮಾಡಿದ ಕೈ ಇಂದು ಬರಿದಾಗಿದೆ.

ಸುಮಾರು 7 ಅಥವಾ 8 ವರ್ಷಗಳ ಹಿರಿಯ ಮಗ ಆನಂದನು ಇಂದು ಚಿಕ್ಕ ಮಕ್ಕಳ ಗೋಳಾಟವನ್ನು ನೋಡಲಾರದೆ ಹೊರಗೆ ಭಿಕ್ಷೆಗೆ ಹೋಗಿದ್ದನು. ಸುರೇಂದ್ರ ರಾಯನಾದರೋ ಮನೆಯ ಕಡೆಯ ಗೋಷ್ಠಿಯನ್ನೇ ಬಿಟ್ಟು ಬಿಟ್ಟು ಮೋಹಿನಿಯ ಮನೆಯಲ್ಲಿ ಮದಿರಾ ದೇವಿಯೊಡನೆ ಸುಖ ಸಲ್ಲಾಪದಿಂದ ಕಾಲವನ್ನು ಕಳೆಯುತ್ತಿದ್ದಾನೆ. ಅವನಿಗೆ ಮನೆ ವಾರ್ತೆ ಸಂಗತಿ ತಿಳಿಯದೆ ಬಹಳ ದಿನಗಳಾಗಿದ್ದುವು. ಆದರೆ ಎರಡು ದಿನಗಳಿಗೊಮ್ಮೆ ಮನೆಗೆ ಬಂದು ಹೆಂಡತಿಯನ್ನು ಚೆನ್ನಾಗಿ ಥಳಿಸಿ, ಇದ್ದುದೇನನ್ನಾದರೂ ತೆಗೆದುಕೊಂಡು ಹೋಗಿಬಿಡುತ್ತಿದ್ದನು. ಒಂದು ವರ್ಷದ ಮುಂಚೆ ಆನಂದಸಾಗರದಂತಿದ್ದ ಮನೆಯು ಈಗ ಸ್ಮಶಾನದಂತಿದೆ. ಸುಗುಣಿಯಾದ ಸುರೇಂದ್ರನೀಗ ದುರ್ಗುಣಗಳಿಗೆ ತವರುಮನೆಯಂತಿದ್ದಾನೆ. ಸದಾ ದಯೆಯಿಂದ ತುಂಬಿದ್ದ ಅವನ ಹೃದಯವು ಈಗ ನಿರ್ದಯೆಯಿಂದ ತುಂಬಿದೆ.

— ೨ —

"ಅಮ್ಮಾ,"

"ಏನು ಮಗು?"

"ಈ ಹೊತ್ತು ಇಡೀ ಊರನ್ನು ಸುತ್ತಿದರೂ ಒಂದು ಹಿಡಿ ಅಕ್ಕಿ ಕೂಡಾ ದೊರೆಯಲಿಲ್ಲ."

"ಅಹಾ! ನಮ್ಮ ಅದೃಷ್ಟವೇ! "ಪಾಪಿ ಹೋದಲ್ಲಿ' ಮೊಣಕಾಲು ಸಮುದ್ರ"ವೆಂಬಂತೆ ಆಯಿತು. ಹಿಂದೆ ಇದೇ ಕೈಯಿಂದ ಸಾವಿರಾರು ಜನ ಬಡವರಿಗೆ ಭಿಕ್ಷೆ ನೀಡಿದ ಕೈಗೆ ಈ ಹೊತ್ತು ಒಂದು ಹಿಡಿ ಅಕ್ಕಿ ಕೂಡಾ ದೊರೆಯಲಿಲ್ಲವಲ್ಲ!" ಹೀಗೆಂದು ಹೇಳಿ ಬಿಕ್ಕಿ ಬಿಕ್ಕಿ ಅಳುತ್ತಾ ಶಾರದೆಯು ಕೆಳಗೆ ಬಿದ್ದುಬಿಟ್ಟಳು. ತಾಯಿಯ ಅಳುವನ್ನು ನೋಡಲಾರದೆ ಸುಂದರನು ಬಿಕ್ಕಿಬಿಕ್ಕಿ ಅಳಹತ್ತಿದನು.

ಹೀಗೆ ಬಹಳ ಹೊತ್ತಿನ ವರೆಗೆ ಅಳುತ್ತಾ ಕುಳಿತ ನಂತರ ಸುಂದರನು ಸಮಾಧಾನವನ್ನು ತಂದುಕೊಂಡು, "ಅಮ್ಮಾ, ಈಗೇನು ಮಾಡಲಿ? ಚಿಕ್ಕ ಮಕ್ಕಳ ಅಳುವನ್ನು ಕೇಳುವವರಾರು? ನಾವೇ ಅಳಹತ್ತಿದರೆ ನಮ್ಮನ್ನು ಸಂತೈಸುವವರಾರು? ದೀನ ದಯಾಳುವಾದ ಭಗವಂತನೇ ನಮ್ಮನ್ನು ಕಾಯಬೇಕು. ನಮ್ಮ ಕಷ್ಟವನ್ನು ನಾವು ಅನುಭವಿಸದೆ ಯಾರು ತಾನೇ ಅನುಭವಿಸುವರು? ಸುಮ್ಮನಿರು, ಬಂದದ್ದನ್ನು ಅನುಭವಿಸಲೇ ಬೇಕು" ಎಂದನು.

ಮಗನ ಮಾತನ್ನು ಕೇಳಿ ಶಾರದೆಯು ಇದ್ದುದರಲ್ಲಿಯೇ ಸಮಾಧಾನವನ್ನು ತಂದುಕೊಂಡು, "ಮಗು! ಈಗೇನು ಮಾಡಲಿ?" ಎಂದಳು.

"ಅಮ್ಮಾ, ನಾನೇನು ಹೇಳಲಿ" ಎಂದನು.

ಸರಿ, ಮೊದಲಾಯಿತು ತಿರುಗಿ ಗೋಳಾಟಕ್ಕೆ! ಈ ಅಳುವನ್ನು ಕೇಳಿ ಉಳಿದ ಎಲ್ಲಾ ಮಕ್ಕಳೂ ಅಳಲಿಕ್ಕೆ ತೊಡಗಿ, 'ಅಮ್ಮಾ, ಹಸಿವಾಗುತ್ತದೆ. ಅನ್ನ ಕೊಡು" ಎಂದು ರಂಬಾಟ ಮಾಡ ಹತ್ತಿದುವು. ಸ್ವಲ್ಪ ಸಮಯದ ನಂತರ ಸುಂದರನು ಸಮಾಧಾನಗೊಂಡು "ಅಮ್ಮಾ, ಅಳಬೇಡ, ಈ ಮಕ್ಕಳನ್ನು ಸುಮ್ಮನಿರಿಸು ನಾನು ಎಲ್ಲಿಯಾದರೂ ಹೋಗಿ ಏನಾದರೂ ಸಿಗುತ್ತದೋ ನೋಡಿಕೊಂಡು ಬರುತ್ತೇನೆ" ಎಂದು ಹೊರಟು ಹೋದನು. ಆದರೆ ಎಲ್ಲಿ ಹೋಗಲಿ? ಏನು ಮಾಡಲಿ? ಎಂಬುದು ತಿಳಿಯದೆ ದಯಾಹೀನನಾದ ಪಿತೃವಿನ ವಿಲಾಸ ಮಂದಿರದ ಕಡೆಗೆ ತೆರಳಿದನು.

— ೩ —

ಮೋಹಿನಿಯ ಗೃಹದಲ್ಲಿ ಈ ದಿನ "ರೌಂಡ್ ಟೇಬಲ್ ಕಾನ್ಫರೆನ್ಸ್" ಸೇರಿದೆ. ಪ್ರಶಸ್ತವಾದ ಬೈಠಕು ಖಾನೆಯಲ್ಲಿ ಮದಿರಾ ದೇವಿಯು ಮೇಜಿನ ಮೇಲೆ ಕುಳಿತ್ತಿದ್ದಾಳೆ. ಮೋಹಿನಿಯು ನೃತ್ಯವಾಡುತ್ತಾಳೆ. ಸರಿ, ಒಬ್ಬೊಬ್ಬರೇ ಬಂದು ತಮ್ಮ ತಮ್ಮಾಸೀನಗಳಲ್ಲಿ ಆಸೀನರಾದ ನಂತರ ಅಧ್ಯಕ್ಷ ಸುರೇಂದ್ರರಾಯರೆದ್ದು ಎಲ್ಲರಿಗೂ ಮದಿರಾ ದೇವಿಯನ್ನು ಹಂಚಿ ತಾವೂ ಇಟ್ಟುಕೊಂಡರು. ಕೂಡಲೇ, "ಜೈ! ಮದಿರಾ ಮಾತಕಿ!! ಜೈ!!!" ಎಂಬ ಜಯ ಜಯಕಾರ ಮಾಡಿದರು. ಕೂಡಲೇ ಪಾನಕ್ಕಾರಂಭವಾಯಿತು. ಕುಡಿದು ಕುಡಿದು ಮದ್ಯವು ತಲೆಗೇರಿತು. ಅಸಂಬದ್ಧ ಪ್ರಲಾಪಕ್ಕಾರಂಭವಾಯಿತು. ಆ ಸಮಯದಲ್ಲಿ ಅವರ ಆನಂದಕ್ಕೆ, ಅಕಸ್ಮಾತ್ತಾಗಿ "ಅಪ್ಪಾ" ಎಂಬ ಹೃದಯದ್ರಾವಕ ಶಬ್ದದಿಂದ ವಿಘ್ನವುಂಟಾಯಿತು. ಕೂಡಲೇ ಎಲ್ಲರೂ ಕೋಪಾವಿಷ್ಟರಾಗಿ ಬಾಗಿಲ ಕಡೆಗೆ ನೋಡ ತೊಡಗಿದರು. ಆಗ ಸುಂದರನು ಮುಂದೆ

ಬಂದು, "ಅಪ್ಪಾ! ನಮಗೆ ಊಟಕ್ಕಿಲ್ಲದೆ ಮೂರು ದಿನಗಳಾದುವು. ರಾಮು ಮತ್ತು ಸೀನು ಹಸಿವೆಯಿಂದ ನರಳುತ್ತಾ ಬಿದ್ದಿದ್ದಾರೆ" ಎಂದು ಹೇಳಿದನು.

ಕೂಡಲೇ, ಪ್ರಜ್ವಲಿಸುವ ಅಗ್ನಿಗೆ ಘೃತವನ್ನು ಹೊಯ್ದಂತಾಯಿತು! ತಮ್ಮ ಆನಂದಕ್ಕೆ ಭಂಗ ತಂದದ್ದೊಂದು. ತನ್ನ ಮನೆಯ ಛಿದ್ರವನ್ನು ಕಂಡಲ್ಲಿ ಹೇಳಿದ್ದುದೊಂದು. ಇವೆರಡು ಕೂಡಿ ಸುರೇಂದ್ರನು ಸಿಟ್ಟಿನಿಂದ ತಪ್ತನಾಗಿ "ನೀ-ನೀ-ನೀ—ನೀಚಾ, ಸುಮ್ಮನೆ ಬೊ—ಬೊ—ಬೊಗಳಬೇಡ. ನ—ನ-ನ—ನಡಿಯುತ್ತಾ!" ಎಂದು ಮಗನಿಗೆ ಬಲವಾಗಿ ಒದ್ದು ಬಿಟ್ಟನು. ಕೂಡಲೇ ಬಡ ಬಾಲಕನು ಬುಡ ಕಡಿದ ಬಾಳೆಯಂತೆ "ಅಮ್ಮಾ" ಎಂದು ಇಳೆಯಲ್ಲಿ ಒರಗಿ ಬಿಟ್ಟನು. ಮೊದಲೇ ಮೂರು ದಿನಗಳ ಅಶಕ್ತಿ! ಮದವೇರಿದ ಪಶುಪ್ರಾಯ ನರಾಧಮ ತಂದೆಯ ಬಲವಾದ ಒದೆ! ಸರಿ! ಕೇಳಬೇಕೆ? ಸುಂದರನ ಬಾಯಿಯಲ್ಲಿಯೂ ಮೂಗಿನಲ್ಲಿಯೂ ರುಧಿರವು ಹೊರಚಿಮ್ಮ ತೊಡಗಿತು. ಮೈಮೇಲೆ ಪ್ರಜ್ಞೆ ಇಲ್ಲದೆ ಬಿದ್ದು ಬಿಟ್ಟನು. ಈ ದೃಶ್ಯವನ್ನು ಕಂಡ ಇತರ ಪಶುಗಳೂ ಹೌಹಾರಿ ಹೋದರು. ಸುರೇಂದ್ರನ ಮತ್ತು ಅವನ ಸಂಗಾತಿಗಳ ಮದ್ಯದ ಮಧವು ಜಪ್ಪನೆ ಕೆಳಗಿಳಿಯಿತು. ಆಗ ಅವರು "ಸುರೇಂದ್ರ! ಏನನ್ನು ಮಾಡಿ ಬಿಟ್ಟೆ?" ಎಂದು ಕೇಳಿದರು. ಸುರೇಂದ್ರನು ಮಾತನಾಡದೆ ಸುಮ್ಮನೆ ನಿಂತು ಬಿಟ್ಟನು—

— ೪ —

ಸುಮಾರು ಮೂರು ಘಂಟೆಗಳಾದರೂ ಮಗನು ಬಾರದಿದ್ದುದನ್ನು ಕಂಡು ಶಾರದೆಯು ಬಾಗಿಲಲ್ಲಿ ನಿಂತು ದಾರಿ ನೋಡುತ್ತಿದ್ದಳು. ಅಷ್ಟರಲ್ಲಿ ಮನೆಯ ಎದುರಿನಲ್ಲಿ ಜನರ ಒಂದು ಗುಂಪು ಬಂದು ನಿಂತಿತು. ಅವರಲ್ಲಿ ನಾಲ್ಕು ಜನರು ಒಂದು ಶವವನ್ನು ತಂದು ಶಾರದೆಯ ಮುಂದಿಟ್ಟು ಸುಮ್ಮನೆ ನಿಂತುಬಿಟ್ಟರು. ಶಾರದೆಯು ಶವವನ್ನು ನೋಡಿದ ಕೂಡಲೇ ದುಃಖದಿಂದ "ಅಯ್ಯೋ! ಮಗನೆ" ಎಂದು ಬಿದ್ದುಬಿಟ್ಟಳು. ವಾಚಕರೇ! ಅದೇ ನಮ್ಮ ದುರ್ದೈವಿ ಸುಂದರ ಬಾಲಕನ ಮೃತ ದೇಹವೆಂದು ನೀವು ಊಹಿಸಿರಬಹುದು ಇರಲಿ!

ಜನರೆಲ್ಲರೂ ಶಾರದೆಯಿದ್ದಲ್ಲಿ ಓಡಿ ಬಂದು ನೋಡುತ್ತಾರೆ— ಅಯ್ಯೋ! ಅಲ್ಲೇನಿದೆ! ಶಾರದೆಯ ಪ್ರಾಣವಾಯುವು ಅನಂತಧಾಮದಲ್ಲಿ ಲೀನವಾಗಿಬಿಟ್ಟಿದೆ. ಒಳಗೆ ಬಂದು ನೋಡಲು, ಹಸಿವನ್ನು ತಡೆಯಲಾರದೆ ಮೂರು ಮಕ್ಕಳೂ ತಾಯಿಯ ದಾರಿಯನ್ನು ಅನುಸರಿಸಲನು ಮಾಡಿವೆ.

ನೆರೆದ ಜನರೆಲ್ಲರೂ ದುಃಖದಿಂದಲೂ ಸಂತಾಪದಿಂದಲೂ ಸುರೇಂದ್ರನನ್ನು ಬೈಯುತ್ತಾ ಮನೆಯ ದಾರಿಯನ್ನು ಹಿಡಿದರು.

ಪ್ರಿಯ ವಾಚಕರೇ! ನೀವು ಯಾರನ್ನು ಅಪರಾಧಿಯೆಂದು ತಿಳಿಯುವಿರಿ? ದಾರಿದ್ರ್ಯ ದೇವತೆಯನ್ನೋ? ಸುರೇಂದ್ರನನ್ನೊ? ಮದಿರಾ ದೇವಿಯನ್ನೊ?

× × × ×

ಸುರೇಂದ್ರನ ಕೈದಾಗಿ ವಿಚಾರಣೆಯಾಯಿತು. ವಿಚಾರಣೆಯಲ್ಲಿ ಪಶ್ಚಾತ್ತಾಪದಿಂದ ದಗ್ಧನಾದ ಅವನು ತನ್ನ ತಪ್ಪುಗಳನ್ನು ಒಪ್ಪಿಕೊಂಡನು. ಸುರೇಂದ್ರನಿಗೆ ಆಜನ್ಮ ಕಾರಾಗ್ರುಹವಾಸವು ವಿಧಿಸಲ್ಪಟ್ಟಿತು.

— ಐದನೇ ಪುಟದಿಂದ ಮುಂದುವರಿದುದು —

ನ್ಮೈಮರೆತ್ತಿದ್ದರು. ಹುಟ್ಟು ಹಾಕುವವರಾದರೋ, ತಮ್ಮ ಒಡೆಯರು ಮೈಮರೆತುದನ್ನು ನೋಡಿ, ತಾವೂ ಮೈಮರೆತವರಂತಿದ್ದರು.

ಬಿರುಸಾಗಿ ಬೀಸುವ ಗಾಳಿಯೂ, ನಿಮಿಷ ನಿಮಿಷಕ್ಕೇರುವ ಅಲೆಯೂ ಯಾರೊಬ್ಬರ ಮನಸ್ಸಿಗೂ ಬಾರದಾಯಿತು! ಅಂಬಿಗರು ಹುಟ್ಟು ನಿಲ್ಲಿಸಿದ ಕಾರಣ ದೋಣಿಯು ಬಹು ರಭಸದಿಂದ ಸಮುದ್ರದ ಕಡೆಗೆ ಹರಿಯುತ್ತಿದ್ದಿತು. ದಡದಲ್ಲಿದ್ದ ಜನರು, ದೋಣಿಯು ತಾನೇ ತಾನಾಗಿ ಹೋಗುವುದನ್ನು ನೋಡಿ ಆಶ್ಚರ್ಯಚಕಿತರಾದರು!

ನದಿಯು ಹರಿಯುವ ರಭಸವೂ, ಸಮುದ್ರದ ಅಲೆಗಳ ವೇಗವೂ, ಒಂದಕ್ಕೊಂದು ಸೇರುವ ಸ್ಥಳದಲ್ಲಿ ದೊಡ್ಡದಾದ ಮಡುವೊಂದೆದ್ದಿತು. ದೋಣಿಯು ಅಲ್ಲಿಗೆ ತಲಪುತ್ತಲೇ ಗರ್ರೆಂದು ತಿರುಗಲಾರಂಭಿಸಿತು. ನಾವೆಯಲ್ಲಿದ್ದವರಿಗೆ ಜ್ಞಾನವು ಬಂತು. ಅವರು ತಮ್ಮ ದುಃಸ್ಥಿತಿಯನ್ನು ನೋಡಿ ನಡುಗಿದರು. ಆದರೇನು! ದೋಣಿಯು ಮುಳುಗುವುದರಲ್ಲಿದ್ದಿತು! ಹುಟ್ಟು ಹೊಡೆಯುವವರು ದೋಣಿಯನ್ನು ಬೇರೆ ಕಡೆಗೆ ತಿರುಗಿಸಲು ವಿಶ್ವ ಪ್ರಯತ್ನ ಮಾಡಿದರು. ಆದರೆ ಅವರ ಪ್ರಯತ್ನವೆಲ್ಲಾ ನಿಷ್ಪ್ರಯೋಜನವಾಯಿತು! ದೋಣಿಯು ಒಂದೇ ಸಮನೆ ಸುತ್ತುತ್ತಲೇ ಇದ್ದಿತು! ಒಮ್ಮೆಗೆ ನೀರು ಪಾಲಾಗಿ ಹೋಯಿತು!! ಸರ್ವರೂ ಸರ್ವ ನಾಶವಾಯಿತೆಂದು ತಿಳಿದರು !!!

ಆದರೇನು! ಒಬ್ಬ ತರುಣನು ಒಂದು ಸಣ್ಣ ದೋಣಿಯನ್ನು ನಡೆಸುತ್ತಾ ಅತ್ತ ಕಡೆ ವಾಯು ವೇಗದಿಂದ ಹೋಗುವುದನ್ನು ದಡದಲ್ಲಿ ನಿಂತಿದ್ದ ಜನರು ನೋಡಿದರು! ಮುಳುಗಿದ ದೋಣಿಯೂ, ಅಂಬಿಗರೂ ಕಾಣಲೇ ಇಲ್ಲ! ಆದರೆ, ಅರಸನು ಮಾತ್ರ ತನ್ನ ಪತ್ನಿಯನ್ನು ಎಡ ಕಂಕುಳಲ್ಲಿ ಅಪ್ಪಿಕೊಂಡು ಬಲಗೈಯೊಂದರಲ್ಲಿ ಈಜುತ್ತಾ ಮುಂದಾಗಲು ಪ್ರಯತ್ನಿಸಿದುದನ್ನು ಜನರೆಲ್ಲರೂ ನೋಡಿದರು!

ಅರಸನು ಈ ರೀತಿ ಪ್ರಯತ್ನ ಮಾಡುತ್ತಿದ್ದಾಗಲೇ ದಡದಿಂದ ರಭಸದಲ್ಲಿ ಸಾಗುತ್ತಿದ್ದ ದೋಣಿಯು ಅಲ್ಲಿಗೆ ತಲಪಿತು. ತರುಣನು ದೋಣಿಯನ್ನು ಚಕ್ರಾಕಾರವಾಗಿ ತಿರುಗಿಸುತ್ತಲಿದ್ದನು. ಅರಸನು ಅವನ ಕಡೆ ಕೈ ನೀಡುತ್ತಿದ್ದನು- ಬೆಸ್ತನ ದೋಣಿಯು ಒಮ್ಮೆಗೆ ರಾಜನ ಬಳಿಗೆ ಧಾವಿಸಿ ಹೋಯಿತು. ಬೆಸ್ತನು ರಾಜರಾಣಿಯರನ್ನು ಎಳೆಕೊಂಡು ದೋಣಿಯಲ್ಲಿರಿಸಿ, ಪುನಃ ವಾಯು ವೇಗದಿಂದ ದಡವನ್ನು ಸೇರಿದನು. ತರುಣ ಕಿಟ್ಟುವಿನ ಸಾಹಸವನ್ನು ನೋಡಿ [illegible]. ಆದರೆ ಕಿಟ್ಟುವು ಉಸಿರೆತ್ತಲಿಲ್ಲ.

ಕಿಟ್ಟುವು ಬಡವರಲ್ಲಿ ಬಡವ. ಆದರೆ ಗುಣದಲ್ಲಿ [illegible]. [illegible]ರರಲ್ಲಿ ಧೀಮಂತ!

ಎಲ್ಲರೂ ರಾಜರಾಣಿಯರನ್ನು ಸಂತೈಸುತ್ತಿದ್ದರು—

ಉಪಚರಿಸುತ್ತಿದ್ದರು. ಆದರೆ ದೋಣಿಯಲ್ಲಿ ಒರಗಿದ್ದ ಕಿಟ್ಟುವು ಮತ್ತೆ ಏಳಲೇ ಇಲ್ಲ. ಜನಸೇವೆ ಮಾಡಹೋಗಿ ಅವನು ಜನಾರ್ಧನನ ಪಾದಾರವಿಂದಕ್ಕೆ ಶರಣಾದನು. ಅವನ ಎದೆಯೊಡೆದು ಬಾಯಿಯಲ್ಲಿ ನೆತ್ತರು ಹರಿಯುತ್ತಿತ್ತು.

## ಬಡತನದ ಸಕತಿ.

ಬಡತನದ ದುಃಖದಲಿ ಬಳಲುವರು ಜನರು ।
“ಬಡತನದ ಹುಟ್ಟು ಬಲು ವ್ಯರ್ಥ”ವೆನುತಿಹರು ॥ ೧ ॥
“ಬಡವರಿಗೆ ಜನ್ಮಸಾರ್ಥಕಕಿಹುದು ಕಷ್ಟ ।
ಬಡವರಿಗೆ ಧರ್ಮದಲಿ ನಡೆಯುಲತಿ ಕಷ್ಟ ॥ ೨ ॥
ದಾನ ದಯೆಯುಪಕಾರಕೆಡೆಯವರಿಗಿಲ್ಲ ।
ಮಾನದಲಿ ಜೀವನವನೆಸಗಲಳವಿಲ್ಲ ॥ ೩ ॥
ದೇಶದಲಿ ಸೇವೆಯನು ಮಾಡಲನುವಿಲ್ಲ ।
ದೇಶದೇಳಿಗೆಯ ಮಾಡಲು ಸಾಧ್ಯವಿಲ್ಲ ॥ ೪ ॥
ತನ್ನಯುನ್ನತಿಗೊಳಿಸಲನುಕೂಲವಿಲ್ಲ” ।
ಎನ್ನುವರು ಕೆಲವು ಬಡಜನರೊಳೀ ಸೊಲ್ಲ ॥ ೫ ॥
ಎನುತೆನುತ ಮರುಮರುಗಿ ಕರಗಿ ಸೊರಗುವರು ।
ತನುವಿನೊಳು ಹುದುಗಿರುವ ಸಕತಿ ಮರೆಯುವರು ॥ ೬ ॥
ದೇವರಿಗೆ ಧನಿಕ-ಬಡವರಲಿ ಭೇದವಿಲ್ಲ ।
ಕಾವನವ ಸರಿಸಮಾನದಿ ನಮ್ಮನೆಲ್ಲ ॥ ೭ ॥
ಜಾತಿಭೇದವ ಬಗೆಯದೆಲ್ಲರಲಿ ಇಹನು ।
ನೀತಿಯೊಂದಾಗಿರಿಸಿ ಪೋಷಿಸುತ್ತಿಹನು ॥ ೮ ॥
ಬಡತನವು ಸ್ವಾನುಭವ ಕಲಿಸುತಿಹ ಬಂಧು ।
ಬಡತನವು ಅರಿಗಳನು ಜಯಿಸುತಿಹ ಸಿಂಧು ॥ ೯ ॥
ರಾಮದಾಸನು ಬಡವರಲಿ ಜನಿಸಿರುವನು ।
ಪ್ರೇಮದಲಿ ದೇಶದುನ್ನತಿ ಮಾಡಿಸಿಹನು ॥ ೧೦ ॥
ಮಾಧವನು ಕಡು ಬಡವರಲಿ ಹುಟ್ಟಿರುವನು ।
ಸಾಧಿಸಿದ ಕರ್ಣಾಟದುದ್ಧಾರವನ್ನು ॥ ೧೧ ॥
ರನ್ನ ಬಳೆಗಾರಸಿಹ ಕವಿವರನು ನೋಡಿ ।
ಉನ್ನತಿಯ ತಳೆದ ಕನಕನ ಮತವ ನೋಡಿ ॥ ೧೨ ॥
ದೇಶಸೇವೆಯೆ ಈಶಸೇವೆ ಎನ್ನುತಿದ್ದ ।
ದೇಶಭಕುತ ಜ್ಞಾನದೇವ ಪ್ರಸಿದ್ಧ ॥ ೧೩ ॥
ಕಷ್ಟವದು ಇಷ್ಟವನು ದೊರಕಿಸುವ ಬಂಧು ।
ಕಷ್ಟವದು ದುಷ್ಟತನವನು ಕಳೆವ ಸಿಂಧು ॥ ೧೪ ॥
ಕಷ್ಟದಲಿ ಸುಜ್ಞಾನಯುದಯಿಪುದು ಮುಂದು ।
ಕಷ್ಟ ಕೈ ಕೆಸರಿ ಬಾಯಿಗೆ ಮೊಸರು ಮುಂದು ॥ ೧೫ ॥
ಮಹಾರಾಣಿ ಲಕ್ಷ್ಮೀ ಬಾಯಿಯಾದರ್ಶ ।
ಮಹಾ ಕಷ್ಟ ಪಡೆದ ಪ್ರತಾಪಾಕರ್ಷ ॥ ೧೬ ॥
ಧನ ಕನಕ ಸುಖವಲ್ಲ ಸಿದ್ಧಾರ್ಥ ಬಲ್ಲ ।
ಘನ ಪುರಂದರನು ಬಡವರಿಗಿತ್ತನೆಲ್ಲ ॥ ೧೭ ॥
ಎಲ್ಲವರ ತನ್ನಂತೆ ನೆನಸಿಹನ ಶೋಕ ।
ಬಲ್ಲವರ ಹೆಚ್ಚಿಸಿದ ಗುಣವಂತ ಹರ್ಷ ॥ ೧೮ ॥
ಹಣಕಾಗಿ ಹೋರಾಡಿಯುಳಿದವರ ನೋಡಿ ।
ಗುಣಕಾಗಿ ಹೋರಾಡಿಯುಳಿದವರ ನೋಡಿ ॥ ೧೯ ॥
ಹಣವೆ ನಾಶಕೆ ಮೂಲ, ಕೌರವನು ಸಾಕ್ಷಿ ।
ಗುಣವೆ ಕೀರ್ತಿಗೆ ಹೇತು ಸೀತೆ ಘನ ಸಾಕ್ಷಿ ॥ ೨೦ ॥

## ಸಂದ ಬಂಧುವಿನ ಸ್ಮರಣೆ.

ಬೆಂದುದೆನ್ನೊಡಲ ಗಿರಿ, ಬೇವುದೆನ್ನೊಡಲ ಉರಿ,
ನೊಂದಿಹುದು, ಕಂದಿಹುದು, ಕುಂದಿಹುದು ಸುಖದ ಸಿರಿ,
ಎಲ್ಲಿರುವೆ ಎನ್ನಣ್ಣ, ಎಲ್ಲಿರುವೆ ಪುಟ್ಟಣ್ಣ,
ಎಲ್ಲಿರುವೆ, ಎಲ್ಲಿರುವೆ, ನೀಯೆನ್ನ ಬಾಬಣ್ಣ;
ಎಲ್ಲಿ ಪೋದೆಯೊ ನೀನು ಎಮ್ಮನ್ನು ತೊಲಗಿ,
ಎಲ್ಲಿಹೆಯೊ ಬಾ ನೀನು ನಮಿಸುವೆನು ಬಾಗಿ,
ಎಲ್ಲೆಲ್ಲಿ ಹುಡುಕಲು ನಿನ್ನ ಸುಳಿವಿಲ್ಲ,
ಎಲ್ಲೆಲ್ಲಿ ಕೇಳಲು ನಿನ್ನ ತಿಳಿದವರಿಲ್ಲ.
ಎಲ್ಲಿರುವೆಯಣ್ಣನೀ ಎಮ್ಮನ್ನು ತೊಲಗಿ.
ಕಳೆಯಲಿಲ್ಲವೆ ಮಾಸ ನೀನಂದು ಮಲಗಿ,
ಕಾಣುವೆನು ನಿನ್ನನು ಭಾವಚಿತ್ರದಲ್ಲಿ;
ಕಾಣಸಾಧ್ಯವೆ ನಿನ್ನನು ಕಾಯರೂಪದಲ್ಲಿ,
ಮಾತನಾಡಿಸು, ಬಾ, ನಿನ್ನ ವೃದ್ಧ ಮಾತೆಯೆಡೆಗೆ
ಮಾತನಾಡಿಸು, ಬಾಯೆಮ್ಮ ನಿನ್ನ ಹಿತದವರೆಡೆಗೆ
ಅಯ್ಯಯ್ಯೊ ಬಾ ನೀನು, ಭಾವಚಿತ್ರವೆ ಬಾ,
ಛಾಯೆ ಬಾ, ನೆರಳೆ ಬಾ, ಆತ್ಮದ ರೂಪ ಬಾ,
ಅಯ್ಯಯ್ಯೊ ಸುಮ್ಮನಿಹೆ ಬಾ ಕರೆವೆ ಬಾ
ಅಯ್ಯಯ್ಯೊ, ಬಾ, ಬೇಗ ಬಾಬಣ್ಣ ಬಾ,
ಕರೆದರೂ ಬರಲೊಲ್ಲೆ ಸಿಟ್ಟೇನು ನಿನಗೆ?
ಕರೆಕರೆದು ಸಾಕಾದೆ, ಬಾನತಿ ಮನೆಗೆ
ಸಿಟ್ಟಿರುವ ಕಾಲಕ್ಕೆ ಮಧ್ಯಸ್ಥನಾಗಿದ್ದೆ,
ಕಟ್ಟಿಹುದು ನಿನ್ನ ಬಾಯ್ ಹಲುಬಲೇಕೆ ಬರಿದೆ!
ಕರೆ ನೀನು ಕೂಗೀಗ ತೋರೆನಗೆ ದಾರಿ
ಕರೆ ಬೇಗ ನಲಿಯುವೆನು ನಿನ್ನನ್ನು ಸೇರಿ;
ಅಂದು ನಾವಾಡಿದಾ ಆಟಕೂಟಗಳೆಲ್ಲಿ,
ಅಂದು ನಾವ್ ನೋಡಿದ ಓಟ ನೋಟಗಳೆಲ್ಲಿ,
ಅಂದು ನಮ್ಮಯನುಭವದ ಸುಖದಿನಗಳೆಲ್ಲಿ,
ಇಂದು ನೀ ತೊಲಗಿ ನಿನ್ನವರ ದುಃಖಜಲವೆಲ್ಲಿ,
ಮರೆಯಲಾರೆನು ನಾ ನಿನ್ನ ಜೀವವುಳ್ಳನಕ.
ಮರೆಯಲಾರೆನು ನಾ ನಿನ್ನ ಹಿತದ ಚಿಂತಕರನ್ನ
ಮರೆದರೂ ಲೋಕವೆ ನಿನ್ನ ಪೆಸರನ್ನ
ಮರೆಯಲಾರೆನು ನಾನು ಎನ್ನ ಬಾಬಣ್ಣ.

ಮುಂಡಪ್ಪ ರೈ, ಪುತ್ತೂರು.

---

ಭಾರತೀಯರೊಳಿರುವ ತ್ಯಾಗಿಗಳ ನೋಡಿ ।
ಸಾರ ಹಣವಾದರದ ಮೆಚ್ಚಿವರೆ ನೋಡಿ ॥ ೨೧ ॥
ಭರತಖಂಡದ ಜೀವ ಜ್ಯೋತಿಗಳ ಚರಿತೆ ।
ಅರಿತಂತೆ ಜೀವನವ ಸಾಗಿಪುದೆ ಘನತೆ ॥ ೨೨ ॥
ಮನಸು ಕಾರಣ ನಮ್ಮ ಸುಖದುಃಖಕೆಂದು ।
ಅನುಭವಿಸಿದವರೆಲ್ಲ ಹೇಳುವರು ಬಂದು ॥ ೨೩ ॥
“ಸಮಯವೇ ಧನ”ವದನು ಸದುಪಯೋಗಿಸಲು ।
ಅಮರ ಸೊಗ ವಿಭವದಲಿ ಸಾಗುವುದು ಬಾಳು ॥ ೨೪ ॥

ಲಕ್ಷ್ಮೀನಾರಾಯಣ, ಎಲ್ಲೂರು.

# ಮಹಾತ್ಮಾ ಯೇಸುಕ್ರಿಸ್ತರು

ಲೇಖಕರು:—ಶ್ರೀ. ಕಂದಕ ಈಶ್ವರ

ಒಂದು ಕಾಲವಿತ್ತು. ಅಂದು ಇಂದಿನಂತೆ ಪ್ರಜೆಗಳು ಅಳುತ್ತಿದ್ದರು. ಬಡವರು ಕೊರಗುತ್ತಿದ್ದರು. ಎಲ್ಲೆಡೆ ನೋಡಿದರೂ ಶಾಂತಿಯ ಸುಳಿವಿಲ್ಲ. ಧನಿಕರ ಧನ—ದರ್ಪ; ಬಡವರ ಬೆಂದೆದೆಯ ಬಿಸಿಯುಸಿರು, ಪ್ರಜೆಗಳ ಆಳು ಅರಸರ ಗೆಲು ಅಲ್ಲದೆ ಮತ್ತೇನಿದ್ದಿಲ್ಲ. ನೀತಿಯೇ ಜಾತಿ ಎಂಬುದು ತಿರುಗಿ ಜಾತಿಯೇ ನೀತಿಯೆಂದಾಗಿತ್ತು. ಒಂದೇ ಮಾತಿನಿಂದೆನ್ನುವುದಾದರೆ—ಅಧರ್ಮವು ತಲೆಯೆತ್ತಿ ಧರ್ಮವು ಮುಳುಗುವಂತಾಗಿತ್ತು.

ಮಾತೆಯಾದ ಮರಿಯೆಯ ಗರ್ಭದಲ್ಲಿ ಪೂಜ್ಯ ಯೋಸೇಫರ ಕುವರನಾಗಿ ಶ್ರೀ ಯೇಸುಕ್ರಿಸ್ತರು ಯೂದಾ... ಸೀಮೆಯ ಬೆತ್ಲೆಹೇಮಿನ ಒಂದು ಹಟ್ಟಿಯಲ್ಲಿ ಹುಟ್ಟಿದರು. ಮುದ್ದಾದ ಮುಖ, ದುಂಡಗಾದ ಕೈಕಾಲುಗಳು ಇರುವ ಈ ಮಗುವನ್ನು ನೋಡಲು ಒಮ್ಮೆ ಜನರು ಬಂದರು. ಮುದ್ದಿನಿಂದ ಮುದ್ದಿಸಿದರು. ಸಂತಸದಿಂದ ಹರಸಿದರು. ಆನಂದದಿಂದ ಹಾಡಿ—ಆಡಿಸಿದರು. ಸುದ್ದಿಯೆಲ್ಲಾ ಹರಡಿತು. ಆಗಿನ ಅರಸ ಹೆರೋದ ಮಹಾರಾಜನ ಕಿವಿಯ ವರೆಗೂ ಮುಟ್ಟಿತು. ಅವನು ದಿಗಿಲುಬಿದ್ದನು. ಯಹೂದ್ಯರ ಅರಸನಾಗಲು ಒಬ್ಬನು ಹುಟ್ಟಿರುವನೆಂದು ಜೋಯಿಸರಿಂದ ಅರಿತ ಅರಸನು ಹೆದರಿ ಹೋದನು. ಹುಟ್ಟಿದ ಮಗುವು ಯಾವುದೆಂದು ಅರಿಯದೆ-ತನ್ನ ರಾಜ್ಯದ ಎರಡು ವರ್ಷದೊಳಗಿನ ಗಂಡು ಕೂಸುಗಳನ್ನೆಲ್ಲಾ ಕೊಲ್ಲಲಾಜ್ಞಾಪಿಸಿದನು.

ಮನುಷ್ಯನು ಬಗೆವುದೊಂದು, ದೈವೇಚ್ಛೆ ಇನ್ನೊಂದು. ದೇವನ ನಿಯಮಕ್ಕೆ ಎದುರಿಲ್ಲ. ಅರಸನ ಬಗೆಯನ್ನರಿತ ಯೋಸೇಫನು ನಡುರಾತ್ರಿಯಲ್ಲಿಯೇ ತನ್ನ ಹೆಂಡತಿ ಕೂಸು ಸಮೇತನಾಗಿ ಐಗುಪ್ತ ದೇಶಕ್ಕೆ ಹೊರಟು ಹೋದನು. ಕೆಲ ಸಮಯದ ನಂತರ ಹೆರೋದನು ತೀರಿದನು. ಆದನ್ನರಿತ ಯೋಸೇಫನು ಬಂಧುಗಳ ಸೂಚನೆಯಂತೆ ತನ್ನ ಊರಿಗೆ ಪುನಃ ಮರಳಿದನು ಯೇಸುಕ್ರಿಸ್ತರು ಬಳೆದರು ವಿದ್ಯೆಯಲ್ಲೂ ಬುದ್ಧಿಯಲ್ಲೂ ಮಿಗಿಲೆನ್ನುವಂತಾದರು. ತುಂಬಿದ ಜ್ಞಾನ!! ಮಧುರತರ ಮಾತು!!! ಇವುಗಳಿಂದಾಗಿ ಅವರ ಕೀರ್ತಿಯು ಹರಡಲು ಮೊದಲಾಯಿತು.

ಒಂದು ದಿನ ಯೇಸುಕ್ರಿಸ್ತರು ಬಿಸಿಲ ಬೇಗೆಯಿಂದ ಬಳಲಿ ಬಾಯಾರಿ ಒಂದು ಬಾವಿಯ ಬಳಿಯಲ್ಲಿ ಕುಳಿತುಕೊಂಡರು. ಆಗ ಮಧ್ಯಾಹ್ನವಾಗಿತ್ತು. ನೀರನ್ನು ಸೇದಲು ಒಬ್ಬಳು ಸಮಾರ್ಯಳು ಅಲ್ಲಿಗೆ ಬಂದಳು. ಸ್ವಾಮಿಯವರು "ಅಮ್ಮಾ, ಕುಡಿಯಲು ಒಂದಿಷ್ಟು ನೀರು ಕೊಡು" ಎಂದರು. ಆಗಲವಳು ಹೇಳಿದಳು—"ಅಯ್ಯಾ. ನಾನು ಹೀನಕುಲಸ್ಥಳು. ತಾವು ಉತ್ತಮರಂತೆ ಕಾಣುವಿರಿ. ನಾನು ಮುಟ್ಟಿದ ನೀರನ್ನು ತಾವು ಕುಡಿಯಬಹುದೇ?" ಸ್ವಾಮಿಯವರು ನಸುನಗೆ ನಕ್ಕು "ಅಮ್ಮಾ, ದೇವರೆದುರಲ್ಲಿ ನಾವೆಲ್ಲರೂ ಸಮಾನರು. ದೇವರು ನಮ್ಮ ಅಂತರಂಗ ಶುದ್ಧಿಯನ್ನು ನೋಡುವನೇ ಹೊರತು. ಶರೀರ ಶುದ್ಧಿಯನ್ನು ನೋಡನು. ದೇವರು ಆತ್ಮಸ್ವರೂಪನು. ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕಹಾಗೆ ಆರಾಧಿಸಬೇಕು" ಎಂದು ಬೋಧಿಸಿ ಅವಳಿಂದ ನೀರನ್ನು ಕೊಂಡು ಕುಡಿದರು.

ಸ್ವಾರ್ಥಿಗಳಾದ ಶಾಸ್ತ್ರಿ ಫರಿಸಾಯರುಗಳಿಗೆ ಶ್ರೀ ಯೇಸುಕ್ರಿಸ್ತರ ಅಮೃತಮಯ ಬೋಧೆಯು ರುಚಿಸದೆ ಹೋಯಿತು. ಕಳ್ಳರ ಮನಸ್ಸು ಹುಳ್ಳಹುಳ್ಳಗೆ! ಅವರ ಮನಸ್ಸೂ ಮೇಲು ಕೆಳಗಾಗ ಹತ್ತಿತು. ಬಡವರ ಸುಲಿಯುವ ಹಣಕ್ಕಲ್ಲಿ ಸೊನ್ನೆಯಾಗುವುದೋ ಎಂದವರು ಹೆದರಿದರು. ಶ್ರೀ ಯೇಸುಕ್ರಿಸ್ತರನ್ನು ಹುಚ್ಚನೆಂದರು—ಲುಚ್ಚನೆಂದರು. ಬಗೆಬಗೆಯಾಗಿ ಪೀಡಿಸಿದರು. ಶ್ರೀ ಯೇಸುಕ್ರಿಸ್ತರು ಒಬ್ಬ ಮಹಾತ್ಮನಲ್ಲ—ಮಹಾಮಾರಿಯವನು ಎಂದು ಜನತಾ ಸಾಗರಕ್ಕೆ ಸಾರಲು ಮೊದಲು ಮಾಡಿದರು. ಆದರೂ, ಎಷ್ಟೋ ಜನರು ಮಹಾತ್ಮನ ಅನುಯಾಯಿಗಳಾಗಿಯೇ ಇದ್ದರು. ಇದನ್ನು ಕಂಡ—ಶ್ರೀ ಯೇಸುಕ್ರಿಸ್ತರ ಉತ್ಕರ್ಷೆಯನ್ನು ತಡೆಯಲಾರದ—ಮದೋನ್ಮತ್ತರಾದ ಶಾಸ್ತ್ರಿ ಫರಿಸಾಯರುಗಳ ಮತ್ಸರವು ವೃದ್ಧಿಯನ್ನೈದುತ್ತಾ ಬಂತು.

ಯೂದನೆಂಬವನು ಯೇಸುಕ್ರಿಸ್ತರ ಆತ್ಮೀಯ ಶಿಷ್ಯರಲ್ಲೊಬ್ಬನು. ಅವನು ಧನಪಿಶಾಚಿಯ ಕೈಯಾಳಾದನು. ಮೂವತ್ತು ರೂಪಾಯಿಯ ಲಂಚಕ್ಕೋಸ್ಕರ ತನ್ನ ಪೂಜ್ಯಗುರುವನ್ನು ವೈರಿಗಳಿಗೆ ಸೆರೆಯಾಗಿರಿಸಕೊಟ್ಟನು. ಮತ್ಸರಯುಕ್ತರಾದ ಶಾಸ್ತ್ರಿಗಳು ಶಾಂತಿಯ ಮೂರ್ತಿಯಾದ ಯೇಸುಕ್ರಿಸ್ತರನ್ನು ಹಿಡಿಯಲು ಕತ್ತಿ ದೊಣ್ಣೆಗಳನ್ನು ಹಿಡಿದುಕೊಂಡು ಬಂದರು — ಹಿಡಿದರು ವಿಚಾರಣೆಗೆಂದು ಕಾಯಫನಲ್ಲಿಗೆ ಕೊಂಡು ಹೋದರು. ಯೇಸುವನ್ನು ಕೊಲ್ಲಿಸಬೇಕೆಂದು ಅವರು ಅವನ ಮೇಲೆ ಸಲ್ಲದ ಸುಳ್ಳುಸಾಕ್ಷಿಯನ್ನು ನುಡಿದರು. ದೇಶಾಧಿಪತಿಯಾದ ಪಿಲಾತನಲ್ಲಿಯೂ ಹೆರೋದ ಮಹಾರಾಜನಲ್ಲಿಯೂ ವಿಚಾರಣೆಯಾಯಿತು. ಅವರು ಸ್ವಾಮಿಯವರಲ್ಲಿ ಯಾವ ತಪ್ಪನ್ನೂ ಕಾಣದಾದರು. ಆದರೆ ನೆರೆದಿದ್ದ ಯಾಜಕ—ಶಾಸ್ತ್ರಿ—ಫರಿಸಾಯರುಗಳು ಕೇಳದಾದರು.—"ಕೊಲ್ಲಲೇ ಬೇಕು ಧೂರ್ತ ಯೇಸುವನ್ನು! ಶಿಲುಬೆಗೆ ಹಾಕಲೇ ಬೇಕು!! ಜನಗಳ ಗುಲ್ಲು ಹೆಚ್ಚಿತು. ಉಪಾಯವಿಲ್ಲ, ಅರಸನಿಗೆ ಏನು ಮಾಡಬೇಕೆಂದು ತೋಚದಾಯಿತು. ಬಹುಮತದ ಅಪೇಕ್ಷೆ! ಅಂಧಶ್ರದ್ಧೆಗಳಾದ ಜನಗಳು ಮೋಸಗಾರರಾದ ಶಾಸ್ತ್ರಿಗಳ ಬಲೆಗೆ ಬಿದ್ದು ಯೇಸುಕ್ರಿಸ್ತರನ್ನು ಶಿಲುಬೆಗೆ ಹಾಕಬೇಕೆಂದೇ ಹಟ ಹಿಡಿದಿದ್ದಾರೆ. ದೇಶಾಧಿಪತಿಯು ಉಪಾಯಗಾಣದೆ ಯೇಸುಕ್ರಿಸ್ತರನ್ನು ಬಹುಮಂದಿಗಳ ವಶಕ್ಕೆ ಬಿಟ್ಟುಕೊಟ್ಟನು.

× × × ×

ಹಾ! ಅದೆಂತಹ ದೃಶ್ಯ!! ಅದೆಂತಹ ಕರುಣಾಜನಕ—ಹೃದಯಭೇದಕ ನೋಟ!!! ಇಬ್ಬರು ಪಾಪಕರ್ಮಿ ಕೈದಿಗಳ ನಡುವೆ ಪಾಪಭೀರು ಸ್ವಾಮಿಯನ್ನು ಶಿಲುಬೆಯೊಂದಕ್ಕೆ ಬಡಿದಿದ್ದಾರೆ. ತಲೆಯಲ್ಲಿ ಕಿರೀಟವಿದೆ ಅಂಗೈಗಳಲ್ಲಿ - ಪಾದಗಳಲ್ಲಿ ನೆತ್ತರು ಸುರಿಯುತ್ತಿದೆ ಆದರೂ ಕಲ್ಲಿನ ಹೃದಯದ ಕಟುಕ ಶಾಸ್ತ್ರಿಗಳು ಅಣಕಿಸುತ್ತಿದ್ದಾರೆ. ಸಲ್ಲದ ಬೈಗಳನ್ನು ಸುರಿಸುತ್ತಿದ್ದಾರೆ. ಮಾತೆಯಾದ ಮರಿಯೆ—ಬಂಧುಜನಗಳು—ಶಿಷ್ಯವೃಂದ ಎಲ್ಲರೂ ಕಣ್ಣೀರ ಕಾಲುವೆಯನ್ನೆ ಹರಿಯಿಸುತ್ತಿದ್ದಾರೆ. ಮಹಾತ್ಮನೆಮುಖವು ಮಾತ್ರ ಎಂದಿನಂತಲೂ ತೇಜಃಪುಂಜವಾಗಿದೆ. ಶಾಂತಿಯುಕ್ತ ಮುಖ! ಕಾಂತಿಗೂಡಿದ ಕಣ್ಣು!! ಎಂತಹನ ಮನಸ್ಸನ್ನಾದರೂ ಭೇದಿಸದಿರದು.

ವಾಚಕ ಮಹಾಶಯಾ—ಅಂದು ಮಹಾತ್ಮಾ ಯೇಸುಕ್ರಿಸ್ತರು ಅನ್ಯರ ಪಾಪದ ಹೊರೆಯನ್ನು ತಾನಾಗಿ ಹೊತ್ತುಕೊಂಡರು. ಬಲಹೀನ ಬಡವರಿಗಾಗಿ ಬಳಲಿದರು. ಮರುಗುವವರಿಗಾಗಿ ಕೊರಗಿದರು. ಜಗತ್ತಿಗೆ ಶಾಂತಿಯನ್ನು ಹೊಸ ಕಾಂತಿಯನ್ನು ಬೀರಿದರು. ಇಂದು ಅದೇ ಮಹಾತ್ಮ ಬಡವರ ಬಂಧುಗಳು ನಮ್ಮ ಮುಂದಿರುವರು. ಉಡಲಿಕ್ಕೆ ಉಡುಪಿಲ್ಲ. ಉಣಲಿಕ್ಕೆ ಊಟವಿಲ್ಲ. ನೆಲಸಲೊಂದು ಗುಡಿಯೂ ಇಲ್ಲ. ಆದರೂ ಸಾರುವರು "ನೀತಿಯೇ ಜಾತಿ! ಸತ್ಯವೇ ದೇವರು!! ಜೀವಿಗಳ ಸೇವೆಯೇ ದೇಶಸೇವೆ-ದೇವಸೇವೆ!!!" —

# ಸಿಲೋನಿನಲ್ಲಿ ಬಡ ಕೂಲಿಗಾರರು

ಲೇಖಕ: — ಮ. ಜಾ.

ವೈಸರಾಯರಿಗೆ ಏಜಂಟರಾಗಿ ಸಿಂಹಳ ದ್ವೀಪದಲ್ಲಿರುವ ಶ್ರೀ.ಕೆ.ಪಿ. ಎಸ್.ಮೆನನ್‌ರವರು ಅಲ್ಲಿಯ ಹಿಂದೀಯ ಕೂಲಿಗಾರರ ಶೋಚನೀಯ ಸ್ಥಿತಿಯ ಕುರಿತು ಒಂದು ಸವಿವರ ವರದಿಯನ್ನು ಸರಕಾರಕ್ಕೆ ಒಪ್ಪಿಸಿರುವರು. ಈ ವರದಿಯ ಪರಿಶೀಲನೆಯಿಂದಾಗಿ ಆ ದ್ವೀಪದಲ್ಲಿ ಕೆಲಸ ಮಾಡುತ್ತಿರುವ ಅಸಂಖ್ಯಾತ ಭಾರತೀಯ ಕೂಲಿಗಾರರ ಬಡತನವು ಎಷ್ಟರ ಮಟ್ಟಿಗೆ ಇರುವುದೆಂದು ತಿಳಿದುಬರುವುದು. ಚಾ ಮತ್ತು ರಬ್ಬರ್ ತೋಟಗಳಲ್ಲಿಯೂ ಮತ್ತು ಇನಿತರ ಪ್ರದೇಶಗಳಲ್ಲೂ ದುಡಿಯುತ್ತಿರುವ ತಮಿಳು ಕೂಲಿಗಾರರಿಗೆ ಸಾಕಷ್ಟು ಕೂಲಿಯು ಲಭಿಸುತ್ತಿಲ್ಲ. ಈ ರೀತಿಯ ದುಃಸ್ಥಿತಿಗೆ ಆರ್ಥಿಕ ಅಡಚಣೆಯು ಕಾರಣವೆಂದು ಆಡಳಿತೆದಾರರ ಮಾತು.

1933ನೇ ವರ್ಷದಲ್ಲಿ ಚಾ ಮತ್ತು ರಬ್ಬರ್ ತೋಟಗಳ ಮ್ಹಾಲಿಕರು ತಮ್ಮ ಕೂಲಿಗಾರರ ವೇತನವನ್ನು ಕಡಿಮೆ ಮಾಡಲು ಸೊಂಟಕಟ್ಟಿದರು. ಜೀವನವನ್ನು ಸಾಗಿಸಲಿಕ್ಕೆ ಎಷ್ಟು ಆವಶ್ಯಕವೋ ಅಷ್ಟೇ ಸಂಬಳವನ್ನು ಈ ಕೂಲಿಗಾರರಿಗೆ ಇತ್ತರೆ ಸಾಕೆಂಬುದಾಗಿ ಆಡಳಿತದಾರರ ನಿರ್ಧಾರವಾಯಿತು. ಇಷ್ಟು ಅಲ್ಪ ಸಂಬಳವನ್ನು ಕೊಟ್ಟಮೇಲೂ ಅಧಿಕಾರಿಗಳೂ ಸುಮ್ಮನಿರಲಿಲ್ಲ. 1933ರಲ್ಲೂ ಈ ಸಂಬಳದ ಮೇಲೂ ಕತ್ತರಿ ಪ್ರಯೋಗವಾಯಿತು. ಆ ಬಡವರ ಸ್ಥಿತಿಯು ಮುಂದಕ್ಕೆಲ್ಲಿ ನಿಂತೀತೆಂದು ಹೇಳಲು ಸಾಧ್ಯವಿಲ್ಲ. ರಾಷ್ಟ್ರರಾಷ್ಟ್ರಗಳ ಸ್ಪರ್ಧೆಯಿಂದಾಗಿ ಕೂಲಿಗಾರರ, ಬಡವರ ದೀನಾವಸ್ಥೆಯು ಏನಾದರೇನೆಂದು ಯಾರು ವಿಚಾರಿಸುವರು? ಅಲ್ಲಿಯ ರಬ್ಬರ್ ತೋಟಗಳಲ್ಲಿನ ಯಜಮಾನರು ಅಲ್ಲಿಯ ಅನೇಕ ಕೂಲಿಗಾರರನ್ನು ಇಷ್ಟರಲ್ಲೇ ಕೆಲಸದಿಂದ ನಿವೃತ್ತಗೊಳಿಸಿದರು. ಅನೇಕ ಕೂಲಿಗಾರರು ದಾರಿದ್ರ್ಯದಿಂದ ಕಂಗಾಲಾಗಿ ಸ್ವದೇಶಕ್ಕೆ ಹಿಂದಿರುಗುತ್ತಿರುವರು.

ಬಡವರ ಈ ಶೋಚನೀಯ ಸ್ಥಿತಿಗತಿಗಳಿಗೆ ದುಡ್ಡಿರುವವರು ಸ್ವಲ್ಪ ಗಮನವಿತ್ತರೆ ಮನವು ವಿಷಾದಗೊಳ್ಳದಿರದು. ಅಲ್ಲಿನ ಕೂಲಿಗಾರರ ಮಕ್ಕಳ ವಿದ್ಯಾಭ್ಯಾಸವು ಚೆನ್ನಾಗಿ ನಡೆಯುತ್ತಿಲ್ಲ. ದಿನೇ ದಿನೇ ಶಾಲಾ ಮಕ್ಕಳ ಸಂಖ್ಯೆಯು ಇಳಿಮುಖವಾಗುತ್ತಿದೆ. ಬಡಜನರು ದಾರಿದ್ರ್ಯದ ಪರಿಣಾಮವಾಗಿ ಅನೇಕಾನೇಕ ರೋಗಗಳಿಂದ ಬಳಲುತ್ತಿರುವರಾದರೂ ವೈದ್ಯಕೀಯ ಸಹಾಯವು ಯಾರಿಂದಲೂ ದೊರೆಯುವಂತಿಲ್ಲ. ಮಲೇರಿಯಾವು ತಲೆದೋರಿ ಅನೇಕಾನೇಕ ಕೂಲಿಗಾರರು ರೋಗಬಾಧೆಯಿಂದ ದಿಕ್ಕುತೋರದಾಗಿರುವರು. ಒಂದೆಡೆ ಹಣದಡಚಣೆ—ದಾರಿದ್ರ್ಯ, ಮತ್ತೊಂದೆಡೆ ತೋಟದ ಮ್ಹಾಲಿಕರ ಪಾಷಾಣ ಹೃದಯ—ಸ್ವಾರ್ಥ! ಬರೇ ಹೊಟ್ಟೆಪಾಡಿಗಾಗಿ ಪರದೇಶಗಳಿಗೆ ಹೊರಟ ಭಾರತೀಯರು ಹೀಗೆ ನರಳುತ್ತಿರುವುದು ಯಾರಿಗೆ ಶ್ರೇಯಸ್ಕರ? ಇಂಡಿಯಾ ಸರಕಾರದವರು ಈ ಪರಿಸ್ಥಿತಿಗಳನ್ನು ಲಕ್ಷ್ಯಕ್ಕೆ ತಂದು ಕೂಲಿಗಾರರ ಹಿತದೃಷ್ಟಿಯಿಂದ ಅವರಿಗೆ ಬೇಕುಬೇಕಾದ ರಕ್ಷಣೆಯನ್ನೀಯಲೆಂದು ಹಾರೈಸುತ್ತೇವೆ.

---

— ಕಳೆದ ಸಂಚಿಕೆಯಿಂದ ಮುಂದುವರಿದುದು —

## ನಂಬ್ರ ೧ನೇ ಒಗಟಿನ ಬಿಚ್ಚುಗರು.

### ಮಂಗಳೂರು.

(93) ಎಸ್. ಕೋದಂಡಧರ, ಕೆಂಟ್ರೋನ್‌ಮೆಂಟ್ ರಸ್ತೆ. (94 ಕೂಳೂರು ರಘುನಾಥಾನಾಯಕ್, ಕರ್ಣಾಟಕ ಗ್ರಂಥಾಲಯ, ಭವಂತಿಕೇರಿ (95) ಸಿ. ಶ್ರೀನಿವಾಸ ಮಲ್ಯ, ಗೋಳಿಕಟ್ಟೆ ಬಜಾರು. (96) ಕುಡ್ವಿ ವಿಶ್ವನಾಥ ಶೆಣೈ, ಬ್ರ್ಯಾಂಚ್ ತಾಹಜಮಹಾಲ್. (97) ಉಮಾನಾಥ ಸುವರ್ಣ ಪಾಂಡೇಶ್ವರ. (98) ಸುಜೀರ್ ಲಕ್ಷ್ಮಣನ್ಯಾಕ ಮಾಧವನ್ಯಾಕ್, ಸಾಹುಕಾರ್ ಬಂದರ. (99) ಜೆ. ಪುರುಷಯ್ಯ C/o ಜಿ ಬಾಬು, ಸೋಡಾ ಶಾಪು, ಹಂಪನಕಟ್ಟೆ. (100) ಸಿ. ಕೆ. ರಾಮಕೃಷ್ಣಯ್ಯ. ಕೋಮನ್‌ವೆಲ್ತ್ ಫೆಕ್ಟರಿ. (101) **ಎಮ್. ರಾಮಕೃಷ್ಣ ಮಲ್ಯ, ಕೆನರಾ ಹೈಸ್ಕೂಲ್.** (102) ಅಲ್ಲಿ ಸಾಹೇಬ್ ಹಂಪನಕಟ್ಟೆ. (103) ಎನ್. ಟಿ. ಸುವರ್ಣ, ಬಂದರ. (104) ಎಮ್. ಮಾಧವ, ಗವರ್ನಮೆಂಟ್ ಕೋಲೇಜ್. (105) ಶ್ರೀಧರ ಎಮ್ ಕುದ್ರೋಳಿ. (106) **ಕುದ್ರೋಳಿ ಕೆ. ಬುಡಾನ್ ಸಾಹೇಬ** (107) ಬಿ. ಜನಾರ್ಧನ, ಬೋಳಾರ. (.08) ಪ್ರೇಮಾನಂದ, ಕೆನರಾ ಹೈಸ್ಕೂಲು. (109) ಶ್ರೀಮತಿ ಎಮ್. ಶಾಂಭವಿ ಬಾಯಿ. (110) ಎಮ್. ಶೇಷಪ್ಪ, ಶ್ರೀ ರಾಮಕೃಷ್ಣ ಅಯರ್ನ್‌ವರ್ಕ್ಸ್. (111) ಬಿ. ಮುಂಡಪ್ಪ, ಸಂಪಾದಕ, ಮಕ್ಕಳ ತೊದಲು, ಬೊಕ್ಕಪಟ್ಣ ಶಾಲೆ (112) ಎಚ್. ಹೊನ್ನಯ ಪುತ್ರನ್. ಶ್ರೀ ಜ್ಞಾನೋದಯ ಮಂದಿರ. (113) ಎ. ಭೋಜ, ಎಮ್ ಮೆಂಡನ್, ಗಣಪತಿ ಹೈಸ್ಕೂಲು. (114) ಕೆ. ಬಾಬು, ಟೈಲರ್, ರಥಬೀದಿ. (115) ಡಿ. ದಾಮೋಧರ C/o ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ. (116) ಕೆ. ವಾಸುದೇವರಾವ್, ಕಂಪೌಂಡರ್, ಡಾಕ್ಟರ್ ಗಿರಿಧರರಾಯರ ಡಿಸ್‌ಪೆನ್ಸರಿ. (117) ಕೆ. ಗೋಪಾಲಕೃಷ್ಣಯ್ಯ. (118) ಎಮ್. ಐತಪ್ಪ ನಾವುಂಡ (118) ಬಿ. ಪಿ ಬಂಡಾರ್ಕಾರ್ C/o ಎಮ್. ಕೃಷ್ಣನ್ಯಾಕ್ ಎಂಡ್ ಸನ್ಸ್.

30 ಬೆಳ್ಳಿಯ ಪದಕ. 6, 14, 20, 22, 73, 38. ಒಂದೊಂದು ರೂಪಾಯಿ. 23, 60, 64, 100, 101, 106, ಒಂದೊಂದು ಪುಸ್ತಕ. ಈ ಸಲದ ಒಗಟನ್ನೂ ಬಿಚ್ಚಿ ಎಲ್ಲರೂ ಪ್ರೋತ್ಸಾಹಿಸಿರಿ.

# ನಮ್ಮ ಬಡತನ

(ಸ. ಚಂದ್ರಿಕೆಯ ಆಧಾರದಿಂದ) ಬರೆದವರು: - ಶ್ರೀ. ನಾರಾಯಣ ಎಸ್. ಶೆಟ್ಟಿ, ಮುಂಬಾಯಿ.

ದೋಸ್ತರಾಷ್ಟ್ರಗಳು ಜರ್ಮನಿಯೊಡನೆ ಮಾಡಿಕೊಳ್ಳುವ ಒಪ್ಪಂದಕ್ಕೆ ಸಮ್ಮತಿಯನ್ನು ಕೊಡಬೇಕೋ ಬಾರದೋ ಎಂಬ ವಿಷಯವು ಅಮೇರಿಕನ್ ಸಿನೇಟಿನಲ್ಲಿ ಚರ್ಚೆಗೆ ಬಂದಾಗ್ಗೆ ಅಮೇರಿಕದ ಸಂಯುಕ್ತಸಂಸ್ಥಾನಗಳಲ್ಲಿಯ ಮೇರಿಲಂಡ ಸಂಸ್ಥಾನದ ಸಿನೇಟರನಾದ ಮಿ. ಫ್ರಾನ್ಸ್ ಎಂಬವನು ಆ ಒಪ್ಪಂದಕ್ಕೆ ಜೋಡಿಸಿದ ರಾಷ್ಟ್ರಸಂಘದ ಯೋಜನೆಗೆ ಸಮ್ಮತಿಸಲಿಲ್ಲ. ಹಾಗೆ ಮಾಡುವಾಗ ಅವನು ಆ ಸಿನೇಟಿನ ಮುಂದೆ ಮಾಡಿದ ಭಾಷಣವು ಮಹತ್ವದ್ದಿರುವುದು ಆದರೆ ಅವನ ಸಂಪೂರ್ಣ ಭಾಷಣವನ್ನು ಕೊಡಲಿಕ್ಕೆ- ನಮ್ಮ "ಬಂಧು"ವಿನಲ್ಲಿ ಸ್ಥಳವಿಲ್ಲದ್ದರಿಂದ, ಅವನು ನಮ್ಮ ಹಿಂದೂಸ್ಥಾನದ ಬಗ್ಗೆ ಸೂಚಿಸಿದ ಹೃದಯದ್ರಾವಕ ಸಂಗತಿಯನ್ನು ಇಷ್ಟೇ ಇಲ್ಲಿ ಓದಬಹುದು

"ಅಮೇರಿಕದ ಬಾಲಕರಿಗೆ ಕೂಡ ಹಿಂದೀ ಜನರ ದೈನ್ಯಾವಸ್ಥೆಯು ಅವಗತವಾಗಿದೆ. ಹೊಟ್ಟೆ ತುಂಬ ಅನ್ನ ಸಿಗದೆ ಇರುವುದರಿಂದ ಹಸಿದು ಕಂಗಾಲರಾದ ಹಾಗು ತೊಗಲು—ಎಲುಬುಗಳ ಪಂಜರಗಳಂತಿದ್ದ ೫ ಕೋಟಿ ಹಿಂದೀ ಜನರ ಜೀವಂತ ಪಿಶಾಚಿಗಳಂತಹ ಚಿತ್ರಗಳನ್ನು ಅಮೇರಿಕದ ಹುಡುಗರು ನೋಡಿ ವಿಸ್ಮಯರಾಗಿರುವರು"

ಪ್ರಾಚೀನ ಕಾಲದಲ್ಲಿ ಹಿಂದೂಸ್ಥಾನವು ಒಳ್ಳೇ ಬಲಾಢ್ಯ ದೇಶವಾಗಿತ್ತು. ಕ್ರಿಸ್ತಶಕಕ್ಕೆ ಮೂರು ಸಾವಿರ ವರ್ಷ ಪೂರ್ವದಲ್ಲಿ ಅದು ಬಾಬಿಲನದೊಡನೆ ವ್ಯಾಪಾರ ಮಾಡುತ್ತಿತ್ತು. ೨ ಸಾವಿರ ವರ್ಷಗಳಾಚೆಗೆ ಇಜಿಪ್ತದ ಅರಸರು ಅಲ್ಲಿಂದಲೇ ಅರಿವೆ—ಅಂಚಡಿಗಳನ್ನು ತರಿಸುತ್ತಿದ್ದರು. ಹಾಗು ಕ್ರಿಸ್ತಶಕಕ್ಕೆ ಆರು ನೂರು ವರ್ಷ ಪೂರ್ವದಲ್ಲಿ ಅಲ್ಲಿ ಎಲ್ಲಾ ಕಲಾ ಕೌಶಲ್ಯಗಳು ಬಹಳ ಉನ್ನತ ಸ್ಥಿತಿಯಲ್ಲಿದ್ದವು. ಅವರ ತತ್ವಜ್ಞಾನವು ಇಜಿಪ್ತದವರಿಗಿಂತ ಮೇಲ್ತರದಿತ್ತು. ಚೀನ ಹಾಗು ಇಜಿಪ್ತಗಳ ಜ್ಯೋತಿಷ್ಯಶಾಸ್ತ್ರವನ್ನು ಹಿಂದೂ ಜನರೇ ಸುಧಾರಿಸಿದವರು. ಇಂಥ ಈ ಪ್ರಾಚೀನ ಮತ್ತು ಸುಸಂಸ್ಕೃತ ಹಿಂದೂಸ್ಥಾನವು ಕಳೆದ ಶತಕದಲ್ಲಿ ಯಾವ ಅವಸ್ಥೆಯನ್ನು ಹೊಂದಿರುವುದೆಂದು ಕೆಳಗೆ ಕೊಟ್ಟಿರುವ ತಜ್ಞರ ಅಭಿಪ್ರಾಯಗಳ ಮೇಲಿಂದ ಚೆನ್ನಾಗಿ ವ್ಯಕ್ತವಾಗುತ್ತದೆ.

ರೆವ್ಹರೆಂಡ್ ಅಬೇಡುಬಾಯಿಸನು ೧೮೫೦ರಲ್ಲಿ ಹೀಗೆ ಬರೆದಿಟ್ಟಿದ್ದಾನೆ—ಹಿಂದೂ ಜನರಿಗೆ ಬೈಬಲಿನ ಅವಶ್ಯಕತೆಯಿರುವುದಿಲ್ಲ; ಅವರಿಗೆ ಮೊದಲು ಅನ್ನವಸ್ತ್ರಗಳು ಬೇಕಾಗಿವೆ. ಹೊಟ್ಟೆಯಲ್ಲಿ ಅನ್ನ, ಮೈಮೇಲೆ ಬಟ್ಟೆ ಇವುಗಳಿಲ್ಲದಾಗ ಬೈಬಲನ್ನೋದುವ ಇಚ್ಛೆಯು ದೊಡ್ಡ ಧಾರ್ಮಿಕ ಕ್ರೈಸ್ತನಿಗೂ ಆಗಲಾರದು. ಅಂದ ಬಳಿಕ ಪಾಪ! ಈ ಕಂಗಾಲಾದ ಹಿಂದೂಗಳಿಗೆ ಅದರ ಪ್ರಯೋಜನವೇನು?

ಸರ್. ಟ್ರೈಡರಿಕ್ ಫ್ರೆವ್ಹಜನೆಂಬ ಇಂಗ್ಲೆಂಡದ ಸರ್ಜನನು ೧೯೦೪ರಲ್ಲಿ ಹಿಂದೂಸ್ಥಾನದಲ್ಲೆಲ್ಲಾ ಸಂಚರಿಸಿ ಹೀಗೆ ಬರೆದಿಟ್ಟಿದ್ದಾನೆ. "ಈ ದೇಶದಲ್ಲಿ [illegible] ಕೋಟ್ಯಾವಧಿ ಜನರು ಅಖಂಡ ಉಪವಾಸಮಾಡದ್ದರೂ, ಅವರಿಗೆ ಸಾಕಷ್ಟು ಅನ್ನವಸ್ತ್ರಗಳು ಸಿಗುವದಿಲ್ಲ. ಎಲುಬುಗಳ ಪಂಜರದಂತಿರುವ ಈ ಜನರಲ್ಲಿಯ ಬಹು ಸಂಖ್ಯಾತರು ಪ್ಲೇಗು, ಕಾಲರಾ ಮುಂತಾದವುಗಳಿಗೆ ಬಲಿಯಾಗುತ್ತಾರೆ" ಆಸಿಬೆರ್ಝುಂಟ ಇವರು ೧೯೧೭ರಲ್ಲಿ ಲಂಡನ್ "ಡೇಲಿಹೆರಲ್ಡ" ಎಂಬ ವಾರ್ತಾಪತ್ರದಲ್ಲಿ ಪ್ರಸಿದ್ಧಿಸಿರುವುದೇನಂದರೆ—

"ಹಿಂದೂಸ್ಥಾನದೊಳಗಣ ಸುಮಾರು ಅರ್ಧ ಜನರಿಗೆ ಒಪ್ಪೊತ್ತಿನ ಮಟ್ಟಿಗೆ ಆಹಾರ ಸಿಗುವುದು. ಇದರಿಂದ ಇವರ ಆಯುಷ್ಯವು ಕಡಿಮೆಯಾಗಿದೆ. ನ್ಯೂಝೀಲಂಡದೊಳಗಿನ ಜನರ ಆಯುಷ್ಯವು ಸರಾಸರಿ ೬೦ ವರ್ಷ ಇದೆ; ಇಂಗ್ಲೆಂಡದಲ್ಲಿ ೪೦ ವರ್ಷ ಅದೆ. ಆದರೆ ಹಿಂದೂಸ್ಥಾನದಲ್ಲಿ ಮಾತ್ರ ೨೩ ವರ್ಷ ಇರುತ್ತದೆ. ಹಿಂದೂಸ್ಥಾನದೊಳಗೆ ಪಿಕ್ಕ ಕ್ರಾಂತಿಗಳಿಗಿಂತ ಕ್ಷುದಾಕ್ರಾಂತಿಯೇ ಹೆಚ್ಚಾಗಿರುತ್ತದೆ."

ಈ ದೇಶದಲ್ಲಿ ಇಷ್ಟು ದಾರಿದ್ರ್ಯಾವಸ್ಥೆಯು ಬರಲಿಕ್ಕೆ ಇಲ್ಲಿಂದ ಆಗುವ ಮಿತಿಮೀರಿದ ದ್ರವ್ಯಶೋಷಣವೇ ಕಾರಣವು. ಪ್ಲಾಸಿಯ ಕಾಳಗ (ಇಸವಿ ೧೭೫೭)ದಿಂದ ಈ ದ್ರವ್ಯಶೋಷಣಕ್ಕೆ ಆರಂಭವಾಗಿದೆ. ಮಿ. ಬ್ರೂಕ್ಸ ಆಡಮ್ಸ ಎಂಬವನು ಈ ದ್ರವ್ಯಶೋಷಣದ ಬಗ್ಗೆ ಹೀಗೆ ಬರೆಯುತ್ತಾನೆ—"ಕೋಟ್ಯಾವಧಿ ಹಿಂದೀಜನರು ನೂರಾರು ವರ್ಷ ಕಷ್ಟಪಟ್ಟು ಸಂಪಾದಿಸಿಟ್ಟ ಸಂಪತ್ತಿಯನ್ನು ಇಂಗ್ಲಿಷರು ಇಂಗ್ಲೆಂಡಿಗೆ ಒಯ್ಯುವ ಕ್ರಮ ವಹಿಸಿದರು. ಇಲ್ಲಿಂದ ಇವರು ಎಷ್ಟು ಸಂಪತ್ತಿಯನ್ನು ಒಯ್ದರೆಂಬದರ ನಿಜವಾದ ಲೆಕ್ಕ ಹತ್ತದಿದ್ದರೂ, ಕಂಗಾಲಾಗಿದ್ದ ಆಗಿನ ಯುರೋಪಕ್ಕೂ ಈಗಿನ ಯುರೋಪಕ್ಕೂ ಸರಿ ಹಚ್ಚಿ ನೋಡಿದರೆ, ಅವರು ಅತ್ಯಂತ ಸಂಪತ್ತಿಯನ್ನು ಸೆಳೆದಿರುವರೆಂಬುದು ನಿಶ್ಚಿತವಾದವು.

ಈಗಲೂ ಈ ದ್ರವ್ಯಶೋಷಣವು ಬೇರೆ ಬೇರೆ ವಿಧದಿಂದ ನಡದೇ ಇರುತ್ತದೆ. ಹಿಂದೂಸ್ಥಾನದಲ್ಲಿಯ ಸಂಪತ್ತಿಯೆಲ್ಲ ಶೋಷಣವಾಗುತ್ತಿರುವುದರಿಂದ ಅಲ್ಲಿ ದುಷ್ಕಾಳ, ಪ್ಲೇಗು ಮುಂತಾದುವುಗಳು ಆಗಾಗೆ ಉಂಟಾಗಿ ಜನರ ಆರೋಗ್ಯವನ್ನು ರಕ್ಷಿಸಲಿಕ್ಕೆ ಆಸ್ಪದವಿಲ್ಲ.

ಹಿಂದೂಸ್ಥಾನದ ಜನರ ಮರಣದ ಸಂಖ್ಯೆಯು ಮೀರಿದ ಪ್ರಮಾಣದಲ್ಲಿದೆ. ೧೮೯೯ರಿಂದ ೧೯೦೧ರ ವರೆಗೆ ಮರಣದ ಲೆಕ್ಕವನ್ನು ನೋಡಿದರೆ ಅಲ್ಲಿ ಪ್ರತಿ ಮಿನಿಟಿಗೆ ಇಬ್ಬರು ಜನರು ಸಾಯುತ್ತಾರೆಂದು ಕಂಡುಬರುತ್ತದೆ. ಇಷ್ಟು ಮರಣವು ಬೇರೆ ಯಾವ ದೇಶದಲ್ಲಿಯೂ ಇಲ್ಲ.

ಹಿಂದೂಸ್ಥಾನದ ಜನರ ಶಿಕ್ಷಣವು ಬಹಳ ಹಿಂದಿರುವುದು. ಇದಕ್ಕೆ ಅಲ್ಲಿಯ ಸರಕಾರವು ಶಿಕ್ಷಣಕ್ಕೆ ಹೆಚ್ಚು ಹಣ ಖರ್ಚುಮಾಡದಿರುವುದೇ ಮುಖ್ಯ ಕಾರಣವಾಗಿದೆ. ಫಿಲಿಪಾಯನ್ ದ್ವೀಪದಲ್ಲಿ ಶಿಕ್ಷಣಕ್ಕಾಗಿ ಪ್ರತಿಯೊಬ್ಬನಿಗೆ ೧೩ ರೂಪಾಯಿ ಖರ್ಚು ಆಗುವುವು. ಆದರೆ ಹಿಂದೂಸ್ಥಾನದಲ್ಲಿ ಪ್ರತಿಯೊಬ್ಬನಿಗೆ ೨ ಆಣೆ ೯ ಪೈ ಮಾತ್ರ ಆಗುವುವು. ಹಿಂದೂಸ್ಥಾನದ ಒಟ್ಟು ೭॥ ಕೋಟಿ ಹುಡುಗರಲ್ಲಿ ೬೮ ಲಕ್ಷ ಹುಡುಗರು ಮಾತ್ರ ಶಾಲೆಗೆ ಹೋಗುತ್ತಾರೆ. ಇಪ್ಪತ್ತೇ ವರ್ಷಗಳಲ್ಲಿ ಅಮೇರಿಕದವರು ಫಿಲಿಪಾಯಿನ್ಸ ಜನರಲ್ಲಿ ೧೦೦ಕ್ಕೆ ೪೪ರಂತೆ ಶಿಕ್ಷಣವುಳ್ಳವರನ್ನಾಗಿ ಮಾಡಿದರು. ಆದರೆ ಹಿಂದೂಸ್ಥಾನವು ಬ್ರಿಟಿಷರ ಕೈಸೇರಿ ೧೫೦ ವರ್ಷಗಳಾಗಿದ್ದರೂ ಅಲ್ಲಿಯ ಅಕ್ಷರಜ್ಞರ ಪ್ರಮಾಣವು ೧೦೦ಕ್ಕೆ ೭ ಮಾತ್ರ ಅದೆ.

ಮಹಾಯುದ್ಧದಿಂದ ಸ್ವಯಂ ನಿರ್ಣಯ ತತ್ವವು ಸ್ಥಾಪಿತವಾಗಿ ಅದು ಹಿಂದೂಸ್ಥಾನಕ್ಕೂ ಸಂಬಂಧಿಸಬಹುದೆಂದು ನಾವು ತಿಳಿಯುತ್ತೇವೆ. ಆದರೆ ಹಿಂದೂಸ್ಥಾನದ ಬಹುಸಂಖ್ಯಾಕ ಪ್ರಜೆಗಳ ವಿರೋಧವನ್ನು ಲಕ್ಷಿಸದೆ ರಾಲೆಟ್ ಆಕ್ಟ ಪಾಸ್ ಮಾಡಲ್ಪಟ್ಟಿತು. ಹಾಗು ನಿಶ್ಶಸ್ತ್ರ ಮತ್ತು ಅನಾಥ ಜನರ ಮೇಲೆ ಕೆಲವು ಅಧಿಕಾರಿಗಳು ಮೆಶೀನಗನ್ ಮತ್ತು ಬಾಂಬು ಗುಂಡಿನ [illegible] ಅನೇಕ ಜನರನ್ನು ಕೊಂದರು ಈ ಪ್ರಕಾರ ಹಿಂದೂಸ್ಥಾನದ ಹೃದಯದ್ರಾವಕ ಸ್ಥಿತಿಯನ್ನು ಎಷ್ಟು ಹೇಳಿದರೂ ಸ್ವಲ್ಪ [illegible].

# ಕೊಂಚ-ಕೊಂಚ

### ಶಿಕ್ಷಿತ ಪತ್ನಿಯ ಆತ್ಮಹತ್ಯೆ.

ಸುಜರ್ಾನಗರ ಎಂಬಲ್ಲಿ ಪೋಲಿಸ್ ಇನ್ಸ್‌ಪೆಕ್ಟರನೊಬ್ಬನ ಮಗಳೊಬ್ಬಳು ಸುಶಿಕ್ಷಿತೆಯಾಗಿದ್ದಳು. ಅವಳನ್ನು ಹಳ್ಳಿಯ ಅಶಿಕ್ಷಿತನೊಬ್ಬನಿಗೆ ವಿವಾಹ ಮಾಡಿ ಕೊಡಲಾಯಿತು. ಅವಳು ಅವನೊಂದಿಗೆ ಜೀವಿಸಲೊಪ್ಪದೆ ತಂದೆಯ ಮನೆಗೇನೇ ಹಿಂದೆ ಬಂದಳು. ಸ್ವಲ್ಪ ಸಮಯದ ಮೇಲೆ ಗಂಡನು ಅವಳನ್ನು ಕರೆಯ ಬಂದನು. ತಂದೆತಾಯಿಗಳು ಹೋಗಬೇಕೆಂದು ನಿರ್ಬಂಧಿಸಿದರು. ಆಗ ಅವಳು ಒಂದು ಕೋಣೆಯ ಒಳಗೆ ಹೋಗಿ ಕೀಲು ಹಾಕಿ, ಉಟ್ಟ ವಸ್ತ್ರಕ್ಕೆ ಚಿವಿಣಿ ಎಣ್ಣೆ ಹೊಯ್ದು ಬೆಂಕಿ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಳು.

### ಮರ್ಮಸ್ಥಾನ ಮಾರ್ಪಾಟ.

ಈಗೀಗ ಈ ಲಿಂಗ ಮಾರ್ಪಾಟದ ವಾರ್ತೆಯು ಪ್ರತಿ ವಾರದಲ್ಲೆಂಬಂತೆ ತಿಳಿದುಬರುತ್ತದೆ. ಇಂತಹ ಘಟನೆಗಳು ಹಿಂದೂದೇಶದಲ್ಲಿಯೂ ನಡೆದಿರುತ್ತವೆ. ಕರಾಚಿಯ ರಾಹು ಎಂಬ ಖೈರಪುರಿ ತರುಣನು ತನ್ನ ೧೮ನೇ ವಯಸ್ಸಿನಲ್ಲಿ ತರುಣಿಯಾಗಿ ಮಾರ್ಪಟ್ಟಿರುವನೆಂದು ತಿಳಿದುಬರುತ್ತದೆ. ಪೋರ್ಚುಗೀಸ್ ದೇಶದ ಮುಖ್ಯ ಪಟ್ಟಣವಾದ ಲಿಸ್ಬನಿನಲ್ಲಿ ಹುಡುಗಿಯೋರ್ವಳು ಒಂದು ಒಪರೇಶನಿಗಾಗಿ ಆಸ್ಪತ್ರೆಗೆ ಹೋದಾಗ ಡಾಕ್ಟರರು, ಅವಳು ಹುಡುಗನಾಗಿರುವುದನ್ನು ಕಂಡುಕೊಂಡರು. ಹೀಗೆಯೇ ಇವಳ ತಂಗಿಯೊಬ್ಬಳೂ ಹುಡುಗನಾಗಿ ಮಾರ್ಪಟ್ಟಿರುವಳು.

### ೬೭೩ ದಿನಗಳ ತನಕ ನಿದ್ದೆ.

ಅಮೆರಿಕದ ಟೆನ್ನೆಸಿ ಎಂಬಲ್ಲಿಯ ೯ ವರ್ಷದ ಹುಡುಗನೊಬ್ಬನು ಈಗ ೬೭೩ ದಿನಗಳಿಂದ ನಿದ್ದೆಮಾಡಿಕೊಂಡೇ ಇರುವನು. ಅವನ ದೇಹಪ್ರಕೃತಿಯು ಇತರರಂತೆಯೇ ಇರುವುದು. ಇವನ ರೋಗವೇನೆಂದು ಡಾಕ್ಟರರಿಗೆ ಈ ವರೆಗೆ ತಿಳಕೊಳ್ಳಲಾಗಲಿಲ್ಲ.

### ಶವಪೆಟ್ಟಿಗೆಯಿಂದೆದ್ದ ವಧು.

ಫ್ರಾನ್ಸ್ ದೇಶದ ಹಳ್ಳಿಯೊಂದರಲ್ಲಿ ಪೀಯರಿ ಮತ್ತು ಜೀನ್ ಎಂಬವರು ಚಿಕ್ಕಂದಿನಿಂದ ಪರಸ್ಪರ ಅನುರಕ್ತರಾಗಿದ್ದು ಪ್ರಾಯಕ್ಕೆ ಬಂದೊಡನೆಯೇ ಮದುವೆಮಾಡಿಕೊಳ್ಳುವ ನಿರ್ಧಾರ ಮಾಡಿದರು. ಈ ಸಂದರ್ಭದಲ್ಲೇ ಜೀನಳು ಅದೊಂದು ವಿಚಿತ್ರರೋಗಗ್ರಸ್ತಳಾದಳು. ಅದೇನೂ ವಿಶೇಷ ರೋಗವಲ್ಲೆಂದು ವಿವಾಹಸಿದ್ಧತೆ ನಡೆಯಿತು. ಆದರೆ ಧಾರೆಯಾಗುವ ಮೊದಲು ಜೀನಳು ಮೃತಳಾದಳು. ವಿವಾಹ ಸಿದ್ಧತೆಯು ಶವದಹನ ಸಿದ್ಧತೆಯಲ್ಲಿ ಪರಿಣಮಿಸಿತು. ಶವಸಂಸ್ಕಾರದ ಮೊದಲಿನ ರಾತ್ರಿ, ಮೃತಳ ಪ್ರಣಯಿಯು ತನ್ನ ಸಂಬಂಧಿಕನೊಬ್ಬನೊಂದಿಗೆ ಶವವಿಡಲ್ಪಟ್ಟಿದ್ದ ಕೋಣೆಯಲ್ಲಿ ಕುಳಿತಿರುವಾಗ, ಜೀನಳು ಗಾಢ ನಿದ್ರೆಯಿಂದೆಂಬಂತೆ ಎಚ್ಚತ್ತು ಕಣ್ಣು ತಿಕ್ಕಲಾರಂಭಿಸಿದಳು. ಇದರಿಂದ ಬೆದರಿದ ಪೀಯರಿಯೂ ಅವನ ಸಂಬಂಧಿಕನೂ ಕೋಣೆಯಿಂದ ಓಡಿಹೋದರು. ಆ ಮೇಲೆ ಡಾಕ್ಟರರನ್ನು ಕರೆಯಿಸಿ ಜೀನಳನ್ನು ಪೆಟ್ಟಿಗೆಯಿಂದ ಹೊರ ತೆಗೆದು ಶವಸಂಸ್ಕಾರ ಸಿದ್ಧತೆಯು ವಿವಾಹ ಸಿದ್ಧತೆಯಾಗಿ ಮಾರ್ಪಟ್ಟಿತು.

### 10 ತಿಂಗಳಲ್ಲಿ 3 ಮಂದಿ ಗಂಡಂದಿರು.

ಅಲ್ಬೇಕಿಯಳೆಂಬ 14 ವರ್ಷ ಪ್ರಾಯದ ಹುಡುಗಿಯೊಬ್ಬಳು 10 ತಿಂಗಳಲ್ಲಿ 3 ಮಂದಿಯನ್ನು ಮದುವೆ ಮಾಡಿಕೊಂಡು ವಂಚಿಸಿರುವಳು. ತನ್ನ ತಂದೆಗೆ ಹೇರಳ ಐಶ್ವರ್ಯವಿದೆ. ಅವನೀಗ ಜೈಲಲ್ಲಿ ಇದ್ದಾನೆ. ಅವನನ್ನು ಬಿಡಿಸಿದರೆ ರಹಸ್ಯವಾಗಿರಿಸಲ್ಪಟ್ಟಿರುವ ಐಶ್ವರ್ಯ ಸಿಗುವುದೆಂದೆಲ್ಲಾ ಬೇರೆ ಬೇರೆ ಹೆಸರಿನಿಂದ 3 ಮಂದಿಗೆ ಮಂಕು ಬೂದಿ ಬಳೆದು ಮದುವೆ ಮಾಡಿಕೊಂಡು ಅವರಿಂದ ಬಹಳ ಹಣ ವೆಚ್ಚ ಮಾಡಿಸಿದಳು. 4ನೇಯವನೊಬ್ಬನೊಡನೆ ಪತ್ರವ್ಯವಹಾರ ನಡೆಸುತ್ತಿದ್ದಾಗ ಕೈದು ಮಾಡಲ್ಪಟ್ಟಳು. ಇವಳು ಪ್ರಬಲ ದಂಗೆಖೋರ ಪಂಗಡವೊಂದರ ಹಸ್ತಕಳಿರುವಳೆಂದು ತಿಳಿದು ಬಂದಿದೆ.

[ನವಯುಗ]

# ಬಡವರ ಬಂಧು ಹಾಸ್ಯೌಷಧಾಲಯ

ಉಪದೇಶಿ:-ದಾನಧರ್ಮವೆಂದರೆ ನಷ್ಟವೆಂದೆಣಿಸದಿರಿ. ಅದರಲ್ಲಿ ದೇವರ ಆಶೀರ್ವಾದವಿದೆ. ಕೊಡುವವನು ಪುಣ್ಯವಂತನು. ದೇವರು ಅವನಿಗೆ, ಅವನು ಕೊಟ್ಟುದರ ಇಮ್ಮಡಿ ಲಾಭವನ್ನು ಸೇರಿಸುವನು.

ಅನುಭವಸ್ಥ ಗೃಹಸ್ಥ:-ಹೌದು ಸ್ವಾಮಿ, ನಾನು ಮೊನ್ನೆ ತಾನೇ ನನ್ನ ಮಗಳೊಬ್ಬಳನ್ನು ಕನ್ಯಾದಾನ ಮಾಡಿ ಕೊಟ್ಟಿದ್ದೆ. ಈಗ ಅವಳೂ, ಗಂಡನೂ ಕೂಡಾ ನನ್ನನ್ನು ಸೇರಿರುವರು.

† † † †

ದೀರ್ಘಕಾಲ ನರಳುತ್ತಿದ್ದ ರೋಗಿ (ನಿರಾಶೆಯಿಂದ):—ನನ್ನ ರೋಗವು ಗುಣವಾದೀತೇ ಡಾಕ್ಟರರೇ?

ಡಾಕ್ಟರರು:-ನಿಮಗಾ ಯೋಚನೆ ಬೇಡ; ಈ ತರದ ರೋಗದಿಂದ ನರಳುವವರಲ್ಲಿ ಹತ್ತರಲ್ಲಿ ಒಂಭತ್ತು ಮಂದಿ ಸೌಖ್ಯ ಹೊಂದುತ್ತಾರೆಂದು ನಮ್ಮ ಪುಸ್ತಕದಲ್ಲಿ ಕೂಡಾ ಬರೆದಿರುತ್ತದೆ.

ರೋಗಿ:—ತಾವು ಇಂತಹ ರೋಗಕ್ಕೆ ಈ ವರೆಗೆ ಮದ್ದು ಕೊಟ್ಟಿರುವಿರಾ?

ಡಾಕ್ಟರರು:—ನಾನು ಈ ವರೆಗೆ ಒಂಭತ್ತು ಮಂದಿಗೆ ಮದ್ದು ಕೊಟ್ಟು ಗುಣ ಮಾಡಿರುತ್ತೇನೆ.

† † † †

ತಾನು ಕೆಲಸಕ್ಕೆ ನೇಮಿಸಿದ ಕೂಲಿಯವನನ್ನು ಕರೆದು, ಅತೃಪ್ತಿಯಿಂದ "ಇಡೀ ದಿನ ಇಷ್ಟೋ ನಿನ್ನ ಕೆಲಸ?"

ಕೂಲಿ:-ಹೆಚ್ಚು ಮಾಡಬಹುದಿತ್ತು ಸ್ವಾಮಿ! ಆದರೆ, ನಾನು ಅಷ್ಟು ತೋರಿಕೆಯ ಮನುಷ್ಯನಲ್ಲ.

† † † †

ರಾಘವ:—"ಎಂತಹ ಕತ್ತೆಗಳು ನಾವು"

ಮಾಧವ:-"ದಯಮಾಡಿ ಏಕ ವಚನದಲ್ಲಿ ಮಾತನಾಡಿ"

ರಾಘವ:—"ಎಂತಹ ಕತ್ತೆ ನೀನು?"

† † † †

ಉಪಾಧ್ಯಾಯ:—ರಾಮಾ; ನೀನು ಇಂದು ಶಾಲೆಗೆ ಬರುವಾಗ ತಡವೇನು?

ರಾಮು:—ದಾರಿಯಲ್ಲಿ ಮುದುಕಿಯೊಬ್ಬಳ ಎರಡಾಣೆ ಪಾವಲಿಯು ಕಳೆದು ಹೋಗಿತ್ತು.

ಉಪಾಧ್ಯಾಯ:—ಅದಕ್ಕೆ ನಿನಗೇನು ತಡ?

ರಾಮು:—ನನ್ನ ಪಾದವು ಎರಡಾಣೆ ಪಾವಲಿ ಮೇಲಿತ್ತು.

ಶ್ರೀ. ಎಸ್. ಎಸ್. ಬೋಳೂರು.

ತಂದೆ:-(ವರ್ತಮಾನ ಪತ್ರವನ್ನು ಓದುತ್ತಾ) ಆಫ್ರಿಕದಲ್ಲಿ ಜನರು ವರ್ಷದಲ್ಲಿ ಒಂದೆರಡು ಸಾರಿ ಮಾತ್ರ ಸ್ನಾನ ಮಾಡುತ್ತಾರಂತೆ.

ಮಗ:-ಹಾಗಾದರೆ ಅಪ್ಪಾ, ನಾವೂ ಅಲ್ಲಿಯೇ ಹೋಗಿ ವಾಸ ಮಾಡೋಣ.

† † † †

ಯಜಮಾನಿ:-(ಅಡಿಗೆಯವಳಿಗೆ) ನೀನು ಒಂದು ಹುಚ್ಚರ ಆಸ್ಪತ್ರೆಯಲ್ಲಿ ಕೆಲಸ ಮಾಡುವುದಕ್ಕಾಗಿ ನಮ್ಮಲ್ಲಿ ಕೆಲಸ ಬಿಡುತ್ತಿಯಂತೆ. ನಿಜವೊ?

ಅಡಿಗೆಯವಳು:-ಹೌದು.

ಯಜಮಾನಿ:-ಆದರೆ ಹುಚ್ಚರ ಆಸ್ಪತ್ರೆಯಲ್ಲಿ ಕೆಲಸ ಮಾಡುವುದಕ್ಕೆ ನಿನಗೆ ಅಷ್ಟು ಅನುಭವ ಎಲ್ಲಿಯದು?

ಅಡಿಗೆಯವಳು:-ಐದು ವರ್ಷ ಇಲ್ಲಿ ಕೆಲಸ ಮಾಡಿದೆ. ಈ ಅನುಭವ ಸಾಕಾಗುವುದಿಲ್ಲವೊ?

† † † †

ಮ್ಯಾನೇಜರ:- ಯಾವ ಮೂರ್ಖನು ಈ ಕಾಗದವನ್ನು ನಿನಗೆ ಮೇಜಿನ ಮೇಲೆ ಇಡಲಿಕ್ಕೆ ಹೇಳಿದನು?

ಗುಮಾಸ್ತ:-ನೀವೇ.

† † † †

ಪತಿ:-ಏನೇ, ಯಾಕೆ ಅಳುತ್ತಿ?

ಪತ್ನಿ:-ನಮ್ಮ ಅಡಿಗೆಯವಳು ನನ್ನೊಡನೆ ಜಗಳವಾಡಿ ಹೊರಟುಹೋದಳು. ಈಗ ಎಲ್ಲಾ ಕೆಲಸವು ನಿಮ್ಮ ಮೇಲೆಯೇ ಬೀಳುತ್ತದೆಂದು ಅಳು ಬರುತ್ತದೆ.

# ---------ಂಡೆ ಬೆಳೆದರೆ ಗೌಡರಾಗುತ್ತಾರೆಯೋ?

ಬೈ: ಮಿ। ಮೈಸೂರ್ ನರ್ಸಣ್ಣ.

ಸಲಾಂ ಇದೆ ರಾಯರೇ, ಊರಲ್ಲೆಲ್ಲಾ ಕನ್ನಡ ಭಾಷೆಯನ್ನು ವೃದ್ಧಿ ಮಾಡುವುದಕ್ಕಾಗಿ ಭಾರೀ ಚಳವಳ ನಡೆಯುತ್ತಿವೆ ನಾಡ ಹಬ್ಬ, ಸಾಹಿತ್ಯ ಪರಿಶತ್ತು, ಮಹಾ ಸಭೆ, ಮಹಾ ಬೊಬ್ಬೆ, ಕವಿ ಸಮ್ಮೇಳನ ಎಲ್ಲಾ ನಡೆಯುತ್ತದೆ. ಕನ್ನಡದಲ್ಲಿ ಕೆಲವು ಸಾಹಿತಿಗಳು ತಾವು ವಿಮಾನದ ಮೇಲೆಯೇ ಇರುವರೆಂದು ಭಾವಿಸುತ್ತಾರೆ. ಇವರಿಗೆ ಹಾಸ್ಯರಸ ಪ್ರಧಾನವಾದ ಅಥವಾ ಸರಳ ಭಾಷೆಯ ಪತ್ರಿಕೆಗಳನ್ನಾಗಲೀ ಓದುವು ಪೆಂದರೆ ಕಾಸರಕನ ರಸ ಕುಡಿದಂತೆ. ತಾವು ಮಹಾ ಸಾಹಿತಿಗಳು, ವರ ಸಾಹಿತಿಗಳು ಎಂಬ ಭ್ರಮೆ ಇವರ ತಲೆಗೆ ಹೋಗಿ ಬಿಡುತ್ತಿದೆ. ಇಂತಹವರು ಹುಟ್ಟಿದುದರಿಂದಲೇ ಕನ್ನಡಕ್ಕೆ ಅಧೋಗತಿ ನೋಡಿ. ಯಕ್ಷಗಾನ ಎಂದರೆ ಈ ಸಾಹಿತಿಗಳಿಗೆ ಹುಡುಗಾಟಕೆ ಎಂದೇ ಭಾವನೆ ಮೊನ್ನೆ ಪುತ್ತೂರಿನಲ್ಲಿ ನಾಡ ಹಬ್ಬ ಜರಗಿತು ನೋಡಿ. ಅಲ್ಲಿ ಯಕ್ಷಗಾನಕ್ಕೆ ನಕಲಿ ಮಾಡಿದುದನ್ನು ನೋಡಿ ನನಗೆ ಬೆವರು ಇಳಿಯಿತಯ್ಯ! ಯಕ್ಷಗಾನ ತಿಳಿಯದಿದ್ದರೆ ಅದಕ್ಕೆ ನಕಲಿ ಮಾಡಬೇಕೆಂದು ಯಾವ ಕಾನೂನಿನಲ್ಲಿದೆ? ತಾವು ಸಾಹಿತಿಗಳಾದರೆ ಎಲ್ಲರಿಗೂ "ನೀನು ಸಾಯುತಿ" ಎಂದು ಹೇಳಿದರೆ ಕೇಳುವವರಿಲ್ಲವೆ? ಕನ್ನಡ ವಾಚನದ ಅಭಿರುಚಿಯು ಜನರಲ್ಲಿ ತಲೆದೋರಬೇಕಾದರೆ ಇಂತಹ ಸಾಹಿತಿಗಳು ಎಚ್ಚರವಾಗಲೇ ಬೇಕು. ಕನ್ನಡ ವಾಚನವೆಂದರೆ ಹೆಚ್ಚಿನವರ ದಾಕ್ಷಿಣ್ಯೆಯ ವೃತ್ತಿ. ಹಾಗಿರುವಾಗ ಈ ಸಾಹಿತಿಗಳು ಸಾಹಿತ್ಯವಿಲ್ಲದ ಸಾಹಿತ್ಯಗಳನ್ನು ನಿಂದಿಸಿದರೆ ಗತಿ ಹೇಗೆ? ಈಗಿನ ಕನ್ನಡಕ್ಕೆ ಈ ಸಾಹಿತಿಗಳು ಎಂಬವರೇ ಮುಳ್ಳಿನ ಬೇಲಿ. ಅದರೊಡನೆ ವಿ. ಪಿ. ಗಳನ್ನು ಹಿಂದೆ ಬಿಡುವವರೂ ಒಂದು ಕೆಸರಿನ ಕುಂಟೆ. ವಿ. ಪಿ.ಗಳನ್ನು ಹಿಂದೆ ಬಿಡುವಷ್ಟು ನಿಷ್ಠುರ ಹೃದಯಿಗಳಾದ ವಾಚಕರು ಬಡವರ ಬಂಧುವಿಗೆ ಇಲ್ಲವೆಂದು ನನಗೆ ಅದರ ಸಂಪಾದಕರು ಹೇಳಿರುವರಾದರೂ, ಮತ್ತೊಂದು ಪತ್ರಿಕೆಯನ್ನು ಅದರ ಕಠಿಣ ಹೃದಯಿಗಳಾದ ಚಂದಾದಾರರು ವಿ. ಪಿ. ತಿರಸ್ಕರಿಸಿಯೇ ಮರಣಕ್ಕೆ ಬಲಿಕೊಟ್ಟರು. ವಿ. ಪಿ. ಹಿಂದೆ ಬಿಡುವವರು ಪತ್ರಿಕೆಯ ಕೊಲೆಗಾರರು. ಇದನ್ನು ಬರೆಯುತ್ತಿರುವಾಗ ಜಪ್ಪುವಿನ ಕೊಮನ್‌ವೆಲ್ತ್ ಹಂಚು ಕಾರ್ಖಾನೆಯಲ್ಲಿ ಕೂಲಿಗಾರರ ಸ್ಟ್ರೈಕ್ ಆಯಿತೆಂದೂ, ಶ್ರೀ. ಯು. ಸಿ. ಎಸ್. ಭಟ್ಟರ ಮಧ್ಯಸ್ಥಿಕೆಯಿಂದಾಗಿ ಮುನ್ನೂರು ಕೂಲಿಗಾರರೂ ರಾಜಿಗೆ ಬಂದು ಕೆಲಸಕ್ಕಾರಂಭಿಸಿದರೆಂದೂ ಗೊತ್ತಾಯಿತು. ಬಡವರು ಒಂದಾದರೆ ದೊಡ್ಡವರು ಏನು ಮಾಡುವುದ್ರಿ? ಬಡವರು ಒಂದಾಗಿ ನಿಂತರೆ ದೊಡ್ಡವರ ಮಹಮ್ಮೇರು ಪರ್ವತವನ್ನೂ ಕೆಳಗಿಳಿಸಿ ಬಿಡಬಹುದು. ಒಳ್ಳೇದು ಮಾಡಿದಿರಿ. ಕೂಲಿಗಾರರೇ ನಿಮ್ಮ ಒಗ್ಗಟ್ಟ ಸತ್ವವನ್ನು ನೋಡಿ ಲೋಕವೇ ಆನಂದಗೊಂಡಿದೆ. ನ್ಯಾಯದಲ್ಲಿದ್ದರೆ ಯಾವುದಕ್ಕೂ ಹೆದರಬೇಡಿ! ನಿಮ್ಮ ಅನ್ನ ನಿಮ್ಮ ಕೈಯಲ್ಲಿದೆ; ಒಂದು ಕಾರ್ಖಾನೆಯನ್ನು ಬಿಟ್ಟರೆ ಅಂತಹ ಇಪ್ಪತ್ತು ಕಾರ್ಖಾನೆಗಳಲ್ಲಿ ನಿಮಗೆ ಕೆಲಸ ಸಿಗುವುದು. ಮಂಗಳೂರಿನಲ್ಲೂ ಮುಷ್ಕರವು ಗೆದ್ದಿತೆಂದು ಇತಿಹಾಸದಲ್ಲಿ ಬರೆಯುವಂತೆ ಮಾಡಿದಿರಿ! ನೀವೇ ಧನ್ಯರು. ಮಾತ್ರ ಮುಷ್ಕರದೊಡನೆ ಹಿಂಸೆ ಇರಬಾರದು. ನಿಮ್ಮ ಮುಷ್ಕರದಲ್ಲಿ ಕಲೆಕ್ಟರರು ಕೈ ಇಡದಿದ್ದುದೂ ಒಳ್ಳೆಯದೇ ಆಯಿತೆನ್ನಿ. ಕಲೆಕ್ಟರರು ಜಪ್ಪು ಕಾರ್ಖಾನೆಯವರ ಸಹಾಯಕ್ಕೆ ಬರುತ್ತಿದ್ದರೆ ಎಲ್ಲಾ ಪಜೀತಿ ಆಗುತಿತ್ತು! ಪೋಲೀಸರು ನಿಮ್ಮಲ್ಲಿ ಕೆಲವರನ್ನಾದರೂ ಜೈಲಿನ ಬಟ್ಟಲಿಗೆ ಕೊಡುತ್ತಿದ್ದರು. ನಮ್ಮೂರಲ್ಲಿ ಕರ್ನಾಟಕ ಬೂಸ್ ಏಜನ್ಸಿಯೆಂಬುದೊಂದಿದೆ. ನಿಮ್ಮ ಕುರಿತು ಆ ಏಜನ್ಸಿಗೆ ಬರೆದುಕೊಂಡು ನಿಮ್ಮ ಹಣವನ್ನೆಲ್ಲಾ ಹಿಡಿದುಕೊಳ್ಳಲು ಹೇಳುತ್ತೇನೆ. ಈ ಏಜನ್ಸಿಯ ಕೆಲಸ ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ- ಕೊಡುವ ಹಣವನ್ನು "ಕೊಡು"ವುದರಲ್ಲಿ ಈ ಏಜನ್ಸಿಯು ಹೆಸರಾದುದು. ವಿ. ಪಿ. ಗಿ ಪಿ. ಕಳುಹಿಸಿದರೆ ಅದನ್ನು ಖಂಡಿತವಾಗಿಯೂ ಅದು ಹಿಂದೆ ಬಿಡುತ್ತದೆ! ಅಂತಹವರದು ಈ ಏಜನ್ಸಿ! ಅತ್ತಾವರ ಬೆಂಚ್‌ಕೋರ್ಟಿನಲ್ಲಿ ವಾದಿ ಪ್ರತಿವಾದಿಯರಿಲ್ಲದ ವೇಳೆ, ಕೋರಂ ಇಲ್ಲದೆ, ಎರಡು ಘಂಟೆಯ ಮೊದಲು ಕೇಸ್ ತೆಗೆಯುತ್ತಾರೆಂದು ವಾರ್ತೆ. ಹೀಗಾದ್ರೆ ಹೇಗೆ? ಬರ್ತೇನೆ.

(ಬರುವ ಸಲ ನಮ್ಮ ಸಂಪಾದಕರು ನನ್ನ ಚಿತ್ರವನ್ನು ಪ್ರಕಟಿಸುವರಂತೆ. ಬೇಡ ಬೇಡ ಎಂದು ಹೇಳಿದರೂ, ಶ್ರೀ. ಮಾದರಬೆಟ್ಟು ರಂಗರಾಯರು ನನ್ನ ಚಿತ್ರ ತೆಗೆದಿದ್ದಾರೆ. ನೋಡಿ ನಗಬೇಡಿ. ದಮ್ಮಯ್ಯ! ಬರ್ತೇನೆ.)


ಪ್ರಸಿದ್ಧ ದಂತ ವೈದ್ಯರು

ಡಾಕ್ಟರ್ ಯು. ಕೆ. ರಾವ್,
ಮೈದಾನು ರಸ್ತೆ,
ಮಂಗಳೂರು.



ಎಲ್ಲಾ ತರದ ದಂತ ಚಿಕಿತ್ಸೆಗಳನ್ನೂ ಹೆ ಕೊಲ್ಯಾಟ್, ಒರೆಲ್ಯಾಟ್ ಮತ್ತು ಕೊರೆಲಿನ್ ಮೊದಲಾದ ಹಲ್ಲಿನ ಮಾಲೆಗಳನ್ನೂ ಚಲೋ ನಮೂನೆಯಲ್ಲಿ ಬೇಕಾದ ಹಾಗೆ ಸುಲಭ ದರಕ್ಕೆ ಮಾಡಲಾದೀತು.

**ಸುಸಂದರ್ಭ!** **ತಕ್ಕ ಸಮಯ!**

ಇಂದೇ ವಿಚಾರಿಸಿರಿ!

## OUR PATRONS.

M. R. Ry. B. Narayana, Avl., C/o B. Babu, Merchant Bolar, Mangalore.

M. R. Ry. A. Ramappa Avl., Pandeshwar Mangalore.

M. R. Ry. N. Srinivasa Avl., District Health Office, Mangalore.

M. R. Ry. B. Devappa, Avl., Manager Soda Factory Kadri Road, Mangalore.

Messrs Rao & Rao, Chevrolet Sub Dealers, Maidan Road, Mangalore.

M. R. Ry. M. Vittappa Prabhu Avl., Manager Coffee Hotel, Mannagudde Mangalore.

M. R. Ry. K. Kanthappa Avl., Contractor. Mangalore.

M. R. Ry. B. Rangappa Avl., Proprietor Star Cycle & Motor Co., Mangalore.

M. R. Ry. M. N. Shetty Avl. C/o Messrs Langley & Co., P. Box No. 384 Fort Bombay,

M. R. Ry. M. D. Kuckian Avl., C/o Messrs Langley & Co., P. Box No. 384 Bombay.

M. R. Ry. Narayan A. Karkera Avl., C/o Messrs Langley & Co., P. Box 384 Bombay.

M. R. Ry. S. Hoovaya Salian Avl., C/o P. A. Homarjee & Co., 70 Forbes Street Fort Bombay.

M. R. Ry. K. A. Kotian Esq, C/o Ciba (India) Ltd. Exchange Building, Ballard Estate, Bombay.

M. R. Ry. Babu K. Kotian Esq. Kian Gwan Co, (India), Churchgate House, Churchgate St., Fort Bombay.

Messrs. G. J. Bros., 25 Raghunath Dadaji Street, Bombay.

"A Friend of the Poor" Bombay.

M. R. Ry. Jarappa A. Suvarna Avl. Sassoon & Din & Co, 143. Esplanade Road, Fort Bombay.

M. R. Ry. U. Rangappa Avl. C/o Lallubhai Ranchhoddas, Agakhan Buildings, Dalal Street Fort Bombay.

M. R. Ry. M. R. Shenoy. Gopalkrishna Avl., Hindu Hotel, 259 Hornby Road, Bombay.

M. R. Ry. M. R. Chander Avl., Havero Trading Co. Ltd., Fosberry Road, Mazagoan, Bombay No. 10

M. R. Ry. K. B. Amin Avl., C/o Messrs Langley & Co., P. B. No. 384 Fort Bombay.

M. R. Ry. M. Kuppaya Avl., C/o Western India Match Company Nical Road Vulcan House Ballard Estate, Bombay.

M. R. Ry. Kumar M. Kundar Avl., C/o Toyo Menka Kaisha & Co., P. O Box 594-192 Hornby Road Bombay.

M. R. Ry. S. Anthappa Avl., Master Tailor 64 Barbar Lane Fort Bombay.

M. R. Ry. Narayan S. Shetty Avl., C/o Belgian East India Trading Co., 41-45 Stock Exchange Building Bombay.

M. R. Ry. M. K. Annappa Avl., C/o Ramakrishna Ashram Beedi Shop No. 35 Medows Street, Fort Bombay.

M. R. Ry. M. K. Kotian Avl., 128-30 Bora Bazar Street 4th Floor, Haji Cassim Buildings Fort Bombay.

Mrs. M. Yamuna Bai, 128 Bora Bazar Street, 4th Floor Fort Bombay.

M. R. Ry, Kuppaya. S Amin Avl., C/o Messrs M. R. Ved & Co., Share Brokers Agakhan Buildings, Dalal Street, Fort Bombay.

M. R. Ry. Paddoo Gurikara Avl. C/o V. F. Counto Esq, B. A., LL. B. Advocate, High Court, Kalbadevi Road, Bombay No. 2

M. R. Ry. H. Ramaya Avl. The Pangole National Bank Ltd. Amir Buildings, P. B. 266, Bombay

Dr. N. R. Suvarna, M. S. (Bom) New Surgical Home, Tram Terminus, Sandhurst Road, Bombay.

M. R. Ry. Moolur Sheenappa Seetty Avl, N/o Domba Shetty, Baarath Hindu Uparagraha, Progressive Land Blds., No. 1 Kala Chowky Church Pokly, Post No. 12. Bombay.

M. R. Ry. Rama T. Amin Avl. C/o Dr. Jal & Patel, Bombay House, Bruce Street, Bombay.

M. R. Ry. N. J. Suvarna Avl., Proprietor, Furniture Mart Mangalore.

M. R. Ry. Somappa B. Shetty, Avl., Prop. Hindu Hotel. Alexander Dock, Red Gate Shed. No. 4 Fort Bombay.

# ಸಾದರ ಸ್ವೀಕಾರ ಹಾಗೂ ವಿಮರ್ಶೆ

ಬೆಳಗಾಂವಿಯ ಒಂದಾಹೆ ಮಾಲೆಯ ಎರಡನೆಯ ವರ್ಷದ ೧೧ ಮತ್ತು ೧೨ನೆಯ ಪುಷ್ಪಗಳು ಸ್ವೀಕೃತವಾಗಿವೆ. ೧. ಆದರ್ಶನೊಬ್ಬನೇ!:—ಕಥೆಗಾರ ಶ್ರೀ ಕುಡ್ವಿ ವಾಸುದೇವ ಶೆಣೈ; ೨. ಕವಿಕರ್ಮ:—ಕಥೆಗಾರರು ಶ್ರೀ ಕೋಶಿ ಕಾರಂತರು. ಮೊದಲನೆಯದರಲ್ಲಿ 'ಆದರ್ಶನೊಬ್ಬನ' ಮನೋಭಾವಗಳು ಚೆನ್ನಾಗಿ ಚಿತ್ರಿಸಲ್ಪಟ್ಟಿವೆ. ಹರಿಜನ ಬಂಧುಗಳು ಅಗತ್ಯವಾಗಿ ಓದಬೇಕೆನ್ನುವೆವು. ಎರಡನೆಯದರಲ್ಲಿ 'ತತ್ವಜ್ಞಾನಿ'ಯೊಬ್ಬನ ಜೀವನವನ್ನು ಮಾರ್ಮಿಕವಾಗಿಯೇ ಲೇಖಕರು ಚೆನ್ನಾಗಿ ಚಿತ್ರಿಸಿರುವರು. ಎರಡು ಪುಸ್ತಕಗಳೂ ಚೆನ್ನಾಗಿಯೇ ಇವೆ. ಪರಾರ್ಥಕ್ಕಾಗಿಯೇ ಹೊರಟಿರುವ ಈ ಮಾಲೆಗೆ ಸರ್ವರೂ ಚಂದಾದಾರರಾಗಿ ಪ್ರೋತ್ಸಾಹಿಸಲಿ. ವಾ. ಚ. (ಅಂಚೆ ವೆಚ್ಚ ಸೇರಿ) ೧—೪—೦.

ಇಲ್ಲಿಯ ಸದ್ಧರ್ಮ ಪ್ರಚಾರಕ ಗ್ರಂಥಮಾಲೆಯ ಸಂಪಾದಕ ಶ್ರೀ ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರಿಂದ ಸಂಪಾದಿತವಾದ ನಾಲ್ಕು ಪುಸ್ತಕಗಳು ನಮ್ಮೆಡೆಗೆ ಬಂದಿವೆ. ೧. ಪಾದ್ರಿಸಾಹೇಬರ ಬಲೆ, ೨. ನಮ್ಮ ದೇಶ, ೩. ರಾಮ ಭಕ್ತಿಯ ರಹಸ್ಯ, ೪. ಆರ್ಯಸಮಾಜವೆಂದರೇನು? ಪ್ರತಿಯೊಂದು ಪುಸ್ತಕದ ಬೆಲೆ ೦—೦—೬ ಮಾತ್ರ. ಪುಸ್ತಕಗಳು ಚಿಕ್ಕವಾದರೂ ಚೊಕ್ಕವಾಗಿವೆ. ಹಿಂದೂಸಮಾಜವು ಹಿಂದುಳಿದಿರುವ ಈ ಕಾಲದಲ್ಲಿ ಇಂತಹ ಪುಸ್ತಕಗಳ ಆವಶ್ಯಕತೆಯು ಬಹಳವಾಗಿದೆಯೆಂದರೆ ತಪ್ಪಾಗದು. ಸಂಪಾದಕರ ಕಾರ್ಯವು ಸ್ತುತ್ಯ. ಪ್ರತಿಯೊಬ್ಬ ಕನ್ನಡಿಗನೂ ಪ್ರೋತ್ಸಾಹಿಸಲೆಂದೇ ನಮ್ಮ ಪ್ರಾರ್ಥನೆ.

ಉನ್ಮತ್ತಹೃದಯ—ಲೇಖಕ ಶ್ರೀ. ಬಿ. ಪದ್ಮನಾಭಾಚಾರ್ಯ. ಇಲ್ಲಿಯ ಗಣಪತಿ ಹ್ಯಾಸ್ಕೂಲಿನ ವಿದ್ಯಾರ್ಥಿಗಳ ನವಚೇತನ ಗ್ರಂಥಮಾಲೆಯ ಎರಡನೆಯ ಕುಸುಮವಿದು. ವಿದ್ಯಾರ್ಥಿಯೊಬ್ಬನ ಪ್ರಥಮ ಪ್ರಯತ್ನವಿದುವಾದುದರಿಂದ ಹೊಗಳ ಯೋಗ್ಯವಾಗಿದೆ. ಇದರ ಬೆಲೆ: ೦—೧—೬. ವಿದ್ಯಾರ್ಥಿಗಳಿವರನ್ನು ಕನ್ನಡಿಗರು ಪ್ರೋತ್ಸಾಹಿಸಿದರೆ ಮುಂದೆ ಇವರಿಂದ ಹೆಚ್ಚಿನ ಫಲಗಳನ್ನು ಪಡೆಯ ಬಹುದು.

ಉಡುಪಿಯ ತುಳುವ ಸಾಹಿತ್ಯಮಾಲೆಯ ೧೯೩೩ರ ವರದಿಯು ನಮ್ಮ ಹಸ್ತಗತವಾಗಿದೆ. ಶ್ರೀ. ಎಸ್. ಯು. ಪಣಿಯಾಡಿಯವರ ಕಾರ್ಯಕುಶಲತೆಯು ಚೆನ್ನಾಗಿಯೇ ಸಾಗಿದೆನ್ನಬಹುದು. ಶ್ರೀಯುತರಿಗೆ ಜನತೆಯ ಬೆಂಬಲವು ಬಹಳವಾಗಿ ಸಿಕ್ಕಿ ಅವರು ಇನ್ನಷ್ಟು ಒಳ್ಳೆಯ ಕೆಲಸಗಳನ್ನು ಮಾಡಲೆಂದೇ ನಮ್ಮ ಪ್ರಾರ್ಥನೆ.

ಮೂಲ್ಕಿ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯ ೬ನೆಯ ವರ್ಷದ ವರದಿಯು ನಮ್ಮ ಹಸ್ತಗತವಾಗಿದೆ. ಈ ಶಾಲೆಯು ಉದಾರ ವ್ಯಕ್ತಿಗಳಿಂದ ನಡೆಸಲ್ಪಡುತ್ತಿದೆ. ಧರ್ಮಾರ್ಥ ಶಿಕ್ಷಣವು ಕೊಡಲ್ಪಡುತ್ತಿದೆ. ಸರ್ವ ಜನೋಪಕಾರಿಯಾದೀ ಸಂಸ್ಥೆಯು ಮುಂದಕ್ಕೂ ಶ್ರೇಯಸ್ಸನ್ನು ಹೊಂದಿ ಬಡಬಗ್ಗರ ಸೇವೆಯನ್ನು ಮಾಡಲೆಂದು ನಾವು ಪ್ರಾರ್ಥಿಸುವೆವು.


ತೊದಲ್ನುಡಿ—ಪುಸ್ತಕರೂಪದಿಂದ ಪ್ರತಿ ರವಿವಾರ ಮುಂಬೈಯಿಂದ ಹೊರಡುವ ಕನ್ನಡ ವಾರಪತ್ರಿಕೆ. ಶ್ರೀ. ಎಮ್. ನಾರಾಯಣರು ಸಂಪಾದಕರು. ಕಥೆ, ಕವಿತೆ, ಹಾಸ್ಯ, ದೇಶವಿದೇಶ ಸುದ್ದಿಗಳು, ಇನ್ನಿತರ ಉಪಯುಕ್ತ ಲೇಖಗಳು ಎಲ್ಲಾ ಇದರಲ್ಲಿ ಬರುವುವು. ಮುಂಬೈಯಂಥ ಸ್ಥಳದಲ್ಲಿ ಕನ್ನಡ ವಾಙ್ಮಯ ಸೇವೆಮಾಡಲು ಹೊರಟು ಜನಜಾಗೃತಿ ಮಾಡುತ್ತಿರುವ ಸಂಪಾದಕರ ಕೆಲಸವು ಅತ್ಯಭಿನಂದನೀಯವು. ವಾ. ಚ. ರೂಪ್ಯಾ ೨—೮—೦ ಅ. ವೆ. ಸೇರಿ ರೂಪ್ಯಾ ೩—೪—೦ ಇಷ್ಟು ಅಗ್ಗ, ಹಾಗೂ ಉತ್ಕೃಷ್ಟವಾದ ಪತ್ರಿಕೆಗೆ ಸರ್ವರು ಪೋಷಕರೂ ಚಂದಾದಾರರೂ ಆಗಿ ಪ್ರೋತ್ಸಾಹಿಸುವರೆಂದೇ ನಮ್ಮ ನಂಬುಗೆ; ಪ್ರೋತ್ಸಾಹಿಸಲೆಂದೇ ನಮ್ಮ ಬೇಡಿಕೆ.

ಲೋಕನುತ—ಪ್ರತಿ ಗುರುವಾರವೂ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ. ಸಂಪಾದಕರು ವೀ. ಬಿ. ಪುರಾಣಿಕ, ಬಿ. ಎ, ಜನಮನರಂಜಕವಾದ ವಿವಿಧ ಬರಹಗಳಿಂದ ಪತ್ರಿಕೆಯು ಒಪ್ಪುತ್ತಿದೆ. ವಾ. ಚ. (ಅಂಚೆ ವೆಚ್ಚ ಸೇರಿ) ೩—೫—೦ ಮಾತ್ರ. ಸರ್ವರೂ ಪ್ರೋತ್ಸಾಹಿಸಲೆನ್ನುವೆವು.

ಸಂಯುಕ್ತ ಕರ್ನಾಟಕ—ಬೆಳಗಾವಿಯಿಂದ ಹೊರಡುವ ದಿನಪತ್ರಿಕೆ ಹಾಗೂ ವಾರಪತ್ರಿಕೆಯಿದು. ರಾಜಕೀಯ ವಿಷಯಗಳೂ ಇನ್ನಿತರ ಉಪಯುಕ್ತ ಲೇಖಗಳೂ ಇದರಲ್ಲಿ ಬರುವುವು. ವಾರಪತ್ರಿಕೆಯ ವಾ. ಚ. (ಅಂಚೆವೆಚ್ಚ ಸೇರಿ) ೩—೦—೦ ಕನ್ನಡಿಗರಿದರ ಉಪಯೋಗ ಮಾಡಿಕೊಳ್ಳಲೆನ್ನುವೆವು.

ರಾಜಹಂಸ ಧಾರವಾಡದಿಂದ ಹೊರಡುವ ದಿನಪತ್ರಿಕೆ ಹಾಗೂ ವಾರಪತ್ರಿಕೆಯಿದು. ಈ ಪತ್ರಿಕೆಯಲ್ಲಿ ಸಾಮಾಜಿಕ, ರಾಜಕೀಯ, ಔದ್ಯೋಗಿಕ ಮೊದಲಾದ ವಿಷಯಗಳು ಬರುವುವು. ವಾ. ಚ. ೩—೦—೦. ಉತ್ತಮವಾದೀ ಪತ್ರಿಕೆಯನ್ನು ಓದದೆ ಬಿಡಬಾರದೆನ್ನುವೆವು.

ಕಲಾಚಂದ್ರ—೧ನೆಯ ಸಂಪುಟ, ೧ನೆಯ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಕಾರ್ಕಳದಿಂದ ಹೊರಟ ಶ್ರೇಷ್ಠ ವರ್ಗಕ್ಕೆ ಬರಲಿರುವ ಮಾಸಪತ್ರಿಕೆ. ಇದರ ಸಂಪಾದಕರು ಶ್ರೀ. ಆರ್. ಜಿ. ಶೆಣೈ. ಕಥೆ, ಕವಿತೆ, ಹಾಸ್ಯ ಮೊದಲಾದ ವಿವಿಧ ಗಂಭೀರ ವಿಷಯಗಳಿಂದ ಕೂಡಿರುವುದು. ವಾ. ಚ. (ಅಂಚೆವೆಚ್ಚ ಸೇರಿ) ರೂ. ೧—೪—೦. ಸರ್ವರೂ ಪ್ರೋತ್ಸಾಹಿಸಲೆನ್ನುತ್ತೇವೆ.



## ನಮ್ಮ ನಾಟಕ

ಇದೇ ತಾ. 17ರಲ್ಲಿ ಕನ್ನಡ ಸಂಗೀತ ಸಭಾ (ಎಮೆಚೂರ್ಸ್) ಮುಂಬಾಯಿ ಇವರು ಭಾಂಗ್ವಾಡಿ ಥಿಯೇಟರಿನಲ್ಲಿ ಬಡವರ ಬಂಧುವಿನ ಪರವಾಗಿ ಸುಭದ್ರಾ ಹರಣ ಅಥವಾ ಕೃಷ್ಣಾನುಜೆ ಎಂಬ ನಾಟಕವನ್ನು ಬಹು ಯಶಸ್ವಿಯಾಗಿ ಅಭಿನಯಿಸಿದರು. ಪ್ರೇಕ್ಷಕರ ಪ್ರೋತ್ಸಾಹವೂ ಮಂಡಳಿಯವರ ಸಾಹಸವೂ ಅಭಿನಂದನೀಯವಾಗಿದೆ. ಸವಿವರ ವಾರ್ತೆಗಳು ಬಂದಿಲ್ಲವಾದುದರಿಂದ, ನಾಟಕ ಸಂಬಂಧವಾಗಿ ದುಡಿದ ಬಂಧುಗಳೆಲ್ಲರಿಗೂ ನಮ್ಮ ಅನಂತ ವಂದನೆಗಳನ್ನರ್ಪಿಸಿ ಈ ಸಂಬಂಧವಾಗಿ ಮುಂದೆ ಬರೆಯುವೆವೆಂದು ಹೇಳಬಯಸುವೆವು.

## ವಿ. ಪಿ.ಗಳು

ಹೆಚ್ಚಿನ ಚಂದಾದಾರರ ಚಂದಾ ಅವಧಿಯು ಮುಗಿಯುತ್ತಾ ಇದೆ. ಕಳೆದ ತಿಂಗಳಿನಿಂದ ವಿ. ಪಿ. ಕಳುಹಿಸಲಾರಂಭಿಸಿದ್ದೇವೆ. 'ಬಡವರ ಬಂಧು'ವಿಗೆ ಆಘಾತವನ್ನು ತಂದೊಡ್ಡಬಾರದೆಂದಿರುವ ಹೆಚ್ಚಿನ ಮಹನೀಯರು ವಿ. ಪಿ. ಗಳನ್ನು ಔದಾರ್ಯಪೂರ್ವಕವಾಗಿ ಸ್ವೀಕರಿಸಿರುವರು. ಅವರಿಗೆ ವಂದನೆಗಳು. ಮುಂದಿನ ಚಂದಾದಾರ ಮಹಾಶಯರೂ ರೂ. 1-9-0ರ ಕಡೆಗೆ ನೋಡದೆ, ಬಂಧುವಿನ ಶ್ರೇಯಃದೃಷ್ಟಿಯಿಂದ ವಿ. ಪಿ.ಗಳನ್ನು ಸ್ವೀಕರಿಸಬೇಕಾಗಿಯೂ ಅಥವಾ ರೂ. 1-4-0ನ್ನು ಮಣಿಯಾರ್ಡರ್ ಮಾಡಬೇಕಾಗಿಯೂ ಪ್ರಾರ್ಥಿಸುತ್ತೇವೆ.

## ಆರ್ಯ ವಿದ್ಯಾ ವಿಜಯ ನಾಟಕ ಮಂಡಳಿ

ಇವರು ಬಡವರ ಬಂಧುವಿನ ಸಹಾಯಾರ್ಥವಾಗಿ ನವಯುಗದ ಸಂಪಾದಕರಾದ ಶ್ರೀ. ಕೆ. ಕೆ. ಶೆಟ್ಟಿಯವರ ಬರೆಯಲ್ಪಟ್ಟ 'ಮೀರಾಬಾಯಿ' ಎಂಬ ಐತಿಹಾಸಿಕ ನಾಟಕವನ್ನು ಅಭಿನಯಿಸುವೆವೆಂದು ಅನುಮತಿ ಕೊಟ್ಟಿರುವರು. ಈ ಯತ್ನದಲ್ಲಿ ಮಂಡಳಿಯವರಂತೆ, ಊರವರೂ ನಮಗೆ ಒತ್ತಾಸೆಯನ್ನೀಯಬೇಕೆಂದು ಕೋರಿ ಮಂಡಳಿಯ ಸೆಕ್ರೆಟರಿ ಶ್ರೀ. ಮಂಜುನಾಥ ಶಾಲಿವಾಹನರೇ ಮೊದಲಾದವರಿಗೆ ವಂದನೆಗಳನ್ನರ್ಪಿಸುವೆವು.

## ಕನ್ನಡದಲ್ಲಿ

ದಿನೇ ದಿನೇ ಪ್ರಗತಿಯುಂಟಾಗುತ್ತಿದೆ. ಕಾರ್ಕಳದಲ್ಲಿ "ಕಲಾಚಂದ್ರ" ಎಂಬ ಮಾಸಿಕ ಪತ್ರಿಕೆಯು ಹೊರಡಿಯೂ, ಧಾರವಾಡದಲ್ಲಿ "ಕಥಾಕುಂಜ"ವೆಂಬ ಮಾಸಪತ್ರಿಕೆಯು ಹೊರಡಲಿದ್ದೂ, 'ಸ್ವದೇಶಿ ಪ್ರಚಾರಕ'ವು ವೃದ್ಧಿಗೊಂಡು ಪ್ರಕಟವಾಗುತ್ತಿದ್ದೂ ಸ್ವದೇಶಾಭಿಮಾನಿ, ಕಂಠೀರವಗಳು ದಸರಾ ಸಂಚಿಕೆಗಳನ್ನು ಹೊರಡಿಸಿದ್ದೂ, ರಾಷ್ಟ್ರಬಂಧುವು ಹೆಚ್ಚಿನ ಸುಧಾರಣೆಗಳಿಂದೊಡಗೂಡಿಯೂ ಕರ್ನಾಟಕ ಮಾತೆಯ ಸೇವೆಯಾಗುತ್ತಿರುವುದನ್ನು ಕಂಡು ಅತ್ಯಾನಂದಗೊಂಡಿದ್ದೇವೆ.

## ಬರುವ ಸಂಚಿಕೆಗೆ

'ಬಂಧು'ವಿಗೆ ೧॥ ವರ್ಷ ವಯಸ್ಸಾಗುವುದು. ಇಷ್ಟರ ತನಕ ಮಾಡಿರುವ ಸೇವೆಯು ಅನಿವಾರ್ಯವಾಗಿ ಸೇವೆಯೆಂದೆನ್ನಿಸಿಕೊಳ್ಳಲು ಅರ್ಹವಾಗಿಲ್ಲವಾದರೂ ಮುಂದೆ ಸಜ್ಜನರಾದ ಕನ್ನಡಿಗರ ನೆರವು ಇದೇ ತೆರನಾಗಿ ದೊರೆತರೆ ಹೆಚ್ಚಿನ ಧೈರ್ಯದಿಂದಲೂ ಸೇವಾತತ್ಪರತೆಯಿಂದಲೂ ಅದಿಯಿಡುವೆವೆಂದು ಹೇಳ ಬಯಸುತ್ತೇವೆ.

## ಜಾಹೀರಾತುದಾರರು

'ಬಡವರ ಬಂಧು'ವು ಮಾಸಿಕ ಪತ್ರಿಕೆಯೆಂದು ಅಲಕ್ಷಿಸದೆ ತಮ್ಮ ಜಾಹೀರಾತುಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದರೆ ಹೆಚ್ಚಿನ ಲಾಭವಿದೆಯೆಂದು ನಾವು ಹೇಳಬೇಕಾಗಿಲ್ಲ. ಆ ಬಗ್ಗೆ ನಮಗೆ ಬಂದಿರುವ ಕೆಲವು ಪತ್ರಗಳೇ ಸಾಕ್ಷಿಯಾಗಿರುತ್ತವೆ. ನಮ್ಮ ಪತ್ರಿಕೆಯು ಕರ್ನಾಟಕದ ಎಲ್ಲೆಡೆಗಳಿಗೂ ಹರಡಿದೆ. ಬರ್ಮಾ, ಆಫ್ರಿಕಾ, [illegible]ಗಳ ಕಡೆಯ ಕನ್ನಡಿಗರೂ ನಮ್ಮ ಪತ್ರಿಕೆಯನ್ನು [illegible] [illegible]. ನಮ್ಮ ಅರಿಕೆಯ ಮೇರೆಗೆ [illegible] ಎಲ್ಲಾ ಚಂದಾದಾರರೂ ಸ್ವಹಸ್ತ [illegible] ನಮ್ಮ ಮೇಲೆ ಸಹಾನುಭೂತಿಪರರಾಗಿರುವುದಕ್ಕಾಗಿ ವಂದನೆಗಳಿವೆ.

# ನನ್ನ ಊಹನೆ

(ತತ್ವ ಮೀಮಾಂಸೆ)

All Rights Reserved.

ಹಿಂದೆ ಬ್ರಹ್ಮನೇ ಮೊದಲಾದ ಸಕಲ ದೇವತೆಗಳು ರಾವಣಾದಿ ದುಷ್ಟ ರಾಕ್ಷಸರ ಬಾಧೆಯನ್ನು ಸಹಿಸಲಾರದೆ, ಈ ಬಗ್ಗೆ ಲೋಕ ಸ್ವಾಮಿಯಾದ ಶ್ರೀ ಮಹಾ ವಿಷ್ಣುವಿನಲ್ಲಿ ಮೊರೆಯಿಡಬೇಕೆಂದು ನಿಶ್ಚಯಿಸಿ ಕ್ಷೀರ ಸಾಗರಕ್ಕೆ ತೆರಳಿದರು. ಅಲ್ಲಿ ಬ್ರಹ್ಮನು ಸಕಲ ಸೌಭಾಗ್ಯಭರಿತವಾದ ಪರಮಾತ್ಮನ ಒಡ್ಡೋಲಗವನ್ನು ಕಂಡು ಚಕಿತನಾದಂತಹವನಾದನು; ಪರಂತು ಬ್ರಹ್ಮನು ಆ ತನಕ ಪರಮಾತ್ಮನ ಸೃಷ್ಟಿಯಲ್ಲಿ ತನ್ನಾಧೀನವಿರುವ ಬ್ರಹ್ಮಾಂಡವೇ, ಬ್ರಹ್ಮಾಂಡವೆಂದೂ ತಾನೊಬ್ಬನೇ ಬ್ರಹ್ಮನಿರುವೆನೆಂದೂ, ತನಗೆ ಸೇರಿದ ದೇವತೆಗಳೇ ದೇವತೆಗಳೆಂದೂ ಊಹಿಸಿದ್ದನು. ಆದರೆ ಲೀಲಾವಿಗ್ರಹನಾದ ಪರಮಾತ್ಮನ ಒಡ್ಡೋಲಗದಲ್ಲಿ ಕೋಟ್ಯಾವಧಿ ಬ್ರಹ್ಮ ಮುಂತಾದ ದೇವತೆಗಳಿದ್ದು ಪರಮಾತ್ಮನ ಸ್ತೋತ್ರ ಗೈಯುವುದನ್ನು ಕಂಡು, ತನ್ನ ಭಾವನೆಯು ಕೇವಲ ತಪ್ಪೆಂದು ಬ್ರಹ್ಮನು ತಿಳಿದಂತಹವನಾಗಿ ಮುಂದೆ ತನ್ನ ಮತ್ತು ತನ್ನ ಪರಿವಾರದ ಆಪತ್ತುಗಳನ್ನು ಕುರಿತು ಶ್ರೀ ಪರಮಾತ್ಮನಲ್ಲಿ ಮೊರೆಯಿಡಲುಪಕ್ರಮಿಸಿದನು ಎಂಬುದು ಪುರಾಣದ ಸಂಬಂಧ:—

ಸಾಕ್ಷಾತ್ ಬ್ರಹ್ಮ ದೇವನ ಊಹನೆಗಳಂತೆಯೇ, ಮಾನವ ಕೋಟಿಗಳಲ್ಲಿ ಹಲವರ ಅಭಿಪ್ರಾಯವು ಇದೆಯೆನ್ನಬಹುದು. ಇದು ಕೇವಲ ತಪ್ಪು. ಈ ವಿಷಯದಲ್ಲಿ ಸ್ವಲ್ಪ ವಿಚಾರಿಸಿ ನೋಡಿದರೆ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ ಬಿರುದಾಂಕಿತ, ಅನಂತ, ಅಚ್ಯುತ, ಪೂರ್ಣ ಸ್ವತಂತ್ರ ಏಕ ಮೂರ್ತಿ ಲಕ್ಷ್ಮೀಪತಿಯಾದ, ಪರಮಾತ್ಮನಿಗೆ ನಮ್ಮ ದೃಷ್ಟಿಗೋಚರವಾಗುವ ಬ್ರಂಹ್ಮಾಂಡದಂತಹ ಕೋಟಿಗಟ್ಟಳೆ ಬ್ರಹ್ಮಾಂಡಗಳಿರುವುವೆಂಬುದು ನಿಸ್ಸಂದೇಹ. ಹೀಗೆ ಹಲವು ಬ್ರಹ್ಮಾಂಡಗಳಿಗೊಡೆಯನಾದ ಶ್ರೀ ಹರಿಗೆ, ಭೃತ್ಯರು ಇರುವರು. ಆ ಭೃತ್ಯರುಗಳಿಗೆ, ಅವರ ದಾಸರು, ದಾಸಾನುದಾಸರು ಸಹಾ ಇರುವರು, ಹೀಗೆ ಇರುವುದೇ ಪರಮಾತ್ಮ ಸರಕಾರವೆಂದು ಹೇಳಬಹುದು. ಇದಕ್ಕೆ ದೃಷ್ಟಾಂತಗಳು ಹಲವಿರುವುವಾದರೂ ಇಲ್ಲಿ ವಿವರಿಸುವುದು ಅಗತ್ಯವೆಂದು ಕಂಡುಬರುವುದಿಲ್ಲ.

ಈಗ ಸಾಕ್ಷಾತ್ ಪರಮಾತ್ಮನು ಈ ಬ್ರಹ್ಮಾಂಡಗಳನ್ನು ಏಕೆ ನಿರ್ಮಿಸಿದನು ಮತ್ತು ಇದರ ಉದ್ದೇಶವಾದರೂ ಏನೆಂದು ವಿಚಾರಿಸಿ ನೋಡಿದರೆ, ಹೀಗೆ ವ್ಯಕ್ತವಾಗುತ್ತದೆ. ಈ ಸಕಲ ಬ್ರಹ್ಮಾಂಡಗಳು ಮೇಲೆ ವಿವರಿಸಿದ ಪರಮಾತ್ಮ ಸರಕಾರದ ಕಾರಾಗ್ರುಹಗಳು, ವಿನಹಾ ಬೇರೆಯಲ್ಲ; ಹೇಗೆ ರಾಜಕೀಯ ಸರಕಾರಕ್ಕೆ ಹಲವು ಸೆರೆಮನೆಗಳು ಅಗತ್ಯವೋ ಅದೇ ಮೇರೆಗೆ ಪರಮಾತ್ಮ ಸರಕಾರಕ್ಕೆ ಹಲವು ಬ್ರಹ್ಮಾಂಡಗಳು ಅಗತ್ಯವಿರುತ್ತವೆ. ಯಾವ ಪ್ರಾಣಿಗೂ ಈ ಬ್ರಹ್ಮಾಂಡವೆಂಬ ಕಾರಾಗೃಹದಲ್ಲಿ ಸುಖವಿರುವುದಿಲ್ಲ. ಪ್ರಾಣಿ ಮಾತ್ರವು ತನಗೆ ಸುಖವೆಂದು ಕಂಡು ಬಂದದ್ದನ್ನು ಸುಖವೆಂದೆಣಿಸಲಾಗದು, ಅದು ಹಿಂದು ಮುಂದೆ ದುಃಖದಲ್ಲಿಯೇ ಪರಿಣಮಿಸಿಯೆ ತೀರುವುದು. ಕಾರಾಗೃಹವು ಎಂದಾದರೂ ಸುಖದ ಸ್ಥಾನವಲ್ಲ. ಕೇವಲ ದುಃಖದ ತವರು ಮನೆಯಾಗಿರುತ್ತದೆ; ಆದಕಾರಣ ಬ್ರಹ್ಮಾಂಡದಲ್ಲಿ ಸುಖವಿದೆಯೆಂಬ ಭಾವನೆಯು ತಳ್ಳಿ ಹಾಕಲು ತಕ್ಕದ್ದಾಗಿದೆ.

ಆದರೆ ನಿಜವಾದ ಸುಖವಾದರೂ ಎಲ್ಲಿದೆ ಮತ್ತು ಅದನ್ನು ಹೊಂದುವುದಾದರೂ ಹೇಗೆಂದು ಪ್ರಶ್ನೆ ಬರಬಹುದು. ಈ ವಿಷಯವನ್ನು ಯೋಚಿಸಿ ನೋಡಿದರೆ, ನಿಜವಾದ ಸುಖವು ಈ ಬ್ರಹ್ಮಾಂಡದ ಪ್ರಾಕಾರವನ್ನು ದಾಟಿದ ಕೇವಲ ಶುದ್ಧಾತ್ಮನಿಗೆ ಲಭಿಸುವುದು. ಹಾಗೆ ಶುದ್ಧವಾಗುವುದಾದರೂ ಹೇಗೆ? ಎಂದು ಕೇಳುವುದಾದರೆ, ಕೇವಲ ಜ್ಞಾನದಿಂದ. ಅದು ಹೇಗೆಂದರೆ, ಆತ್ಮನು ಶುದ್ಧನಾಗುವ ತನಕ ಆತನಿಗೆ ಒಂದಲ್ಲ ಒಂದು ದೇಹವು ಇದ್ದೇ ಇದೆ. ಪ್ರಾಣಿ ಮಾತ್ರವು ಜ್ಞಾನದಿಂದ ಸತ್ಯವಾದ ಆತ್ಮನ ಸ್ಥಿತಿಗತಿಗಳನ್ನು ಪೂರ್ಣವಾಗಿ ತಿಳಿದುಕೊಂಡರೆ ಕೇವಲ ಸಟೆಯಾಗಿರುವ ವಸ್ತುವು ತಾನಾಗಿಯೇ ತೊಲಗುವುದು. ಆತ್ಮಜ್ಞಾನವು ಲಭಿಸುವ ತನಕ, ಆತ್ಮನು ಶುದ್ಧನಾಗುವುದಿಲ್ಲ. ಹೀಗೆ ಶುದ್ಧನಾಗದ ಆತ್ಮನಿಗೆ ಸುಖವಾದರೂ ಎಲ್ಲಿ? ಸರ್ವಥಾ ದೊರೆಯದು. ಸೂಕ್ಷ್ಮ ದೇಹಿ ಆತ್ಮ ಕೈದಿಯು ಈ ಬ್ರಹ್ಮಾಂಡವೆಂಬ ಕಾರಾಗೃಹದ ಕರ್ಮ ದೇಹವೆಂಬ ಕೊಠಡಿಯಲ್ಲಿ ಶಿಕ್ಷಣಭೋಗದಲ್ಲಿರುವಾಗಲೇ ಜ್ಞಾನದ ಮಾರ್ಗದಿಂದ ಸತ್ಯವನ್ನು ತಿಳಿದು ಆತ್ಮ ಪವಿತ್ರತೆಯನ್ನು ಪಡೆಯಬೇಕು. ಪವಿತ್ರನಾದ ಆತ್ಮನು ಬಿಡುಗಡೆಯ ನಂತರ ಪರಮಾತ್ಮನಲ್ಲಿ ಲೀನವಾಗುವನು. ಇದೇ ಶಾಶ್ವತ ಸುಖವು. ಆತ್ಮನು ಪವಿತ್ರನಾದನೆಂದರೆ ದೇಹಗಳನ್ನು ತಾನಾಗಿಯೇ ವರ್ಜಿಸುತ್ತಾನೆ. ಹಾಗೆ ವರ್ಜಿಸಿದವನೇ ಪರಮಾತ್ಮನಲ್ಲಿ ಲೀನನಾಗಲು ಅರ್ಹನಿರುತ್ತಾನೆ.

ಈಗ ಈ ಬ್ರಹ್ಮಾಂಡವೆಂಬ ಕಾರಾಗ್ರುಹದ ಭೋಗದ ಕುರಿತು ಯೋಚಿಸುವಾ. ಹೇಗೆಂದರೆ, ಸೂಕ್ಷ್ಮ ದೇಹಧಾರಿ ಆತ್ಮನು ಪರಮಾತ್ಮ ರಾಜ್ಯದಲ್ಲಿ ನಡೆಸಿದ ತಕ್ಸೀರುಗಳಂತೆ ಶಿಕ್ಷಾರ್ಹನಾಗಿ ಪರಮಾತ್ಮ ಸರಕಾರದಿಂದ ಬ್ರಹ್ಮಾಂಡವೆಂಬ ಕಾರಾಗೃಹದ, ಕರ್ಮದೇಹವೆಂಬ ಕೊಠಡಿಯಲ್ಲಿ ಸೆರೆಯಾಗಿಡಲ್ಪಡುತ್ತಾನೆ. ಹೀಗೆ ಶಿಕ್ಷಾಭೋಗದ ಸಮಯದಲ್ಲಿ ಜ್ಞಾನವನ್ನು ತಂದುಕೊಂಡು ಮುಂದೆ ತಾನು ಪುನಃ ಈ ತರದ ಸಂಕಷ್ಟಗಳಿಗೊಳಗಾಗದಂತೆ ತನ್ನನ್ನು ತಾನು ತಿಳಿದು ತಿದ್ದಿಕೊಳ್ಳುವುದೇ ಮುಂದಿನ ಸುಖದ ಮಾರ್ಗವು. ಇದನ್ನು ಜೀವನ್ಮುಕ್ತಿಯೆಂದು ಕರೆಯುವರು. ಈ ರೀತಿ ಜೀವನ್ಮುಕ್ತನಾಗದೆ ಸುಖವು ದೊರೆಯದು. ಆದುದರಿಂದ ಪ್ರತಿಯೊಂದು ಪ್ರಾಣಿಯು ತಾನು ಕೇವಲ ಕಾರಣವಂತನೆಂದೂ, ಸಕಲ ಕರ್ಮಕ್ಕೆ ಚೇತನಾತ್ಮಕನು ಪರಮಾತ್ಮನಿರುವನೆಂದೂ ಸರ್ವಕ್ರಿಯೆಗಳು ಪೂರ್ಣವಾಗಿ ಅವನಿಗೇ ಸಲ್ಲತಕ್ಕವುಗಳೆಂದೂ, ಮನೋ ನಿಶ್ಚಯ ಮಾಡಿ, ಸತ್ಯವನ್ನು ತಿಳಿದು, ಆತನಿಗೆ ಸಕಲವನ್ನು ಆರ್ಪಣ ಮಾಡಿದರೆ, ಮುಂದೆ ಇದೇ ಅಭ್ಯಾಸದಿಂದ ಜೀವನ್ಮುಕ್ತಿಯು ತಾನಾಗಿಯೇ ಲಭಿಸುವುದು. ಜೀವನ್ಮುಕ್ತಿಯು ಲಭಿಸಿತೆಂದರೆ ಸುಖವು ತಾನಾಗಿಯೇ ಸಮೀಪಿಸುವುದು.

ಈಗ ಈ ಸೂಕ್ಷ್ಮ ದೇಹಧಾರಿ ಆತ್ಮನನ್ನು ಆತನ ತಕ್ಸೀರುಗಳಿಗನುಸರಿಸಿ ಶಿಕ್ಷೆಗೆ ಒಳಪಡಿಸುತ್ತಾರೆಂದು ಹೇಳಿದುದಾಯಿತು. ಈ ವಿಷಯದಲ್ಲಿ ಪರಮಾತ್ಮ ಸರಕಾರವು ಕಾನೂನನ್ನು ಏರ್ಪಡಿಸಿಟ್ಟಿರುತ್ತದೆ. ಇದನ್ನೇ ವೇದ ಶಾಸ್ತ್ರವೆಂದು ಹೇಳುತ್ತೇವೆ. ಇದರ ಕಾಲಕಾಲದ ಸುಧಾರಣೆಗಳೇ ಪುರಾಣ, ಇತಿಹಾಸಗಳು. ಇವುಗಳ ನ್ಯಾಯಾದೀಶನೇ ಯಮ

ಧರ್ಮರಾಯನು. ಬ್ರಹ್ಮಾಂಡವೆಂಬ ಕಾರಾಗೃಹದ ಮುಖ್ಯಾಧಿಕಾರಿಯೇ ಬ್ರಹ್ಮನು. ಮಿಕ್ಕ ದೇವತೆಗಳೂ, ನವಗೃಹಾದಿಗಳೂ, ಭೂತಪ್ರೇತಗಳೂ, ಈ ಕಾರಾಗೃಹದ ! ಅಧಿಕಾರವನ್ನು ಪರಮಾತ್ಮನು ಒಬ್ಬೊಬ್ಬನಿಗೆ ಕೊಟ್ಟಿದ್ದಾನೆ. ಪರಮಾತ್ಮ ಸರಕಾರದ ಕಾನೂನಿಗೆ ವಿರೋಧವಾಗಿ ಆಚರಿಸುವ ಪ್ರತಿಯೋರ್ವನು ತಕ್ಷೀರುಗಳಿಗೊಳಪಟ್ಟು ಶಿಕ್ಷಾರ್ಹನಾಗುತ್ತಾನೆ.

ಈಗ ಈ ಶರೀರವು ಬ್ರಹ್ಮಾಂಡವೆಂಬ ಕಾರಾಗ್ರಹದ ಒಳಗಿನ ಕೊಠಡಿಯೊಳಗೆ ಒಬ್ಬೊಬ್ಬನಂತೆ ಆತ್ಮ ಕೈದಿಗಳನ್ನು ಇಟ್ಟಿರುವುದಾಗಿಯೂ ಹೇಳಬೇಕಾಗಿದೆ. ಪರಂತು ಈ ಕೊಠಡಿಗಳಿಗೆ ಕಾಲಕಾಲದ ಛಾವಣಿ (ಉಪಚಾರ)ಗಳು ಅಗತ್ಯವು. ಇವು ಲೋಪವಾಯಿತೆಂದರೆ ಅನರ್ಥಕ್ಕೀಡಾಗುವುದು. ಪ್ರತಿ ಒಬ್ಬ ಕೈದಿಯನ್ನು ಇದರಿಂದ ಬಿಡುಗಡೆ ಪಡಿಸುತ್ತಾ ಆತನಿರುವ ಕೊಠಡಿಯನ್ನು ಧ್ವಂಸ ಮಾಡಿ ಹೊಸ ಕೈದಿಯನ್ನು ಹೊಸ ಕೊಠಡಿಯಲ್ಲೆ ಇರಿಸುವುದು ಪರಮಾತ್ಮ ಸರಕಾರದ ವಿಧಿಯಿರುತ್ತ, ಈ ಸಂಗತಿಯು ವ್ಯಾವಹಾರಿಕ ದೇವಪೂಜಾ ವಿಧಾನದಲ್ಲಿ ಸ್ಪಸ್ಟವಾಗುತ್ತದೆ. ಒಮ್ಮೆ ಪೂಜಾ ಸಲುವಾಗಿ ಉಪಯೋಗಿಸಿದ ತುಳಸಿ, ಪುಷ್ಪ, ನೈವೇದ್ಯಗಳು ಅವು ಎಷ್ಟೇ ಕೆಡದೆ ಚಲೋದಾಗಿದ್ದರೂ ಒಮ್ಮೆ ವಿಸರ್ಜನವಾದ ಮೇಲೆ ಪುನಃ ಯಾವ ದೇವತೆಗೂ ಪೂಜಾರ್ಹವಲ್ಲ.

ಮುಂದೆ ಜನ್ಮ (ಕಾರಾಗಾರ ಪ್ರವೇಶ) ಸ್ಥಿತಿ (ಭೋಗಿಸುವಿಕೆ) ಮರಣ (ಬಿಡುಗಡೆ)ಯ ಕುರಿತು ಯೋಚಿಸುವಾ—ಪ್ರತಿಯೊಂದು ಪ್ರಾಣಿಯು ಜನ್ಮಾರಂಭದಲ್ಲಿ ಷಡ್ವೈರಿಗಳಿಂದ ವಿರಹಿತವಾಗಿರುವುದು. ಆ ಸಮಯದಲ್ಲಿ ಅದರ ಮೇಲಿನ ಬಂಧನವಾದರೂ ತೀರ ಕಡಿಮೆ ಇರುತ್ತದೆ. ಈ ವಿಕಾರಗಳು ಉಂಟಾಯಿತೆಂದರೆ ಬಂಧನವೂ ತೀವ್ರವಾಗುತ್ತಾ ಹೋಗುತ್ತದೆ. ಇದೇ ಆತ್ಮ ಕೈದಿಯ ಕೊಠಡಿಯ ಬಲವಾದ್ದಕವಾಟವು. ಆದರೆ ಕವಾಟವು ಅಷ್ಟೊಂದು ಬಲವಾಗಿರುವುದಾದರೂ, ಪ್ರತಿಯೊಬ್ಬ ಕೈದಿಯನ್ನು ಕವಾಟದಿಂದ ಹೊರಗೆ ಬಿಡುವಂತೆ ವಿರಾಮ ಕಾಲವನ್ನು ಪರಮಾತ್ಮ ಸರಕಾರವು ಏರ್ಪಡಿಸಿದೆ. ಆದರೆ, ಹಾಗೆ ಬಿಡಲ್ಪಟ್ಟ ಕೈದಿಯು ಬಿಡುಗಡೆ ಹೊಂದಲಾರನು. ಪರಂತು ಆತನು ಕಾರಾಗಾರದ ಪ್ರಾಕಾರವನ್ನು ದಾಟಲು ಸಾಧ್ಯವಿಲ್ಲ. ಈ ವಿರಾಮ ಕಾಲವೇ ನಿದ್ರಾಭೋಗವು ಸಕಲ ಪ್ರಾಣಿಗಳಿಗೂ ಏಕರೀತಿ ವಿರಾಮವಿರುತ್ತದೆ. ಆದರೆ ಇದು ದೀರ್ಘವಲ್ಲ. ನಿದ್ರೆಯು ತೀರಿತೆಂದರೆ ಆತ್ಮ ಕೈದಿಯು ಪುನಃ ಸಂಸಾರ ಕಪಾಟದಿಂದ ಕೊಠಡಿಗೆ ತಳ್ಳಲ್ಪಡುತ್ತಾನೆ—ಈ ಕಾರಾಗೃಹದಲ್ಲಿರುವ ಸಕಲ ಆತ್ಮಕೈದಿಗಳಿಗೆ ನವಗ್ರಹಾದಿ ಅಧಿಕಾರಿಗಳು ತಮ್ಮ ಕಾಲ ನಿರ್ವಾಣಕ್ಕೆ ತಕ್ಕಂತೆ ಭೋಗಗಳನ್ನು ಕೊಟ್ಟು ಕಾಲವು ತೀರಿತೆಂದರೆ ಬಿಡುಗಡೆ ಪಡಿಸುವರು. ಇದು ಜನ್ಮ ಪತ್ರಿಕೆಯನ್ನಲ್ಪಡುವ ವಿಧಿ ಶಾಸನದಂತಿರುವುದು. ಇದನ್ನು ಮೀರಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಜೀವನ್ಮುಕ್ತಿಯನ್ನು ಸಾಧಿಸಿ ನಿತ್ಯಾನಂದ ಸುಖವನ್ನು ಪಡೆಯಬೇಕು.

ಆದರೆ ರಾಜಾಕೀಯ ಕಾರಾಗೃಹದಿಂದ ವಿಚಾರಹೀನ ಕೈದಿಯು ಶಿಕ್ಷಾಭೋಗವನ್ನು ತಡೆಯಲಾರದೆ ಕಾಲಾವಧಿಯ ಮುಂಚಿತವಾಗಿ ತಪ್ಪಿಸಿಕೊಂಡು ಹೇಗೆ ಹೆಚ್ಚಿನ ಯಾತನೆಗೊಳಪಡುವನೋ ಆ ರೀತಿಯಲ್ಲಿ ಈ ಪ್ರಪಂಚದಲ್ಲಿ ಹಲವು ಆತ್ಮ ಕೈದಿಗಳು ಯಾತನೆಗಳನ್ನು ತಡೆಯಲಾರದೆ ಆತ್ಮಹತ್ಯ ಮುಖಾಂತರ ತಪ್ಪಿಸಿಕೊಳ್ಳುವುವು. ಆದರೆ ಇಂತವರು ಮುಂದೆ ಹೆಚ್ಚಿನ ಶಿಕ್ಷಾಭೋಗಕ್ಕೆ ಒಳಪಡುವರು ಹೊರತು ಎಂದಿಗೂ ಪಾರಾಗಲಾರರು. ಇದಕ್ಕಾಗಿಯೇ ಆತ್ಮಹತ್ಯವು ಶಾಸ್ತ್ರೋಕ್ತ ತುಚ್ಛವೆನಿಸಲ್ಪಡುತ್ತದೆ—ಇದನ್ನು ಪ್ರಾಣಿ ಮಾತ್ರವು ಸ್ವಪ್ನದಲ್ಲಿಯೂ ಎಣಿಸಬಾರದು. ಬಂದದ್ದನ್ನು ಅನುಭವಿಸಿ ಕಾಲಾವಧಿಯನ್ನು ನಿರೀಕ್ಷಿಸುತ್ತಿರಬೇಕು. ಈ ಮಧ್ಯೆ ಜೀವನ್ಮುಕ್ತನಾಗಲು ಸಾಧಿಸಬೇಕು.

ಕಾರಾಗ್ರುಹವು ಎಂದೆಂದಿಗೂ ಸುಖದ ಸ್ಥಾನವಲ್ಲವೆಂಬುದನ್ನು ಪುನಃ ಪುನಃ ಹೇಳಬೇಕಾಗಿಲ್ಲ. ಆದರೂ ಕೇವಲ ವಿಚಾರಹೀನ ಪ್ರಾಣಿಯು ತನಗೆ ಸುಖವೆಂದು ಕಂಡು ಬರುವುದನ್ನು ಸುಖವೆಂದೆಣಿಸಿ ಕಾಲಹರಣ ಮಾಡಿ ನಿಜವಾದ ಸುಖಕ್ಕೆ ಬಾಹಿರನಾಗುತ್ತದೆ. ಆದುದರಿಂದ ನಮಗೆ ಸುಖವೆಂದು ಕಂಡರೂ ದುಃಖದ ಮೂಲವೆಂದೇ ತಿಳಿಯಬೇಕು. ಸುಖವು ಕಾರಾಗೃಹದಲ್ಲಿ ಎಂದಿಗೂ ದೊರಕದು. ಮುಂದೆ ಸ್ಥಿರ ಚಿತ್ತದಿಂದ ಯೋಚಿಸಿದರೆ ತಾನಾಗಿಯೇ ತಿಳಿಯುವುದು.

ಹಾಗಾದರೆ ನಿಜವಾದ ಸುಖವೆಲ್ಲಿ?—ಪರಮಾತ್ಮನಲ್ಲಿ.

ಪಡೆಯುವ ರೀತಿಯಾದರೂ ಏನು?—ಜೀವನ್ಮುಕ್ತಿಯಿಂದ.

ಸಾಧನೆಯಾದರೂ ಯಾವಾಗ?—ಜೀವಿಸಿರುವಾಗಲೆ.

ಅದನ್ನೇ ಸಾಧಿಸುವಾ—"ಶ್ರೀ ಕೃಷ್ಣಾರ್ಪಣ".

ಬಡ ಆತ್ಮ ಕೈದಿ.

ಬಿ. ವಿ. ಬಿ.


## ಹಲ್ಲುಗಳ ಜಾಗ್ರತೆ!

**ಡಾಕ್ಟರ್ ಎಸ್. ಪಿ. ಭಟ್,**

ಡಿ. ಡಿ. ಎಸ್. ಎಲ್. ಡಿ. ಎಸ್‌ಸಿ. (ಮದ್ರಾಸ್)

**ಸರ್ಜನ್ ದಂತವೈದ್ಯ.**

ಸದಾನಂದ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು,

ಇವರು




ಹಲ್ಲುಗಳ ಪ್ರತಿಯೊಂದು ತರದ ರೋಗಗಳನ್ನೂ, ಊನನ್ಯೂನಗಳನ್ನೂ ಚಿಕಿತ್ಸೆ ಮಾಡುವರು.

ಎಂದೆಂದಿಗೂ ಒಡೆದುಹೋಗದಂತಹ ದಂತ ಮಾಲೆಗಳನು. ತಯಾರಿಸಿ ಕೊಡುವವರು

ಇವರೊಬ್ಬರೇ

**ದರಗಳು ಅತ್ಯಂತ ಸುಲಭ! ದಂತಪರೀಕ್ಷೆ ಧರ್ಮಾರ್ಥ!**

ಸಮಯ: ಪೂರ್ವಾಹ್ನ ಘಂಟೆ 9—12; ಅಪರಾಹ್ನ ಘಂಟೆ 3—6.

ಆದಿತ್ಯವಾರ ಪೂರ್ವಾಹ್ನ ಮಾತ್ರ.

## ಭಾರತಿಯನ್ನು ಎಲ್ಲರೂ ತರಿಸುವುದೇಕೆ?

ಕರ್ನಾಟಕದ [illegible] ಆತ್ಮಕ್ಕೆ, [illegible] ಕಥೆ, ಕವನ, ಪ್ರಬಂಧ, ಹಾಸ್ಯ, ವಿನೋದ [illegible] ಪತ್ರಿಕೆ. ಹಿಂದುಸ್ಥಾನ [illegible] ದೇಶದ [illegible] ಪ್ರದೇಶದಲ್ಲಿ [illegible].

**ಜ್ಯಾಹೀರಾತಿಗೆ ಉತ್ಕೃಷ್ಟ ಪತ್ರಿಕೆ!**

**ದರಗಳಿಗೆ ಬರೆಯಿರಿ!!**

ವಾರ್ಷಿಕ ಚಂದಾ 2—4—0. 5 ವರ್ಷಗಳಿಗೆ 10 ರೂಪಾಯಿ

ಮೆನೇಜರ್— 'ಭಾರತಿ' ಕಾರ್ಯಾಲಯ,

ಮುಲ್ಕಿ, ದ. ಕ.

# ದೀಪಾವಳಿ ಒಗಟು.


## ಇನ್ನೊಂದು ಬೆಳ್ಳಿಯ ಪದಕ! ಇನ್ನೊಂದು ಬೆಳ್ಳಿಯ ಪದಕ!

8 ರೂಪಾಯಿ, 8 ಪುಸ್ತಕಗಳು ಬಹುಮಾನ.

ಒಗಟು ನಂಬ್ರ ೨.

## ಜನವರಿಯ ಸುವರ್ಣ ಪದಕವನ್ನು ನಿರೀಕ್ಷಿಸಿರಿ!

ಕಟ್ಟಿದವರು:— ಶ್ರೀ. ಕೆ. ಟಿ. ಕರ್ಕೇರ, ಮುಂಬಾಯಿ.




**ನಿಯಮಗಳು:—** ಇದರ ಬಿಚ್ಚುಗರು ಉತ್ತರದೊಡನೆ ಮುಕ್ಕಾಲು ಮುಕ್ಕಾಲಿನ ಒಂದಾಣೆ ಅಂಚೆ ಚೀಟನ್ನು ರವಾನಿಸಬೇಕು. (ಆಣೆ ಚೀಟುಗಳಾಗಲೀ, ಇತರ ಚೀಟುಗಳಾಗಲೀ ಸ್ವೀಕೃತವಾಗುವುದಿಲ್ಲ.) 4ಕ್ಕಿಂತ ಹೆಚ್ಚು ಹೆಸರುಗಳನ್ನು ಕಳುಹಿಸುವವರು ಮೂರುವರೆ ಆಣೆಗಳ ಮುಕ್ಕಾಲಿನ ಅಂಚೆ ಚೀಟುಗಳನ್ನು ರವಾನಿಸಬಹುದು. ಉತ್ತರಗಳು ನವಂಬರ 26ರೊಳಗೆ ನಮ್ಮ ಕೈಸೇರಲೇ ಬೇಕು. ಸಮರ್ಪಕವಾಗಿ ಬಿಚ್ಚಿದವರ ಹೆಸರುಗಳು ದಶಂಬರ ಸಂಚಿಕೆಯಲ್ಲಿ ಪ್ರಕಟವಾಗುವುವು. ಉತ್ತರಗಳನ್ನು ಸುಂದರವಾಗಿ ಬಿಡಿಸಿ ತಮ್ಮ ಕಲಾ ಕೌಶಲ್ಯವನ್ನು ಪ್ರದರ್ಶಿಸುವವರೊಳಗೆ ಸೋಡ್ತಿ ಎತ್ತಿ ಎರಡು ರೂಪಾಯಿಗಳನ್ನು ಬಹುಮಾನಿಸಲಾಗುವುದು.

### ಎಡದಿಂದ ಬಲಕ್ಕೆ

1, 2, 3—ದಶರಥ ಪುತ್ರರಲ್ಲೊಬ್ಬ.
4, 5, 6—ಮನೆ, ಮಂದಿರ.
7, 8, 9—ಅವನು.
10, 11, 12—ಸಂತೋಷಿಸು, ಕ್ರೀಡಿಸು.
13, 14, 15—ಪ್ರಜಾಧಿಪ.
16, 17, 18—ಯುದ್ಧ.
19, 20, 21—ತಾವರೆ ಹೂ.
22, 23, 24—ಹೊಯ್, ಸುರಿಸು.
25, 26, 27, 28—ದೀನರ
29, 30, 31, 32—ಮಿತ್ರರು.

### ಮೇಲಿನಿಂದ ಕೆಳಕ್ಕೆ

1ರಿಂದ4—ಗುಣಗಳಲ್ಲೊಂದು.
3ರಿಂದ6—ಮೋರೆ.
7ರಿಂದ10—ಮರಣವಿಲ್ಲದವ.
9ರಿಂದ12—ಹೇಳು, ನುಡಿಯು.
13ರಿಂದ16—ವಸ್ತ್ರ ಮಡಿ ಮಾಡುವವ
15ರಿಂದ18—ಸೂರ್ಯವಂಶದ ರಾಜರ
19ರಿಂದ22 ಶಿಕ್ಷಣ ಕೊಡು. ಶಿಲ್ಲೊಬ್ಬ
21ರಿಂದ24—ಮನಸ್ಸು ಕೊಡು.

## M. GOPAL RAO,

ARTIST, PHOTOGRAPHER & PHOTO
MATERIAL DEALER,
MANGALORE.

*Stokist of:*

**Gevaet, Kodak, Afga, Selo, Wellington Ilford and Greterion Pates, Papers and Roll Films.**

**Welling Cameras** (INDIAN MAKE)

*Films developed free for amatuers.*

## ತೊದಲ್ನುಡಿ.

ಮುಂಬಾಯಿಯಲ್ಲಿ ಏಕಮಾತ್ರ
ವಾರ ಪತ್ರಿಕೆ.

ಕಥೆ, ಪದ್ಯ, ಹಾಸ್ಯ, ವಾರ್ತಾ ವಿನೋದಗಳೇ ಮೊದಲಾದ ವಾಚನೀಯ ಲೇಖನಗಳಿಂದೊಪ್ಪುವ ವಾರ ಪತ್ರಿಕೆ ಎಂದರೆ ಇದೊಂದೇ. ಪುಸ್ತಕ ರೂಪದಲ್ಲಿ ವಾರಂಪ್ರತಿ ಹೊರಡುತ್ತದೆ.

**ಚಂದಾ:**—ವರ್ಷ 1ಕ್ಕೆ ರೂಪಾಯಿ 3—4—0. 6 ತಿಂಗಳಿಗೆ ರೂಪಾಯಿ 1—12—0. 4 ತಿಂಗಳಿಗೆ ವಿದ್ಯಾರ್ಥಿಗಳಿಗೆ ಮಾತ್ರ ರೂಪಾಯಿ 1—4—0.

ಕೂಡಲೇ ಬರೆಯಿರಿ

ತೊದಲ್ನುಡಿ ಆಫೀಸು,
140 Bora Bazaar Street,
**Fort, BOMBAY.**

## SADHANA AUSADHALAYA DACCA. (BENGAL)

*Branch:* Shyambazar Calcutta, Near Depot

ಅಧ್ಯಕ್ಷರು:—ಜೋಗೇಶ ಚಂದ್ರಘೋಷ್

## ಆಯುರ್ವೇದ ರೀತ್ಯಾ ತಯಾರುಮಾಡಿದ ಶುದ್ಧ ಔಷಧಗಳ ವೈದ್ಯಶಾಲೆ

**ಅಪೇಕ್ಷಿಸಿದವರಿಗೆ ಔಷಧಗಳ ಪಟ್ಟಿಯನ್ನು ಮುಫತ್ತಾಗಿ ಕಳುಹಿಸಲಾಗುತ್ತೆ**

**ಮಕರಧ್ವಜ**—(ಸ್ವರ್ಣ ಸಿಂಧೂರ) ಶುದ್ಧವಾದದ್ದು ಮತ್ತು [illegible]ದ ಕೂಡಿದ್ದು, ಎಲ್ಲಾ ವಿಧವಾದ ರೋಗಗಳಲ್ಲಿಯೂ ಗುಣ [illegible]ಕ್ಕೆ ದಿವ್ಯೌಷಧ. ನರಗಳ ದೌರ್ಬಲ್ಯ, ಮಕ್ಕಳು ಮತ್ತು ಸ್ತ್ರೀ [illegible] ಗರ್ಭಾವಸ್ಥೆಯಲ್ಲಿ ಉಪಯೋಗವಾಗುವುದು. ತೊಲೆ೧ಕ್ಕೆ ರೂ. [illegible]—[illegible]—೦.

**ಸರಿಬಾದಿಸ ರಸ**—ಪ್ರಮೇಹ ರಸಸಂಬಂಧವಾದ ರೋಗಗಳು [illegible] [illegible]ಗಗಳು, ರಕ್ತ ಕೆಡುವಿಕೆ ಮುಂತಾದ್ದನ್ನು ವಾಸಿಮಾಡು [illegible] [illegible] ಶೋಧಕಾರಿಯಾದ ಅನೇಕ ದಿವ್ಯಮೂಲಿಕೆಗಳಿಂದ ತಯಾರಿಸಲ್ಪಟ್ಟಿದೆ. ಶರೀರದ ಸಮಸ್ತ ದೋಷಗಳನ್ನೂ ಗುಣಪಡಿಸುವುದು. ಬೆಲೆ—ಸೇರು ೧ಕ್ಕೆ ರೂ. ೩—೦—೦.

**ಶುಕ್ರಸಂಜೀವನ**—ಇಂದ್ರಿಯದ ನಿಶ್ಶಕ್ತಿ, ನಪುಂಸಕತ್ವ ಮುಂತಾದ ರೋಗಗಳಿಗೆ ಸಂಜೀವನ. ಬೆಲೆ ಶೀರು ೧ಕ್ಕೆ ರೂ. ೧೬.

**ಅಬಲಾಬಾಂಧವ**—ರಕ್ತಸ್ರಾವ, ಮುಟ್ಟುಕಟ್ಟು, ಸೊಂಟ ನೋವು, ಋತುದೋಷ ಮುಂತಾದ ಎಲ್ಲಾ ವಿಧವಾದ ಗರ್ಭಾಶಯವನ್ನಂಟಿದ ಸ್ತ್ರೀಯರ ರೋಗದ ಲಕ್ಷಣಗಳನ್ನು ಬರೆದು ಕಳುಹಿಸಿದರೆ ಎಚ್ಚರದಿಂದ ನಾವೇ ಔಷಧಾನುಪಾನಗಳನ್ನು ಮುಫತ್ತಾಗಿ ಬರೆದು ಕಳುಹಿಸುವೆವು.


**ಕಾಗದ ಪತ್ರಗಳನ್ನು ಇಂಗ್ಲಿಷಿನಲ್ಲೇ ಬರೆಯಿರಿ.**

ವಿ. ಸೂ—ಜಾಹಿರಾತಿನವರಿಗೆ ಬರೆಯುವಾಗ 'ಬಡವರ ಬಂಧು'ವಿನ ಹೆಸರನ್ನು ಸೂಚಿಸಿರಿ.

## ಅಖಿಳ ಕರ್ನಾಟಕದಲ್ಲಿ

# 1,50,00,000 ಜನರಿರುವಿರಿ!

ಸಾವಿರಾರು ಜನರನ್ನು ಸಂತೃಪ್ತಿಗೊಳಿಸಿದ 'ಮ. ಜಾ.'ರವರಿಗೆ ನಿಮ್ಮ ಬಲ ಮತ್ತು ಎಡ ಅಂಗೈಗಳನ
ಶಾಯಿಯಲ್ಲಿ ಅದ್ದಿ, ಕಾದಗಳ ಮೇಲೆ ಅವುಗಳ ಸ್ವಚ್ಛ ಮುದ್ರೆ ಒತ್ತಿ, ಅಂಗೈರೇಖೆಗಳ ಚಿತ್ರಗಳನ್ನು ಬೇಕಾದ ಆರ




ಪ್ರಶ್ನೆಗಳೊಡನೆಯೂ, ನಾಲ್ಕಾಣೆ ಅಂಚೆ ಚೀಟಿನೊಂದಿಗೂ ಕಳುಹಿಸಿರಿ! ಅವರು ನಿಮ್ಮ ಹಿಂದಿನ ಮುಂದಿನ ಈಗಿ
ಜೀವನ ಚರಿತ್ರೆಯನ್ನೂ, ಉದ್ಯೋಗ, ಪ್ರಾಯ, ರೋಗ ರುಜನೆ, ಧನಲಾಭ, ವಿವಾಹ, ಗುಣನಡತೆ, ಆರೋಗ್ಯ ಸ್ಥಿ
ಗಳ ಕುರಿತು ನಿಮ್ಮ ಜಾತಕಗಳಿಗಿಂತಲೂ ಸಮರ್ಪಕವಾಗಿ ಬರೆದು ಕಳುಹಿಸುವರು. ಭೇಟ ಮಾಡಿ ಹಸ್ತಪರೀಕ್ಷೆಯನ
ಮಾಡಲಾಗುವುದಿಲ್ಲ.

## ಮೂರು ತಿಂಗಳುಗಳಲ್ಲಿ 714 ಜನರ ಹಸ್ತಪರೀಕ್ಷೆಯಾಯಿತು.

ಅಗತ್ಯವಿದ್ದವರು ಬರೆದುಕೊಳ್ಳಬಹುದು:-

**M. J. c/o Badavara Bandhu Office, Mangalore**

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ
ಎಂ. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

# ಇತ್ತ ನೋಡುವುದು.

ಗುಣ ಬಾರದಿದ್ದರೆ ಹಣ ಪರತ

## ಪುರುಷತ್ವ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣದಿಂದ ಸ್ವಪ್ನದಲ್ಲಿ ಹಾಗೂ ಮೂತ್ರದ್ವಾರಾ ಹೋಗುವ ವೀರ್ಯವು ಕೂಡಲೇ ಬಂದಾಗುವುದು ಗರಮಿ ಪರಮಾದಿಂದಾದ ಉಷ್ಣತಾ, ಮುಷ್ಟಿಮೈಥುನದಿಂದಲೂ, ಅತಿರತಿಯಿಂದಲೂ ಧಾತು ನೀರಾಗುವಿಕೆ, ಧಾತು ಕ್ಷೀಣತೆ, ಅಶಕ್ತತೆ ಶೀಘ್ರದ ಧಾತುಪತನ ಇವೆಲ್ಲ ರೋಗಗಳು ನಾಶವಾಗಿ ರಕ್ತಶುದ್ಧಿಯಾಗುತ್ತದೆ. ಹಸಿವೆ, ಸಾಮರ್ಥ್ಯಗಳು ಹೆಚ್ಚಾಗಿ ತೂಕ ಬೆಳೆಯುತ್ತದೆ. ಮತ್ತು ವೀರ್ಯವು ಗಟ್ಟಿಯಾಗಿ ಗರ್ಭಧಾರಣಕ್ಕೆ ಯೋಗ್ಯವಾಗುತ್ತದೆ. ಮುಖ್ಯ ಸರ್ಟಿಫಿಕೇಟ, ಮೆ. ರಾ. ಎಸ್. ಅಗಡೆ ಮ್ಯಾಜಿಸ್ಟ್ರೇಟ್ ಸಾತಾರಾ— ಈ ಚೂರ್ಣದಿಂದ ನನಗೆ ಆಶ್ಚರ್ಯಕಾರಕ ಗುಣವಾಯಿತು. ಅನೇಕ ತರದ ಅವಿಚಾರದಿಂದ ದುಷ್ಟವಾದ ವೀರ್ಯ ಹಾಗೂ ರಕ್ತವು ಇದರಿಂದ ಸತೇಜವಾಗಿ ಪ್ರಕೃತಿಯು ನೆಟ್ಟಗಾಗದೆ ಇರದು. ೨೧ ದಿವಸ ಸಾಕಾಗುವಷ ಡಬ್ಬಿಗೆ ಕಿಮ್ಮತ್ತು ೫ ರೂ. ಟ. ಖ. ೦-೮-೦.

## ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಶರರಿಗೆ ಶತ್ರುವಾಗಿರುವುದು, ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ಮೈಯಲ್ಲಿ ನೋವು, ಉಷ್ಣತಾ, ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು, ಮಕ್ಕಳಾಗುವುದಿಲ್ಲವೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟು ಮೆ. ರಾ. ಎ. ಎನ್. ಇನಸ್ಪೆಕ್ಟರ ಬೆಳಗಾಂವ— ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಶರಗ ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩. ಟ. ಖ. ೦-೮-೦.

## ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ "ಡಾಕ್ಟರ್ ಬಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಮೂ। ಕೇಳವಾಮಾಹಿಮುಜಿ. ರಾಣೇ" ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ. ವಿ. ಪಿ. ಖರ್ಚು ೦-೮-೦.

ವಿಳಾಸ—

ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ,

S. M. C.

## ಅನುಭವಸಿದ್ಧ ಔಷಧಗಳು

**ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ಥಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ ೧ಕ್ಕೆ ರೂ. ೨—೮—೦. ೨ಕ್ಕೆ ೪—೧೨—೦.

**ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟಿನದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಚಳಿಜ್ವರ, ರಕ್ತಹೀನತೆ, ಕೈಕಾಲು ಸೆಳಿತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣ ಪಡಿಸುವುದು.

ಬಾಟ್ಲಿ ೧ರ ೧—೨—೦; ೧ ಡಬ್ಬಿ ಮಾತ್ರೆಗೆ ೧—೦—೦; ೨ ಬಾಟ್ಲಿ ಔಷಧಕ್ಕೂ ೨ ಡಬ್ಬಿ ಮಾತ್ರೆಗೂ ೪—೪—೦.

**(ಕಸ್ತೂರಿಮಿಶ್ರಣ) ದಶಮೂಲಾರಿಷ್ಟ**—ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಅಕುಂಚಿಸಿ ಪ್ರಸವದ ಆಯಾಸವನ್ನು ಹೋಗಲಾಡಿಸಿ, ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಗರ್ಭಕೋಶದ ವೇದನೆಗಳನ್ನು ಸಮಾಧಾನ ಪಡಿಸಿ, ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾಭಂಗ ಮೊದಲಾದವುಗಳು ಮಾಯವಾಗಿ ಬಾಣಂತಿಯರು ಪುಷ್ಟಿ ಹೊಂದುವರು. ಮಗುವಿನ ಆರೋಗ್ಯವು ಚಿರಾಂತಕವಾಗುವುದು. ಪ್ರಸವಿಸಿದ ತರುವಾಯ ೩ ದಿನಗಳ ಮಾತ್ರೆಗೆ ಆ. ೩; ದಶಮೂಲ ಬೆಲೆ ಬಾಟ್ಲಿ ೧ರ ರೂ. ೧—೮—೦; ೨ ಬಾಟ್ಲಿಗಳಿಗೆ ೩—೦—೦.

**ಮೇಹ ಕುಠಾರ**—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿ[ರುವಿ]ಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂ[ತ್ರ]ದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡಿಯಲಿಕ್ಕೆ ಸಾಮರ್ಥ್ಯವಿ[ಲ್ಲ]ದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

೧ ಡಬ್ಬಿ ಮಾತ್ರೆಗೆ ರೂ. ೨—೮—೦; ೨ ಡಬ್ಬಿಗಳಿಗೆ ರೂ. ೪—೧೨—೦.

**ದ್ರಾಕ್ಷಾರಿಷ್ಟ**—ಮೆದುಳಿಗೂ, ನರಗಳಿಗೂ ನವಶಕ್ತಿಯನ್ನುಂಟು ಮಾಡು[ವ] ಅತ್ಯುತ್ತಮ ಔಷಧಿ. ಅತಿರೇಕ ದೌರ್ಬಲ್ಯದಿಂದ ಉಂಟಾಗುವ ಎಂತಹ ತೀ[ವ್ರ] ವ್ಯಾಧಿಯ ಸಮಯದಲ್ಲಿಯೂ ಶಕ್ತಿಯನ್ನು ಇರಗೊಳಿಸುವುದು. ರಕ್ತಹೀನತೆ ಮೊ[ದ]ಲಾದುವುಗಳನ್ನು ನಿವಾರಿಸುವುದು. ದೇಹದಲ್ಲಿ ತಲೆದೋರುವ ಸರ್ವ ತರದ ನರಗ[ಳ]ಯಾ ನೈಸರ್ಗಿಕ ದೌರ್ಬಲ್ಯಗಳನ್ನು ಹೋಗಲಾಡಿಸುವುದು. ಕೆಮ್ಮು, ನಿದ್ರಾಹೀನ[ತೆ] ಮೊದಲಾದುವುಗಳಿಗೂ ಅತ್ಯುತ್ತಮ. ತಲೆತಿರುಗುವಿಕೆ, ಪಿತ್ತವಿಕಾರ, ಮಲಬದ್ಧ[ತೆ] ಅಜೀರ್ಣತೆ ಇತ್ಯಾದಿಗಳನ್ನು ಹೋಗಲಾಡಿಸಿ, ರಕ್ತಶುದ್ಧಿಯನ್ನೂ, ವೃದ್ಧಿಯನ್[ನೂ] ಉಂಟುಮಾಡಿ, ಹಸಿವನ್ನು ಹೆಚ್ಚಿಸಿ, ಮಲವಿಸರ್ಜನೆಯನ್ನು ಕ್ರಮಗೊಳಿಸುವು[ದು]. ಇದನ್ನು ರೋಗಿಗಳು ಮಾತ್ರವಲ್ಲದೆ ನಿರೋಗಿಗಳೂ ಸೇವಿಸುವುದರಿಂದ ಅವರ ಆರೋ[ಗ್ಯ]ವು ದ್ವಿಗುಣಿತವಾಗಿ ಬೆಳೆದು ಶಕ್ತಿಯು ಹೆಚ್ಚುವುದು. ಮಕ್ಕಳಿಗೂ ಇದು ಶ[ಕ್ತಿ]ವರ್ಧಕವು. ಕ್ರಯ 24 ಔನ್ಸಿನ ಬಾಟ್ಲಿಗೆ ರೂ. 2—4—[0]

**ಮಹಾಮದನಕಾಮೇಶ್ವರೀ ಲೇಹ**— ಡಬ್ಬಿ ೧ರ ೨—೦—[೦] ೨ರ ೩—೧೨—೦;

ಕೆಟಲಾಗಿಗೆ ಬರೆಯಿರಿ: **ಎಂ. ಗಣಪಯ್ಯ ಎಂಡ್ ಸನ್ಸ್. ಆಯುರ್ವೇದಿಕ್ ಫಿಜಿಶಿಯನ್ಸ್ ರಥಬೀದಿ, ಮಂಗಳೂರು.**

ನಮ್ಮಲ್ಲಿಯ ಔಷಧಗಳು ಈ ಕೆಳಗಿನ ವಿಳಾಸದವರಲ್ಲಿಯೂ ದೊರೆಯುತ್ತವೆ.

**ಕಾಮತ್ ಎಂಡ್ ಕೋ. ತಾರಾಹೌಸ್, ಗಿರಗಾಂವ್ ಬೇಕ್ ರೋಡ್, ಮುಂಬಾಯಿ ನಂ. 4. ಡಾ॥ ಶ್ರೀನಿವಾಸ ಪೈ, ಪುತ್ತೂರು, ದ. ಕ**



# ದಿ ಇಕನೊಮಿಕ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

## ಹೆಡ್ ಆಫೀಸು - ತಿರುವಲ್ಲಾ

**ಬಡವರಿಗೆ ಒಪ್ಪುವಂತಹ ಈ ನೂತನ ತರದ ವಿಮೆಗೆ ಸೇರಿ ಕ್ಲಪ್ತಕಾಲದಲ್ಲಿ ಧನಸಹಾಯವನ್ನು ಪಡೆಯಿರಿ.**

## ವಿವಾಹ ವಿಮೆ.

ಪ್ರವೇಶ ಹಾಸಲು ರೂಪಾಯಿ 2. ಮಾಸಿಕ ವಂತಿಗೆ ರೂಪಾಯಿ 1. ಸೇರಿದ ಒಂದು ವರ್ಷದ ನಂತರ ಮದುವೆಯೊದರೆ ಆ ಮೆಂಬ[ರ]ನಿಗೆ ಹಕ್ಕು ದೊರೆಯುವುದು. ಎಂದರೆ ಆ ತಿಂಗಳಲ್ಲಿ ಒಟ್ಟುಗೂಡಿದ ಹಣದಲ್ಲಿ ಕಾಲಂಶವು ಕಂಪೆನಿಯ ರಿಸರ್ವ್ ಫಂಡಿಗೆ ಹೋಗುವುದು. ಬಾಕಿ ಉಳಿದ ಮುಕ್ಕಾಲಂಶವನ್ನು ಆ ತಿಂಗಳಲ್ಲಿ ಮದುವೆಯಾದ ಮೆಂಬರರೊಳಗೆ ಸರಿಯಾಗಿ ಹಂಚಲಾಗುವುದು. ಹಣ ಸಿಕ್ಕಿದ ನಂತರ ಒಂದ[ು] ಚಿಕ್ಕಾಸನ್ನಾದರೂ ಕಂಪೆನಿಗೆ ಹಿಂದೆ ಕೊಡಬೇಕಾದುದಿಲ್ಲ. 5 ಮತ್ತು 45 ವರ್ಷ ಪ್ರಾಯದೊಳಗಣ ಸ್ತ್ರೀಪುರುಷರೆಲ್ಲರೂ ಸೇರಬಹುದು. ವೈದ್ಯಕೀಯ ಪರೀಕ್ಷೆ ಇಲ. ಸಂಪೂರ್ಣ ಮಾಹಿತಿ ಬಗ್ಗೆ ಇಂದೇ ಬರೆಯಿರಿ.

## ಆಗೋಸ್ತು ತಿಂಗಳಲ್ಲಾದ 15 ಮದುವೆಗಳಿಗೆ ರೂಪಾಯಿ 1503 ಕೊಟ್ಟಿದ್ದೆ

## ಬೇಕಾಗಿದೆ.

ಉದಾರ ಶರ್ತಗಳಲ್ಲಿ ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಹುರುಪಿನಿಂದ ಕೆಲಸ ಮಾಡುವ ಏಜಂಟರು ಬೇಕಾಗಿದ್ದಾರೆ. ಚಲೋ ಕಮ್ಮಿಶನ್ ಕೊಡಲಾಗುವುದು.

**ಶರ್ತಗಳಿಗೆ ಇಂದೇ ಬರೆಯಿರಿ.**

ವಿಳಾಸ:—

**T. Madhava Pai,**

*Organiser, Economic Insurance Co., Ltd.,*

**Kasargod, (S. Kanara.**

# The Mangalore Harmonium Works,

HAMPANKATTA, MANGALORE.

## ದಿ ಮಂಗಳೂರು ಹಾರ್ಮೋನಿಯಂ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು



ನಮ್ಮಲ್ಲಿ ಎಲ್ಲಾ ತೆರನಾದ ಉತ್ತಮ ಹಾರ್ಮೋನಿಯಮ್‌ಗಳೂ, ಡಬ್ಬಲ್ ರೀಡ್ಸ್, ಸಿಂಗಲ್ ರೀಡ್ಸ್, ಕಾಲಿನ ಪೆಟ್ಟಿಗೆ, ಕೈಪೆಟ್ಟಿಗೆ-ಮೊದಲಾದ ಅನೇಕ ನಮೂನೆಗಳಲ್ಲಿ ಸುಲಭ ಕರೀದಿಯಲ್ಲಿ ಸಿಗುವುವು ನಮ್ಮಲ್ಲಿಯೇ ಹೊಸತಾಗಿ ತಯಾರಿಸಿ ಸುಲಭ ಬೆಲೆಯಲ್ಲಿ ದೊರೆಯುವುವು. ಅಲ್ಲದೆ ಎಲ್ಲಾ ತರದ ಹಾರ್ಮೋನಿಯಮ್ ಮತ್ತು ರಿಪೇರಿಯು ಬಹಳ ನಾಜೂಕಾಗಿ ಮಾಡಲ್ಪಡುವುದು.

**ಹೆಚ್ಚಿನ ಮಾಹಿತಿ—ಒಮ್ಮೆ ಬಂದಲ್ಲಿ ಅಥವಾ ಬರಕೊಂಡಲ್ಲಿ ತಿಳಿಯುವುದು.**

**A. GANAPATHY, PROPRIETOR.**



## ಬಿ. ದೇವದಾಸ್

(ಮೆಡಲಿಸ್ಟ್)

ಹಾರ್ಮೋನಿಯಮ್ ಮೇಕರ್, ಹಂಪನ್‌ಕಟ್ಟೆ,

ಮಂಗಳೂರು.



**ಸಂಗೀತ ಕಲಾಭಿಮಾನಿಗಳೇ,**

ಇತರ ಕಂಪೆನಿಗಳಲ್ಲಿ ಸಿದ್ಧವಾದ ಹೊಸ ಹೊಸ ನಮೂನೆಯ ಹಾರ್ಮೋನಿಯಂ ಪೆಟ್ಟಿಗೆಗಳು ನಮ್ಮಲ್ಲಿ ನಾಜೂಕಾಗಿ, ಗಿರಾಕಿಗಳಿಗೆ ಮೆಚ್ಚಿಕೆಯಾಗುವಂತೆ ತಯಾರಿಸಲ್ಪಟ್ಟು, ಮಾರಾಟಕ್ಕೆ ಸಿದ್ಧವಿವೆ. ಮಾತ್ರವಲ್ಲದೆ ಎಲ್ಲಾ ತರದ ಸಂಗೀತ ಸಾಮಗ್ರಿಗಳು ಕೂಡಾ ಚಲೋದಾಗಿ ದುರುಸ್ತಿ ಮಾಡಲ್ಪಡುವುವು. ನಮ್ಮ ಉತ್ತಮ ತರದ ಕೆಲಸದ ಪ್ರಾಶಸ್ತಿಗಾಗಿ ಅನೇಕಾನೇಕರು ನಮಗೆ ಭಂಗಾರದ ಪದಕಗಳನ್ನು ಬಹುಮಾನಿಸಿರುವರು. ನೀವು ಒಮ್ಮೆ ಪರೀಕ್ಷಿಸಿದ್ದಲ್ಲಿ ಖಾತ್ರಿಯಾಗುವುದು.

ಹೆಚ್ಚಿನ ಮಾಹಿತಿಗೆ ಇವರಲ್ಲಿ ಪತ್ರವ್ಯವಹಾರ ಮಾಡುವುದು.

## ಬಿ. ದೇವದಾಸ್, ಹಂಪನಕಟ್ಟೆ, ಮಂಗಳೂರು.

# ಅಸಮವಾದುದು. ಅದ್ವಿತೀಯವಾದುದು.

ಇಚಾಪುರದ ಶ್ರೀ. ಅತುಲ ಕ್ರಿಸ್ತೋ ನ್ಯಾಕರವರು ಹೀಗೆ ಬರೆಯುತ್ತಾರೆ:—

"ಆತಂಕನಿಗ್ರಹ ಮಾತ್ರೆಯ ಪ್ರಾಶಸ್ತ್ಯವನ್ನು ನನ್ನ ಲೇಖನಿಯು ಸವಿವರವಾಗಿ ಬಣ್ಣಿಸಲಾರದು. ಯಾವ ಪೇಟೆಂಟ್ ಔಷಧಿಗಿಂತಲೂ ಇದು ಅಸಮವಾದುದು—ಅದ್ವಿತೀಯವಾದುದೆಂದು ನನ್ನ ಅಭಿಪ್ರಾಯ."

# ಆತಂಕ ನಿಗ್ರಹ ಮಾತ್ರೆಗಳು.

ಅಜೀರ್ಣ, ಮೆದುಳುದೋಷ, ನಿರ್ಬಲ, ನೆನಹು ಮತ್ತು ಮೂತ್ರದೋಷಗಳನ್ನು ಗುಣಪಡಿಸುತ್ತದೆ.

ಕ್ರಯ:—ಮೂವತ್ತೆರಡು ಮಾತ್ರೆಗಳ ಒಂದು ಟಿನ್ನಿಗೆ ರೂಪಾಯಿ ಒಂದು.

ನಮ್ಮ ಇನ್ನಿತರ ಔಷಧಿಗಳ ಪಟ್ಟಿಗಾಗಿ ಇಲ್ಲಿಗೆ ಬರೆಯಿರಿ:—

## ಆತಂಕ ನಿಗ್ರಹ ಫಾರ್ಮಸಿ,

## ಬ್ರೋಡ್ವೆ, ಮದ್ರಾಸು.

ಉಚಿತ — ಕೇಳಿದವರಿಗೆ — ಉಚಿತ

ನಮ್ಮ ಸಚಿತ್ರ ಕೆಟಲಾಗ

## ಐದು ವರ್ಷಗಳ ಗ್ಯಾರಂಟಿ.



ಅತ್ಯುತ್ತಮವಾದ ಹಾರ್ಮೋನಿಯಮ್

ಮತ್ತು

ಎಲ್ಲಾ ತರದ ಗಾಯನ ಸಾಮುಗ್ರಿಗಳ ರಿಪೇರಿ ಬಗ್ಗೆ

ದಿ ಸಿಟಿ ಹಾರ್ಮೋನಿಯಮ್ ವರ್ಕ್ಸ್,

ಫೆರ್ನಾಂದಿಸ್ ಮೆನ್ಶನ್ಸ್,

ಹಂಪನ್‌ಕಟ್ಟಾ,

ಮಂಗಳೂರು.

**Free — on request — Free**

OUR ILLUSTRATED CATALOGUE

# FIVE YEARS' GUARANTEE

FOR

## Best Harmoniums of

EVERY KIND AND DISCRIPTION

AND

RELIABLE REPAIRS OF

**All & any Musical Instruments**

*Call at:-*

**The City Harmonium Works**

Fernandez Mansions,

Hampankatta,

*Mangalore.*

# The Zenith Life Assurance Co., Ltd.

**BRANCH MANAGERS:—**

## KERWAR & CO., MANGALORE.

## THE NEW PRINCIPLE IN LIFE ASSURANCE.

## ವಿಮೆ ಇಳಿಸುವುದರಲ್ಲಿ ನವೀನ ಸೂತ್ರ.

A Gentleman aged 30 next birthday pays Rs. 112-8-0 Quarterly premium to insure for Rs. 10,000 payable at age of 60 or at prior death. He receives the following benefits:—

**10,000 ರೂಪಾಯಿಗಳು 60ನೇ ವರ್ಷದ ಅಥವಾ ಮರಣದ ಮೊದಲು ದೊರೆಯಬೇಕೆಂದು 30 ವರ್ಷದ ಒಬ್ಬನು 3 ತಿಂಗಳುಗಳಿಗೊಮ್ಮೆ ರೂ. 112-8-0 ಕಟ್ಟುತ್ತಾನೆ. ಅಂಥವನಿಗೆ ಈ ಪ್ರಯೋಜನಗಳಿವೆ:—**

1. AT DEATH BEFORE 60, even should be die after paying the first quarterly premium, his heirs receive Rs. 10,000.

60ಕ್ಕಿಂತ ಮೊದಲು ಮರಣ ಪಟ್ಟರೆ, ಪ್ರಥಮ ಕಂತನ್ನು ಕಟ್ಟಿ ಮೃತನಾದರೂ, ಅವನ ಸಂಬಂಧಿಕರಿಗೆ ರೂ. 10,000 ಸಿಗುತ್ತದೆ.

2. During DISABILITY due to any illness or accident.—

**ಅಸ್ವಸ್ಥದಿಂದ ಅಥವಾ ಆಕಸ್ಮಿಕ ಸಂಘಟನೆಗಳಲ್ಲಿ ಕಂತು ಕಟ್ಟಲು ಅಶಕ್ತನಾದರೆ:—**

(a) He stops paying the Quarterly premiums until he recovers and resumes his work.

ಅವನು ಸುಖಹೊಂದುವ ವರೆಗೆ ಕಂತು ಕಟ್ಟಲಿಕ್ಕಿಲ್ಲ.

(b) He receives an allowance of Rs. 100 every month from the Company till he is well enough to attend to his occupation.

ಅವನು ಗುಣ ಹೊಂದುವ ತನಕ ಪ್ರತಿ ತಿಂಗಳಿಗೆ 100 ರೂಪಾಯಿಯನ್ನು ಕಂಪೆನಿಯಿಂದ ಎಲ್ಲೊವೆನ್ಸ್ ಪಡೆಯುತ್ತಾನೆ.

UPON RECOVERY he resumes paying the Quarterly premiums as they become due.

ಸುಖವಾದ ನಂತರ ಅವನು ಕಂತುಗಳನ್ನು ವಾಯಿದೆ ಪ್ರಕಾರ ಕಟ್ಟಬಹುದು.

The premiums waived and the monthly allowance paid during total disability period, are not deducted from the sum assured at the time of settlement.

ಹಣವನ್ನು ಪಾವತಿ ಮಾಡುವಾಗ ಕಂತು ನಿಲ್ಲಿಸಿದುದಕ್ಕಾಗಿಯಾಗಲೀ, ಮಾಸಂಪ್ರತಿ ಎಲ್ಲೊವೆನ್ಸ್ ಕೊಟ್ಟುದ್ದಕ್ಕಾಗಿಯಾಗಲೀ ಯಾವ ಹಣವನ್ನೂ ಕಳೆದು ಕೊಡುವುದಿಲ್ಲ-ಸಂಪೂರ್ಣ ರೂ. 10,000ವನ್ನು ಕೊಡಲಾದೀತು.

*Chairman:*—HON'BLE SIR HORMUSJI M. METHA.

# Zenith Life Assurance Company, Ltd.

| | | |
|---|---|---|
| Bunder,<br>Mangalore. | Armenian Street,<br>Madras. | South Raja Street.<br>Tuticorin. |

# Government Soap Factory,

BANGALORE.

## ವಿಶ್ವಾಸಾರ್ಹತೆ.

ಅತ್ಯುಚ್ಛವಾದ ಟೊಯಿಲೆಟ್ ಸಾಬೂನಿನಲ್ಲಿ ಏನೆಲ್ಲ
ಗುಣಗಳು ಆವಶ್ಯಕವೆಂದು ನೀವು ತಿಳಿಯುತ್ತೀರೋ
ಆ ಗುಣಗಳೆಲ್ಲಾ

**ಮೈಸೂರು ಸೇಂಡಲ್ ಸಾಬೂನಿನಲ್ಲಿವೆ.**

ನಾವು ನಿಮಗೆ ಭರವಸೆವನ್ನೀಯುತ್ತೇವೆ.

ಎಲ್ಲಾ ಕಡೆಗಳಲ್ಲೂ ದೊರೆಯುತ್ತದೆ.

## ಗವರ್ನಮೆಂಟ್ ಸೋಪ್ ಫೆಕ್ಟರಿ,

ಬೆಂಗಳೂರು.


Printed by V. S. Kudva at the Sharada Press, Mangalore and published by Mangalore Jarappa at the Badavara Bandhu Office, Hampankatta, Mangalore